ಸಂಕಲನ

೨೩

ವರ್ಷ ೪

ಸಪ್ಟಂಬರ್ + ಅಕ್ಟೋಬರ್ ೨೦೦೫

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

ಸಂಕಲನ : ಸಪ್ಟಂಬರ್ + ಅಕ್ಟೋಬರ್ ೨೦೦೫
ಸಂಪುಟ ೪, ಸಂಚಿಕೆ ೫
ಸಂಪಾದಕರು : **ಸಿದ್ಧಲಿಂಗ ಪಟ್ಟಣಶೆಟ್ಟಿ + ಹೇಮಾ ಪಟ್ಟಣಶೆಟ್ಟಿ**

●

ಬಸವರಾಜ ಚಿಕ್ಕನರಗುಂದ, ಎಂ. ಡಿ. ಗೋಗೇರಿ,
ಜಿ. ಕೆ. ರವೀಂದ್ರಕುಮಾರ್, ರೇಣುಕಾ ಕೋಡಗುಂಟಿ,
ಮಮತಾ ಜಿ. ಸಾಗರ, ರಾಗಿಣಿ ಆರ್.,
ಎಂ. ಡಿ. ಒಕ್ಕುಂದ, ವಿನಯಾ,
ಶ್ರೀನಿವಾಸ ಹಾವನೂರ, ಜಿ. ಭಾಸ್ಕರ ಮಯ್ಯ,
ಜಂಬಣ್ಣ ಅಮರಚಿಂತ, ಷ. ಶೆಟ್ಟರ್, ಪ್ರಸನ್ನ,
ಲಕ್ಕೂರು ಸಿ. ಆನಂದ, ಶ್ರೀನಿವಾಸ್ ವಿ. ಸುತ್ರಾವೆ

●

ಚಂದ್ರಶೇಖರ ವಸ್ತ್ರದ, ಬಸವರಾಜ ವಕ್ಕುಂದ, ಶಿವಾನಂದ ಶೆಟ್ಟರ,
ನಾ. ದಾಮೋದರ ಶೆಟ್ಟಿ, ಅಶೋಕ ಶೆಟ್ಟರ್, ಶಶಿಧರ ತೋಡಕರ

●

ತೋಂಟದ ಸಿದ್ಧಲಿಂಗ ಸ್ವಾಮಿಗಳು,
ಗುರುಮೂರ್ತಿ ಪೆಂಡಕೂರು, ಎಚ್. ಎಸ್. ಪಾಟೀಲ,
ವೆಂಕಟೇಶ ಕುಲಕರಣಿ, ಎ. ಡಿ. ನಂಜುಂಡಸ್ವಾಮಿ, ಆನಂದ ಕುಲಕರ್ಣಿ
ಸಂಗಮೇಶ ಆರ್. ಗುರವ, ಎಂ. ಡಿ. ಗೋಗೇರಿ, ಲಲಿತಾ ಸಿದ್ದಬಸವಯ್ಯ
ಎಚ್. ಆನಂದರಾಮ ಶಾಸ್ತ್ರೀ, ಆರ್. ಎಮ್. ಗಿರ್ಜಿ, ಜಿ. ಹೆಚ್. ಪ್ರಸಾದ್,
ಮಲ್ಲೇಪುರಂ ಜಿ. ವೆಂಕಟೇಶ, ಬಿ. ಆರ್. ರವಿಕಾಂತೇಗೌಡ

●

ಸಿದ್ಧಲಿಂಗ ಪಟ್ಟಣಶೆಟ್ಟಿ

●

ಸಂಕಲನ ಪ್ರಕಾಶನ
ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪

ಸಂಕಲನ

ಸಪ್ಟಂಬರ್ + ಅಕ್ಟೋಬರ್ ೨೦೦೫

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ

ಧಾರವಾಡ - ೫೮೦ ೦೦೪

R N I No. KARKAN 14160 / 10 / 1 / 2002 - TC

SANKALANA :

A Kannada Literary Magazine

Volume 4, Issue 5 : September + October 2005

Edited by Dr. Siddhaling Pattanshetti

Hoomane, Shridevinagar, Vidyagiri, Dharwad - 580 004

Printed by Saraswati Offset Printers, Shivaji Road, Dharwad - 580 001

•

•

•

ಸಂಕಲನ - ೨೩

ಸಂಪುಟ ೪, ಸಂಚಿಕೆ ೫ : ಸಪ್ಟಂಬರ್ + ಅಕ್ಟೋಬರ್ ೨೦೦೫

ಸಂಪಾದಕರು : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತು ಡಾ. ಹೇಮಾ ಪಟ್ಟಣಶೆಟ್ಟಿ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪

✆ : ೦೮೩೬-೨೪೬ ೨೭೧೮

•

ಸಂಕಲನದಲ್ಲಿ ಪ್ರಕಟವಾದ ಲೇಖನಗಳಲ್ಲಿ ವ್ಯಕ್ತವಾದ

ಅಭಿಪ್ರಾಯಗಳ ಹೊಣೆ, ಹಕ್ಕು ಆಯಾ ಲೇಖಕರವು.

•

೨೦೦೫ ರಿಂದ ಒಟ್ಟು ೩ ವರ್ಷಗಳ ಚಂದಾ ರೂ. ೫೦೦/- (ಚೆಕ್ ೫೫೦/-)

ವಾರ್ಷಿಕ ಚಂದಾ ರೂ. ೨೦೦/- (ಚೆಕ್ ೨೨೦/-)

•

ಡಿಟಿಪಿ : ಬಿಜಿಗ್ರಾಫಿಕ್ಸ್, ೧ನೇ ಕ್ರಾಸ್, ಜೋಶಿ ಫಾರ್ಮ್, ಧಾರವಾಡ - ೫೮೦ ೦೦೮

ಮೊಬೈಲ್ : ೯೪೪೮೮ ೩೭೮೧೮

ಸಂಪಾದಕರ ಮಾತು

ಖಿತಾ ಒಂದು ಉರ್ದೂ ಛಂದೋರೂಪ. ಕೆಲವರು ಕತಾ ಎಂದೂ ಉಚ್ಚರಿಸುತ್ತಾರೆ. ಇದು ಮೂಲ ಅರಬೀ ಶಬ್ದ. ಒಂದು ತುಂಡು, ಭಾಗ, ಹಿಸ್ಸೆ ಎಂದು ಅರ್ಥ. ಖಿತಾತ್ ಬಹುವಚನ ರೂಪ. ಒಂದು ಖಿತಾದಲ್ಲಿ ಕನಿಷ್ಠ ಎರಡು ಚಿಕ್ಕ ಚಿಕ್ಕ ಶೇರ್-ದ್ವಿಪದಿ-ಗಳಿರುತ್ತವೆ. ಹೆಚ್ಚು ಬೇಕಾದಷ್ಟಿರಬಹುದು. ಖಿತಾದಲ್ಲಿ ಸಾಮಾನ್ಯವಾಗಿ ಯಾವುದಾದರೂ ಒಂದು ಕಿರು ಪ್ರಸಂಗ ಅಥವಾ ಘಟನೆಯ ಉಲ್ಲೇಖದೊಂದಿದೆ ಭಾನೋನ್ಮೇಷ ಮಾಡಲಾಗುತ್ತದೆ. ಮಿರ್ಜಾ ಗಾಲಿಬ್ ರಚಿಸಿದ ಖಿತಾಗಳು ಬಹಳ ಪ್ರಸಿದ್ಧ.

ಸ್ವಲ್ಪ ಮಟ್ಟಿಗೆ ಗಜಲ್‌ಗೆ ಹತ್ತಿರವಾಗಿರುವ ಇಂಥ ಖಿತಾಗಳನ್ನು ಜಂಬಣ್ಣ ಅಮರಚಿಂತ ರಚಿಸಿದ್ದಾರೆ. ಸಂಕಲನದ ಈ ಸಂಚಿಕೆಯಲ್ಲಿ ಅವನ್ನು ಪ್ರಕಟಿಸುತ್ತಿದ್ದೇವೆ.

ಅಬ್ದುಲ್ ಮಜೀದ್ ಖಾನ್, ಶಾಂತರಸ, ಚಂದ್ರಕಾಂತ ಕುಸನೂರ, ಇಟಗಿ ಈರಣ್ಣ, ಮುಕ್ತಾಯಕ್ಕ ಮುಂತಾದವರು ಆರಂಭದ ದಿನಗಳಲ್ಲಿ ಇಂಥ ಉರ್ದೂ ಛಂದೋರೂಪಗಳನ್ನು ಕನ್ನಡಕ್ಕೆ ತರಲು ಶ್ರಮಿಸಿದ್ದಾರೆ. ಇತ್ತೀಚೆಗೆ ಅನೇಕ ಕವಿಗಳು ಇಂಥ ಪ್ರಯೋಗಗಳಲ್ಲಿ ತೊಡಗಿದ್ದಾರೆ. ಒಂದು ಭಾಷೆಗೆ ಹೊಂದಿದ ಚೌಕಟ್ಟು ಇನ್ನೊಂದು ಭಾಷಾ ಸ್ವರೂಪಕ್ಕೆ ಸಾಮಾನ್ಯವಾಗಿ ಒಗ್ಗುವುದು ಕಠಿನ. ಆದರೂ ಗಜಲ್, ರುಬಾಯಿ ಮುಂತಾದುವು ಇತ್ತೀಚಿಗೆ ನಮ್ಮ ಕಿವಿಗೆ ಬಿದ್ದಿವೆ, ಕಣ್ಣಿಗೆ ಕಟ್ಟಿವೆ. ಅವೂ ನಮ್ಮ ಪಕ್ಕದ ಮನೆಯ ರಸಸ್ಥಾನಗಳಂತೆ ಕಾಣತೊಡಗಿವೆ.

ಇದೇ ರೀತಿ ಇಂಗ್ಲಿಶಿನ ಸಾನೆಟ್ ಕನ್ನಡಕ್ಕೆ ಬಂದು ಅತ್ಯಂತ ಆಪ್ತವಾಗಿ ನಮ್ಮ ಕವಿಗಳನ್ನು ಆಕರ್ಷಿಸಿತು. ನವೋದಯ ಕಾಲದಲ್ಲಿ ಮಾಸ್ತಿ, ಕುವೆಂಪು ಮುಂತಾದವರಿಂದಲೇ ಪುರಸ್ಕೃತಗೊಂಡ ಸಾನೆಟ್‌ನ ಜೊತೆಗೆ ಇತರ ಕೆಲವು ಛಂದೋರೂಪಗಳು ಪ್ರಯೋಗಗೊಂಡರೂ ಅವು ಸಾನೆಟ್‌ನಷ್ಟು ಸುನೀತಗೊಳ್ಳಲಿಲ್ಲ. ಯಾವುದೇ ಭಾಷೆ, ಸಾಹಿತ್ಯ, ಸಂಸ್ಕೃತಿ ನಿಂತ ನೀರಾಗದಂತೆ ನೋಡಿಕೊಳ್ಳುವುದು ಆ ಭಾಷಾ ಬಾಂಧವರ ಆದ್ಯ ಪ್ರೀತಿಯಾಗಬೇಕು. ಅಲ್ಲಿ ಯಾವುದೇ ರೀತಿಯ ಕೀಳರಿಮೆಗೆ, ಅಹಂಕಾರಕ್ಕೆ, ಮಡಿವಂತಿಕೆಗೆ ಅವಕಾಶವಿರಬಾರದು. ಆ ದೃಷ್ಟಿಯಿಂದ ನಮ್ಮಲ್ಲಿ ನಮ್ಮ ಅಕ್ಕಪಕ್ಕದಲ್ಲೇ ಇರುವ ತಮಿಳು, ತೆಲುಗು, ಮಲಯಾಳಮ್, ಮರಾಠೀ ಮುಂತಾದ ಭಾಷೆಗಳಲ್ಲಿರುವ, ಕನ್ನಡದ ಪ್ರಕೃತಿಗೆ ಒಗ್ಗುವಂಥ ಛಂದೋರೂಪಗಳನ್ನು ತರಲು ಉಭಯ ಭಾಷಾವಿಶಾರದ ಕವಿಗಳು ಯತ್ನಿಸಬೇಕು. ಇದರಿಂದ ಲಾಭ-ಪ್ರಯೋಜನ ನಮ್ಮ ಭಾಷೆಗೇ. ಇಂಥ ಪ್ರಯತ್ನ ಖಂಡಿತ ಎರವಲು ಅಲ್ಲ, ಅದು ಮೇಲೆ ಮೇಲೆ ಏರಲು ಕವಿಗಳಿಗೆ ಆಹ್ವಾನ, ಭಾಷಾ-ಸಂಸ್ಕೃತಿಗೆ ಆದಾನ-ಪ್ರದಾನದ ಸಂತುಷ್ಟಿ.

ಹೀಗೆಯೇ ಕನ್ನಡದ ಷಟ್ಪದಿ, ತ್ರಿಪದಿಗಳಂಥ ಜನಪ್ರಿಯ ಛಂದೋರೂಪಗಳು ಇತರ ಭಾಷೆಗಳಿಗೆ ಹೋಗಬೇಕು.

೧ ಸಪ್ಟಂಬರ್ ೨೦೦೫
ಹೂಮನೆ, ಧಾರವಾಡ-೪

ಸಿದ್ಧಲಿಂಗ ಪಟ್ಟಣಶೆಟ್ಟಿ
ಹೇಮಾ ಪಟ್ಟಣಶೆಟ್ಟಿ

ಪರಿವಿಡಿ

೧. ನನ್ನ ಶಾಲಾ ಗುರುಗಳು : ಲೇಖನ-೫ : *ಬಸವರಾಜ ಚಿಕ್ಕನರಗುಂದ* ೫ - ೯

೨. ನನ್ನ ಗುರುಗಳು : ಲೇಖನ-೬ : *ಎಂ. ಡಿ. ಗೋಗೇರಿ* ೧೦ - ೧೯

೩. ಮೂರು ಕವಿತೆಗಳು : *ಜಿ. ಕೆ. ರವೀಂದ್ರಕುಮಾರ್* ೧೯ - ೨೧

೪. ಎಲ್ಲರೂ ಯಾರೂ : *ರೇಣುಕಾ ಕೋಡಗುಂಟಿ* ೨೧

೫. ಆರು ಕವಿತೆಗಳು : *ಮಮತಾ ಜಿ. ಸಾಗರ* ೨೨ - ೨೩

೬. ನಮ್ಮಮ್ಮಪ್ಪ : ಲೇಖನ-೨೨ : *ರಾಗಿಣಿ ಆರ್.* ೨೪ - ೩೧

೭. ಹೊಗೆವಿಮಾನ : *ಎಂ. ಡಿ. ಒಕ್ಕುಂದ* ೩೧ - ೩೨

೮. ಎಲ್ಲ ಮರೆತು, ಮತ್ತೆ ಅನ್ನಕ್ಕೆ... : *ವಿನಯಾ* ೩೨ - ೩೩

೯. ಆದ್ಯ ಮರಾಠೀನಾಟಕಕಾರ ಮತ್ತು ಯಕ್ಷಗಾನ : *ಶ್ರೀನಿವಾಸ ಹಾವನೂರ* ೩೪ - ೩೯

೧೦. ಏಳು ಹಿಂದೀ ಕವಿತೆಗಳು : *ಜಿ. ಭಾಸ್ಕರ ಮಯ್ಯ* ೩೯ - ೪೪

೧೧. ಅಯ್ದು ಖಿತಾಗಳು : *ಜಂಬಣ್ಣ ಅಮರಚಿಂತ* ೪೪

೧೨. ಕವಿರಾಜಮಾರ್ಗ ಮಂಥನ : ಲೇಖನಮಾಲೆ-೬ : *ಷ. ಶೆಟ್ಟರ್* ೪೫ - ೫೬

೧೩. ಜನಾನುರಾಗವೂ ರಂಗಭೂಮಿಯೂ : *ಪ್ರಸನ್ನ* ೫೭ - ೫೯

೧೪. ಎರಡು ಕವಿತೆಗಳು : *ಲಕ್ಕೂರು ಸಿ. ಆನಂದ* ೫೯ - ೬೧

೧೫. ಸಿ ಡಿ ಎನ್ : ಒಂದು ಮಧುರ ನೆನಪು : *ಶ್ರೀನಿವಾಸ್ ವಿ. ಸುತ್ರಾವೆ* ೬೨ - ೬೫

೧೬. **ಪುಸ್ತಕ ಪರಿಶೀಲನೆ :** ೬೬ - ೭೬

೧. ಮಾಗಿಯ ಕೋಗಿಲೆ : ಸುಬ್ರಾಯ ಚೊಕ್ಕಾಡಿ —*ಚಂದ್ರಶೇಖರ ವಸ್ತ್ರದ*

೨. ಬಕುಲದ ದಾರಿ : ಎಲ್. ಸಿ. ಸುಮಿತ್ರಾ —*ಬಸವರಾಜ ವಕ್ಕುಂದ*

೩. ದೊಡ್ಡ ಬೆಟ್ಟದ ನೋಟ, ೪. ದೊಡ್ಡ ಬೆಟ್ಟದಿಂದ ಇನ್ನಷ್ಟು ನೋಟಗಳು : ಎಚ್. ವಿ. ನಾಗೇಶ್ —*ಶಿವಾನಂದ ಶೆಟ್ಟರ*

೫. ತೆರೆಮರೆ : ರಾಮಕೃಷ್ಣ ಮರಾಠೆ —*ನಾ. ದಾಮೋದರ ಶೆಟ್ಟಿ*

೬. ಸೋಮಣ್ಣನ ಸ್ಟಾಕ್‌ನಿಂದ : ಎಚ್.ಜಿ.ಸೋಮಶೇಖರ ರಾವ್ —*ಅಶೋಕ ಶೆಟ್ಟರ್*

೭. ಜನಪದ ಕಥನ ಗೀತೆಗಳು : ಸಂ. ಪಿ. ಕೆ. ಖಂಡೋಬಾ, ಟಿ. ಎಂ. ಭಾಸ್ಕರ್,

೮. ವಿರಾಟಪರ್ವಸಂಗ್ರಹ : ಸಂ. ಎಚ್. ಡಿ. ಪೋತೆ, ಚನ್ನಬಸವ,

೯. ರಾಮಚಂದ್ರಚರಿತ ಪುರಾಣ ಸಂಗ್ರಹ : ಸಂ. ಶಾಂತಿನಾಥ ದಿಬ್ಬದ, ಎಸ್. ಶಿವಾನಂದ ಹಿರೇಮಠ —*ಶಶಿಧರ ತೋಡಕರ*

೧೭. ಸಂಕಲನ : ಅನಿಸಿಕೆ : ೭೬ - ೭೮

೧೮. ಕಡೇಪುಟ : *ಸಿದ್ಧಲಿಂಗ ಪಟ್ಟಣಶೆಟ್ಟಿ* ೭೯ - ೮೦

ನನ್ನ ಶಾಲಾ ಗುರುಗಳು

ಬಸವರಾಜ ಚಿಕ್ಕನರಗುಂದ

ನೆನಪು ಕಹಿಯಲ್ಲವೆಂದು ಬಲ್ಲವರು ಹೇಳುತ್ತಾರೆ. ಅದು ಅನುಭವಪೂರ್ಣವಾದ ಸತ್ಯ. ಜೀವನದ ಸಂಗ್ರಾಮದಲ್ಲಿ ಘಾಸಿಗೊಳ್ಳುವದೂ ಉಂಟು; ಮಗಮಗಿಸುವ ಮಲ್ಲಿಗೆಯ ಕಂಪನ್ನು ಆಘ್ರಾಣಿಸಿದಷ್ಟು ಸಂತಸಪಡುವದೂ ಉಂಟು. ಆದರೆ, ಬಾಳ ದಾರಿಯಲ್ಲಿ ದೂರ ಸಾಗಿದಂತೆಲ್ಲ ಹಿಂದಿರುಗಿ ನೋಡಿದಾಗ ಎಲ್ಲವೂ ಮಧುರವಾಗಿಯೇ ಪರಿಣಮಿಸುವದು. ಇನ್ನು ವಿದ್ಯಾರ್ಥಿ ಜೀವನವನ್ನು ನೆನಪಿಸಿಕೊಳ್ಳುವದಂತೂ ಸುರಮ್ಯವಾದ ಸ್ವಪ್ನಲೋಕದಲ್ಲಿ ವಿಹರಿಸಿದಂತೆ, ಲಂಗುಲಗಾಮಿಲ್ಲದೇ ಎತ್ತ ಬೇಕತ್ತ ಓಡುವ ಮನಸ್ಸಿಗೆ, ಬುದ್ಧಿಗೆ ಶಿಕ್ಷಣವನ್ನು, ಸಂಸ್ಕಾರವನ್ನು ಕೊಟ್ಟು ಬಾಳಿಗೆ ಬೆಳಕನ್ನು ತೋರಿದ ಶಾಲಾಗುರುಗಳು ಚಿರಸ್ಮರಣೀಯರು. ಅವರನ್ನು ನೆನೆದಾಗಲೆಲ್ಲ ರೋಮಾಂಚನಗೊಳ್ಳುತ್ತೇನೆ.

ಇಂದಿನ ಗದಗ ಜಿಲ್ಲೆಯ ನರಗುಂದ ತಾಲೂಕಿಗೆ ಸೇರಿದ ನೂರು ಮನೆಗಳ ಒಂದು ಸಣ್ಣ ಹಳ್ಳಿ 'ಕಪ್ಪಲಿ' ನನ್ನೂರು. ನಾನು ಹೇಳಹೊರಟಿರುವದು ಆರೂವರೆ ದಶಕಗಳ ಹಿಂದಿನ ಸಂಗತಿ. ಅದು ಏಕೋಪಾಧ್ಯಾಯ ಶಾಲೆ. ನಾಲ್ಕನೆಯ ಇಯತ್ತೆಯ ವರೆಗೆ ಕಲಿಸುವ ವ್ಯವಸ್ಥೆ ಇತ್ತು. ನಾನು ಶಾಲೆಗೆ ಸೇರಿದಾಗ ಶ್ರೀ ಗುರಪ್ಪ ಉಮಚಗಿ ಎನ್ನುವವರು ಶಿಕ್ಷಕರಾಗಿದ್ದರು. ಅವರು ಅಂಗವಿಕಲರು. ಅದೇನು ಕಾರಣವೋ, ಅವರದೊಂದು ಕಾಲು ಚಿಕ್ಕಂದಿನಲ್ಲಿಯೇ ಶಕ್ತಿಹೀನವಾಗಿತ್ತು. ಅದನ್ನು ಅವರು ಲೆಕ್ಕಕ್ಕೆ ಹಿಡಿಯುತ್ತಲೇ ಇರಲಿಲ್ಲ. ಅಂಥ ಇಚ್ಛಾಶಕ್ತಿ. ಧೋತರ, ಶರ್ಟು, ಮೇಲೊಂದು ಕೋಟು, ತಲೆಗೆ ಕೆಂಪು ಜರೀ ರುಮಾಲು, ಕೈಯಲ್ಲಿ ಬೆತ್ತ ಹಿಡಿದು ಹೊರಟರೆ ಸಾಕು, ನೋಡಿದವರಲ್ಲಿ ಗೌರವ ಭಾವನೆ ತಾನಾಗಿಯೇ ಮೂಡಬೇಕು.

ಬೆಳಿಗ್ಗೆ ಏಳೂವರೆ ಘಂಟೆಗೆ ಶಾಲೆ ಪ್ರಾರಂಭ. ಸರಿಯಾದ ವೇಳೆಗೆ ಬರುತ್ತಿದ್ದರು. ಬಾಯಿಲೆಕ್ಕ, ಮಗ್ಗಿ, ನಂತರ ಕವಿತೆಯನ್ನು ಬಾಯಿಪಾಠ ಮಾಡಿ ಒಪ್ಪಿಸುವದು– ಮುಂತಾದವು ನಡೆಯುತ್ತಿದ್ದವು. ತಪ್ಪಿದರೆ ಧರ್ಮದೇಟು, ಹೊಂಗೆ ಮರದ ಇಲ್ಲವೆ ಹುಣಸೆಮರದ ಬರಲು ಸಿದ್ಧವಾಗಿಯೇ ಇರುತ್ತಿತ್ತು. ಒಂದೊಂದು ಸಲ ಸರಿಯಾದ ಉತ್ತರ ಹೇಳಿದವರಿಂದ ಲೆಕ್ಕ ತಪ್ಪಿದವರಿಗೆ ಕಪಾಳಮೋಕ್ಷ. ಶಾಲೆಗೆ ಸ್ವಂತ ಕಟ್ಟಡವಿರಲಿಲ್ಲ. ಬಸವಣ್ಣ ದೇವಸ್ಥಾನವೇ ಶಾಲೆ. ಗುರುಗಳ ಹೊಡೆತಕ್ಕೆ ಪ್ರತಿದಿನ ಏನಿಲ್ಲವೆಂದರೂ ಮೂರು ನಾಲ್ಕು ಜನ ವಿದ್ಯಾರ್ಥಿಗಳು ಚೊಣ್ಣ ತೋಯಿಸಿಕೊಂಡು, ಸ್ವಚ್ಛವಾಗಿ ಬರಲು ಮನೆಗೆ ಓಡಿಹೋಗುತ್ತಿದ್ದರು. ಛಡಿ ಚಮ್ ಚಮ್, ವಿದ್ಯಾ ಗಮ್ ಗಮ್ ಎಂಬ ಮಾತು ಆಗ ಬಹಳ ಪ್ರಚಲಿತವಿತ್ತು. ಸರಿಯಾಗಿ ಮನೆಪಾಠ ಮಾಡಿಕೊಂಡು ಬಂದು, ಶಾಲೆಯಲ್ಲಿ ಅವರು ಕೇಳುವ ಎಲ್ಲ ವಿಷಯಗಳನ್ನು ತಪ್ಪದಂತೆ ಒಪ್ಪಿಸಬೇಕು. ಅಲ್ಲಿಯ ವರೆಗೂ ಅವರು ಬಿಡುತ್ತಲೇ ಇರಲಿಲ್ಲ. ಅವರಿಗೆ ಬೀಡಿ ಸೇದುವ ಚಟವಿತ್ತು. ವಿದ್ಯಾರ್ಥಿಗಳ ಕಣ್ಣಿಗೆ ಕಾಣದಂತೆ ಪಕ್ಕದಲ್ಲಿದ್ದ ಚಾವಡಿಗೆ ಹೋಗಿ, ಬೀಡಿ ಸೇದಿ ಬರುತ್ತಿದ್ದರು. ಒಂದೇ ಒಂದು ಸಲವೂ ವಿದ್ಯಾರ್ಥಿಗಳ ಎದುರಿನಲ್ಲಿ ಬೀಡಿ ಸೇದುತ್ತಿರಲಿಲ್ಲ.

ನಮ್ಮೂರಿನ ಪೂರ್ವಕ್ಕೆ ಒಂದು ಮೈಲು ಅಂತರದಲ್ಲಿ ಶಿರೋಳ ಗ್ರಾಮದಲ್ಲಿ ಅವರ ಮನೆಯಿತ್ತು. ಭಾನುವಾರ ಅವರ ಮನೆಯನ್ನು ಸಗಣೆಯಿಂದ ಸಾರಿಸಿ ಬರಲು ವಾರಕ್ಕೊಮ್ಮೆ

ಇಬ್ಬರು ಹುಡುಗರಂತೆ ಹೋಗುತ್ತಿದ್ದೆವು. ಕೆಲಸ ಮುಗಿಸಿ ಬರುವಾಗ ಎರಡಾಣೆ ಕೊಟ್ಟು ಕಳಿಸಲು ಅವರು ಮರೆಯುತ್ತಿರಲಿಲ್ಲ. ಆಗಿನ ಕಾಲದಲ್ಲಿ ಎರಡಾಣೆಯಲ್ಲಿ ಇಬ್ಬರು ಹುಡುಗರು ತೃಪ್ತಿಯಾಗುವಷ್ಟು ತಿಂಡಿ ತಿನ್ನಬಹುದಿತ್ತು. ತಿಂದು ತೃಪ್ತಿಯಿಂದ ಬರುತ್ತಿದ್ದೆವು. ಅಂಥ ಸೋವಿಯ ಕಾಲವದು. ಪ್ರತಿಯೊಬ್ಬ ವಿದ್ಯಾರ್ಥಿ, ವಿದ್ಯಾರ್ಥಿನಿಯ ಬಗ್ಗೆ ಅವರು ತೋರುತ್ತಿದ್ದ ಕಾಳಜಿ ಅನನ್ಯವಾದದ್ದು. ಶಾಲೆ ಬಿಟ್ಟ ನಂತರ ಹಳ್ಳಿಯ ಜನರ ಕೌಟುಂಬಿಕ, ಸಾಮಾಜಿಕ, ತಂಟೆ ತಕರಾರುಗಳನ್ನು ವಿಚಕ್ಷಣತೆಯಿಂದ ಬಗೆಹರಿಸುತ್ತಿದ್ದ ಅವರ ವ್ಯಾವಹಾರಿಕ ತಿಳಿವಳಿಕೆ, ನಡೆವಳಿಕೆ ಎಂಥವರಿಗೂ ಸಮಾಧಾನ ತರುತ್ತಿತ್ತು. ಅವರು ನಮ್ಮೂರಿನ ಜನರ ಪಾಲಿಗೆ ಅಮೂಲ್ಯ ಆಸ್ತಿಯಂತಾಗಿದ್ದರು. ವಿದ್ಯಾರ್ಥಿಗಳ ಬಗ್ಗೆ ಅವರು ಪಡುತ್ತಿದ್ದ ಶ್ರಮ, ತೋರುತ್ತಿದ್ದ ಅಂತಃಕರಣ ಮರೆಯಲಾರದ ಮಧುರ ಸ್ಮೃತಿ.

ಉತ್ತಮ ರೀತಿಯಲ್ಲಿ ನಾಲ್ಕನೆಯ ತರಗತಿಯನ್ನು ಮುಗಿಸಿ ಐದನೆಯ ತರಗತಿಗೆ ಶಿರೋಳ ಶಾಲೆಗೆ ಸೇರಿದೆ. ಅಲ್ಲಿ ಏಳನೆಯ ತರಗತಿಯ ವರೆಗೆ ಓದಲು ಅವಕಾಶವಿತ್ತು. ಐದನೆಯ ತರಗತಿಯನ್ನು ಶಂಕರಗೌಡ ಸಂಕನಗೌಡ್ರ ಶಿಕ್ಷಕರು ಕಲಿಸುತ್ತಿದ್ದರು. ಅವರು ಕೋಪದಲ್ಲಿ ದುರ್ವಾಸಮುನಿ, ದೇಹಾಕೃತಿಯಲ್ಲಿ ಭೀಮಸೇನ; ವಿದ್ಯಾರ್ಥಿಗಳನ್ನು ಥಳಿಸುವದರಲ್ಲಿ ತಬಲಾ ಪಟುವಿನ ಕೈಚಳಕ. ಪ್ರತಿಯೊಂದು ವಿಷಯವನ್ನು ಮನಮುಟ್ಟುವಂತೆ ಪಾಠ ಮಾಡುವದರಲ್ಲಿ ನಿಷ್ಣಾತರು. ಆದರೇನು? ಐದೂ ಬೆರಳು ಸಮಾನವಿಲ್ಲವಲ್ಲ? ಒಂದು ಸಲ ಹೇಳಿದರೆ ಸಾಕು, ಸರಿಯಾಗಿ ಗ್ರಹಿಸುವ ವಿದ್ಯಾರ್ಥಿಗಳೂ ಇದ್ದರು. ಉಳಿದವರ ಗತಿ? ಆ ಶಂಕರ(ಗೌಡ)ನೇ ಬಲ್ಲ, ಅವರ ಹೊಡೆತಕ್ಕೆ ತತ್ತರಿಸಿ ಮನೆಯಲ್ಲಿ ತಂದೆ ತಾಯಿಯ ಮುಂದೆ ಹೇಳಿದರೆ "ಅವರು ಬಾಳ ಚಲೋ ಮಾಸ್ತರು, ನೀನು ಸರಿಯಾಗಿ ಅಭ್ಯಾಸ ಮಾಡು, ತಪ್ಪಿದ್ರ ಬಡಿತಾರ ಹೋಗು" ಎನ್ನುತ್ತಿದ್ದರು. ಅಪೀಲೇ ಇರಲಿಲ್ಲ. ಅನಿವಾರ್ಯವಾಗಿ ಹೊಂದಿಕೊಂಡು ಹೋಗಬೇಕಾಗಿತ್ತು. ಆದರೆ ಅವರು ಕಲಿಸುವ ವರ್ಗದಲ್ಲಿ ಎಲ್ಲರೂ ಉತ್ತಮ ರೀತಿಯಲ್ಲಿಯೇ ತೇರ್ಗಡೆ ಹೊಂದುತ್ತಿದ್ದರು.

ಅವರಿಗೆ ಸಂಬಂಧಿಸಿದಂತೆ ಒಂದು ಪ್ರಸಂಗವನ್ನು ಹೇಳಲೇಬೇಕು. ಏನೆಂದರೆ, ಅವರ ಧರ್ಮಪತ್ನಿ ಒಂದು ಸಲ, ಒಂದು ವಾರ ಕಾಲ ತವರಿಗೆ ಹೋಗಿದ್ದರು. ನನ್ನ ಗೆಳೆಯ, ನಮ್ಮ ಪಕ್ಕದ ಮನೆಯ ಹಿರೇಮಠದ ಶಿವಲಿಂಗಯ್ಯ ಹಾಗೂ ನಾನು ಉಳಿದವರಿಗಿಂತ ಬಲಶಾಲಿಗಳು. ಹೀಗಾಗಿ ಆ ಒಂದು ವಾರ ಕಾಲ ನಾವು ಬೆಳಗ್ಗೆ ಅವರ ಮನೆಗೆ ಹೋಗಿ ಮನೆಯ ಕಸ ಗುಡಿಸಿ, ತಲಾ ಒಂದೊಂದು ಕೊಡ ನೀರನ್ನು, ಊರಿಂದ ಒಂದು ಮೈಲು ದೂರದಲ್ಲಿ ಹರಿಯುತ್ತಿರುವ ಮಲಪ್ರಭಾ ನದಿಗೆ ಹೋಗಿ ತರಬೇಕು. ಒಂದು ದಿನ ಕಸ ಗುಡಿಸುವಾಗ ಶಿವಲಿಂಗಯ್ಯ ಕೆಳಗಿಟ್ಟಿದ್ದ ಡಬ್ಬಿಯ ಮುಚ್ಚಳಿಕೆ ತೆರೆದ. ಅದರಲ್ಲಿ ಕರಚೀಕಾಯಿ ಇದ್ದವು. "ಲೇ, ಚಿಕ್ಯಾ, ನೋಡ ಬಾರಲೆ ಇಲ್ಲೆ" ಎಂದು ಹುರುಪಿನಿಂದ ಕರೆದ. ಹೋಗಿ ನೋಡಿದೆ, ಜೀವ ತಡೆಯಲಿಲ್ಲ. ಆತ ಮೂರು, ನಾನು ಎರಡು ಕರಚೀಕಾಯಿ ತಿಂದೆವು. ಒಂದು ಬುಟ್ಟಿಯಲ್ಲಿಟ್ಟಿದ್ದ ಗಜ್ಜರಿಯಲ್ಲೂ ತಲಾ ಎರಡೆರಡು ತೆಗೆದುಕೊಂಡು ತಿಂದು ಶಾಲೆಗೆ ಬಂದೆವು. ಅವರು ಪ್ರತಿಯೊಂದನ್ನು ಎಣಿಸಿಟ್ಟು ಬರುತ್ತಿದ್ದುದು ನಮಗೇನು ಗೊತ್ತು? ಎಷ್ಟಾದರೂ ಅವರು ಗಣಿತದಲ್ಲಿ ಪಾರಂಗತರಲ್ಲವೇ! ಮಧ್ಯಾಹ್ನ ಊಟ ಮಾಡಿ ಶಾಲೆಗೆ ಬರುವುದೊಂದೇ ತಡ. ಶಂಕರಗೌಡರ ಆರ್ಭಟ ಶುರುವಾಯಿತು. "ತಿನ್ನಲಿಕ್ಕೆ ಬೇಡ

ಎನ್ನುವುದಿಲ್ಲ. ನನಗೆ ಗೊತ್ತಿಲ್ಲದಂತೆ ಯಾಕೆ ತಿಂದಿರಿ? ತಿಂದ ಮೇಲಾದರೂ ನನಗೇಕೆ ಹೇಳಲಿಲ್ಲ?" ಎಂದು ಅಬ್ಬರಿಸಿದರು. ರೂಲು ದೊಣ್ಣೆಯಿಂದ ಬಾರಿಸಿದರು. ಅಂದು ಶುಕ್ರವಾರ, ಶುಭಮಂಗಲವಾಯಿತು. ಮರುದಿನ ಶನಿವಾರ ಶಾಲೆ ಒಪ್ಪತ್ತು. ಶಾಲೆ ಬಿಟ್ಟ ನಂತರ ನಮ್ಮಿಬ್ಬರನ್ನು ತಮ್ಮ ಜತೆಯಲ್ಲಿ ಅವರ ಮನೆಗೆ ಬರಲು ಹೇಳಿದರು. ಕೈಯಲ್ಲಿ ಜೀವ ಹಿಡಿದುಕೊಂಡು ಹೋದೆವು. ತೊಟ್ಟಿದ್ದ ಅಂಗಿ ಕಳೆದು ಕೈಕಾಲು ಮುಖ ತೊಳೆದುಕೊಂಡು ಬಂದು ನಮಗೂ ಅದರಂತೆ ಮಾಡಲು ಹೇಳಿದರು. ಅವರ ಧರ್ಮಪತ್ನಿ ಬಂದಿದ್ದರು. ಮೂವರಿಗೂ ಗಂಗಾಳ ಹಾಕಿಸಿದ್ದರು, ತಾವು ರೊಟ್ಟಿ ಹಾಕಿಸಿಕೊಂಡರು. ನಮಗೆ ಮಾತ್ರ ಗಂಗಾಳದಲ್ಲಿ ಹಿಡಿ ಹಿಡಿ ತುಂಬ ಕರಚೀಕಾಯಿ ಹಾಕಿಸಿ, ಸುಡುಸುಡು ಹಾಲು ತುಪ್ಪ ಹಾಕಿಸಿದರು. ಇತರ ವ್ಯಂಜನಗಳೂ ಇದ್ದವು. "ನಾಚಬ್ಯಾಡ್ರಲೇ ಮಕ್ಕಳಾ, ಸುಮ್ಮನ ಊಟಾ ಮಾಡ್ರಿ" ಎಂದು ಅಪ್ಪಣೆಯಾಯಿತು. ಅಂದು ತಿಂದ ಕರಚೀಕಾಯಿ ಕರಗಿ ಹೋಗಿವೆ, ಆ ನೆನಪು ಮಾತ್ರ ಕರಗಿ ಹೋಗಿಲ್ಲ. ಅವರ ವ್ಯಕ್ತಿತ್ವ, ಅದು ನಾರಿಕೇಳ ಪಾಕ.

ಆರಕ್ಕೆ ಏರಲಿಲ್ಲ, ಮೂರಕ್ಕೆ ಇಳಿಯಲಿಲ್ಲವೆನ್ನುವಂತೆ ಶ್ರೀ ನಾಯಕ ಗುರುಗಳಲ್ಲಿ ಒಂದು ವರ್ಷ ಕಳೆದು, ಕೊನೆಯ ವರ್ಷಕ್ಕೆ ಬಂದದ್ದಾಯಿತು. ನನ್ನ ಜೀವಮಾನದಲ್ಲಿಯೇ ಅಪರೂಪದವರೆನ್ನಬಹುದಾದ ಗುರುಗಳನ್ನು ಕಂಡೆ. ಅವರೇ ಶ್ರೀ ಅಂತಪ್ಪಯ್ಯ ಶ್ರೀಪಾದಯ್ಯ ಇನಾಮದಾರರು. ಋಷಿಸದೃಶ ಮೂರ್ತಿ. ಬೆಳಗಿನ ಜಾವ ಸಂಧ್ಯಾವಂದನೆ ಮುಗಿಸಿಕೊಂಡು, ಮಡಿ ಬಟ್ಟೆ ಹಾಕಿಕೊಂಡು ಕೈಯಲ್ಲಿ ಬೆತ್ತ ಹಿಡಿದು ಬಂದರೆ ದಾರಿಯಲ್ಲಿ ಎದುರಿಗೆ ಬರುವ ಎಲ್ಲರಿಂದಲೂ ಗೌರವ ಪಡೆಯುತ್ತ ಶಾಲೆಗೆ ಬರುತ್ತಿದ್ದರು. ಪ್ರತಿಯೊಂದು ವಿಷಯದ ಮೇಲೂ ಸಂಪೂರ್ಣ ಹಿಡಿತ. ಪಾಠ ಮಾಡುವ ಕಲೆಯಂತೂ ಅನನ್ಯ. ಗಣಿತ ಹಾಗೂ ಕನ್ನಡ ಭಾಷಾ ವಿಷಯಗಳಲ್ಲಿ ಬೆರಳು ಕಚ್ಚಬೇಕು ಅಂಥ ಪರಿಣತಿ, ರಾಘವಾಂಕನ ಹರಿಶ್ಚಂದ್ರ ಕಾವ್ಯ ಮತ್ತು ಗದುಗಿನ ನಾರಣಪ್ಪನ ಭಾರತ ಅವರ ಅಚ್ಚುಮೆಚ್ಚಿನ ಕೃತಿಗಳು. ವ್ಯಾಕರಣದ ಜ್ಞಾನ ಅತ್ಯಗತ್ಯವೆಂದು ಬಗೆದು ವಿದ್ಯಾರ್ಥಿಗಳಿಗೆ ಅದರಲ್ಲಿ ಆಸಕ್ತಿ ಹುಟ್ಟುವಂತೆ ಮಾಡಿದರು. ಪಂಡಿತ ಚೆ. ಎ. ಕವಲಿ ಹಾಗೂ ಪಂಡಿತ ಮ. ಪ್ರ. ಪೂಜಾರ ಅವರ ಸಾಹಚರ್ಯದಿಂದಾಗಿ ಹಳೆಗನ್ನಡ ಕಾವ್ಯಾಮೃತವನ್ನು ಮೊಗಮೊಗೆದು ಕುಡಿದಿದ್ದರು. ತಮ್ಮ ಮನೆಯಲ್ಲಿ ರಾತ್ರಿ ಉಚಿತವಾಗಿ ಟ್ಯೂಶನ್ ಹೇಳುತ್ತಿದ್ದರು. ಅವರದೇ ಲಾಟೀನು, ಮಲಗಲು ಅವರದೇ ಚಾಪೆ, ಹೊದ್ದುಕೊಳ್ಳುವದೊಂದನ್ನು ನಾವು ಒಯ್ಯುತ್ತಿದ್ದೆವು. ಅವರ ಅಳಿಯ ಕೃಷ್ಣ ನಮ್ಮ ಸಹಪಾಠಿ.

ಶಾಲೆಯಲ್ಲಿ ಪ್ರತಿವರ್ಷ ದಸರಾ ಹಬ್ಬದಲ್ಲಿ ಶಾರದಾ ಪೂಜೆ ಮಾಡುತ್ತಿದ್ದರು. ಪ್ರಬಂಧ ಸ್ಪರ್ಧೆಯನ್ನೇರ್ಪಡಿಸುತ್ತಿದ್ದರು. ಆ ವರ್ಷ ಗಾಂಧೀಜಿಯ ಬಗ್ಗೆ ಪ್ರಬಂಧ ಬರೆಯಲು ಹೇಳಿದ್ದರು. ನಾನು ಪ್ರಬಂಧ ಬರೆಯುವ ಬದಲು ಬಾಪೂಜಿಯ ಬಗ್ಗೆ ಕವನವೊಂದನ್ನು ಬರೆದಿದ್ದೆ. ಅದನ್ನು ನೋಡಿ ಹಿರಿಹಿರಿ ಹಿಗ್ಗಿದರು. ಪ್ರಥಮ ಬಹುಮಾನ ನನಗೆ. ಆ ಪೂಜಾ ಸಮಾರಂಭಕ್ಕೆ ಊರಿನ ಗಣ್ಯರು ಬಂದಿದ್ದರು. ಅವರಲ್ಲೊಬ್ಬರು ರಂಗಾಚಾರ್ಯರು. ಅವರು ಬಹು ಆನಂದದಿಂದ ನನ್ನ ಬೆನ್ನು ಚಪ್ಪರಿಸಿ ಒಂದು ರೂಪಾಯಿ ಬಹುಮಾನ ಕೊಟ್ಟರು. (ಆ ದಿನಮಾನದಲ್ಲಿ ಆರು ರೂಪಾಯಿಗೆ ಒಂದು ಚೀಲ [ಕ್ವಿಂಟಲ್] ಜೋಳ.) ಗುರುಗಳ ಪಾದಕ್ಕೆರಗಿದೆ. ನೀನು ಬರೆಯುತ್ತ ಹೋಗು, ಒಳ್ಳೆಯದಾಗುತ್ತದೆ ಎಂದು ಹರಸಿದರು. ಇಂದು ಆ ಮಾತು

ನೆನಪಾಗುತ್ತದೆ. ನಮ್ಮ ಕ್ಲಾಸಿನದು ಪಬ್ಲಿಕ್ ಪರೀಕ್ಷೆ. ಆ ವರ್ಷ ನಮ್ಮ ಶಾಲೆಯದು ನೂರಕ್ಕೆ ನೂರರಷ್ಟು ಫಲಿತಾಂಶ.

ಆಗಿನ ಕಾಲದಲ್ಲಿ ಈಗಿನಂತೆ ಗ್ರಾಮಕ್ಕೊಂದು ಹೈಸ್ಕೂಲು, ದೊಡ್ಡ ಗ್ರಾಮಕ್ಕೊಂದು ಜೂನಿಯರ್ ಕಾಲೇಜು ಅಥವಾ ಡಿಗ್ರಿ ಕಾಲೇಜು ಇರಲಿಲ್ಲ. ಬಹಳವಾದರೆ ತಾಲೂಕ ಕೇಂದ್ರದಲ್ಲಿ ಒಂದು ಹೈಸ್ಕೂಲು ಅಷ್ಟೆ. ಕಾಲೇಜು ಕಲಿಯಬೇಕಾದರೆ ಜಿಲ್ಲಾ ಕೇಂದ್ರಕ್ಕೆ ಹೋಗಬೇಕಾಗುತ್ತಿತ್ತು. ಬೇಸಿಗೆಯ ರಜಾ ಕಾಲದಲ್ಲಿ ಹೈಸ್ಕೂಲಿನ ಶಿಕ್ಷಕರು ತಮ್ಮ ತಾಲೂಕಿನ ಹಳ್ಳಿಗಳಿಗೆ ಹೊಗಿ "ನಮ್ಮಲ್ಲಿ ಉಚಿತ ಪ್ರಸಾದನಿಲಯವಿದೆ. ಊಟ, ವಸತಿಯ ಚಿಂತೆ ಬೇಡ. ಬಡ ಹುಡುಗರಿಗೆ ಫೀಜಿನಲ್ಲಿ ರಿಯಾಯತಿ ಇದೆ. ನಿಮ್ಮ ಹುಡುಗರನ್ನು ನಮ್ಮಲ್ಲಿ ಕಳಿಸಿಕೊಡಿರಿ" ಎಂದು ಹೇಳಿಬರುತ್ತಿದ್ದರು. ಅದರಂತೆ ನಾನೂ ಸಹ ನರಗುಂದದಲ್ಲಿ ನಗರಸಭೆಯ ಹೈಸ್ಕೂಲ್ ಸೇರಿದೆ. ಮುರುಘರಾಜೇಂದ್ರ ಉಚಿತ ಪ್ರಸಾದನಿಲಯದಲ್ಲಿ ವಾಸ್ತವ್ಯ.

ಹೈಸ್ಕೂಲಿನಲ್ಲಿಯ ಶಿಕ್ಷಕವೃಂದವನ್ನು ನೆನಪಿಸಿಕೊಂಡರೆ, ಇಂದಿಗೂ ಅವರ ತಿಳಿವಳಿಕೆಯ ಮಟ್ಟ ನಿಬ್ಬೆರಗುಗೊಳಿಸುತ್ತದೆ. ಎಲ್ಲರೂ ತಮ್ಮ ತಮ್ಮ ತರಗತಿಗಳಲ್ಲಿ ಹೃದಯಕ್ಕೆ ತಟ್ಟುವಂತೆ ಪಾಠ ಮಾಡುತ್ತಿದ್ದರು. ನಗೆಮಾರಿ ನಾಗಯ್ಯ ಹಿರೇಮಠರು; ಜೋಲಿ ಹೊಡೆಯುತ್ತ ನಡೆದು ಬರುತ್ತಿದ್ದ, ಇಳಿವಯದ ವೈದ್ಯ ಮಾಸ್ತರರು, ಕಾಠೇವಾಡಿ ಕುದುರೆಯಂತೆ ಠೀವಿಯಿಂದ ಠಳಾಯಿಸುತ್ತಿದ್ದ ಎಸ್. ವ್ಹಿ. ಭಕ್ಕರಿ ಗುರುಗಳು, ಮೈಸೂರ ಮಹಾರಾಜರಂತೆ ರಾಜ ಗಾಂಭೀರ್ಯದಿಂದ ಆಗಮಿಸುತ್ತಿದ್ದ ಕಲಬುರ್ಗಿ ಮಾಸ್ತರರು, ವಿನೋದಕ್ಕೆ ಇನ್ನೊಂದು ಹೆಸರಾದ ಯಾವಗಲ್ಲ ಶಂಕರಣ್ಣನವರು– ಹೀಗೆ ಹಲವಾರು ವೈಶಿಷ್ಟ್ಯಗಳಿಂದ ನಮ್ಮ ಗುರುವೃಂದ ನಮ್ಮ ಮನಸ್ಸನ್ನು ತುಂಬಿರುತ್ತಿತ್ತು.

ಪಠ್ಯೇತರ ಚಟುವಟಿಕೆಗಳಲ್ಲಿ ಹೆಚ್ಚಿನ ಆಸಕ್ತಿ ವಹಿಸುತ್ತಿದ್ದ ನನಗೆ ಪೂಜ್ಯ ಶಂಕರಣ್ಣ ಯಾವಗಲ್ಲ ಗುರುಗಳ ಆತ್ಮೀಯ ಸಂಪರ್ಕ ಒದಗಿ ಬಂತು. ಚರ್ಚಾಕೂಟಗಳಲ್ಲಿ ಮುಂಚೂಣಿ ಯಲ್ಲಿರುತ್ತಿದ್ದೆ. ಅದನ್ನು ಈ ನನ್ನ ಗುರುಗಳು ತುಂಬ ಆಸ್ಥೆಯಿಂದ ಗಮನಿಸುತ್ತಿದ್ದರು. ಅವರ ಮನೆಯಲ್ಲಿ ಸುಮಾರು ನಾನೂರಕ್ಕೂ ಮಿಕ್ಕಿದ ಪುಸ್ತಕಗಳ ಭಾಂಡಾರವಿತ್ತು. ನನಗೆ ಕತೆ ಕಾದಂಬರಿ ಓದಲು ಕೊಡುತ್ತಿದ್ದರು. ಬರಬರುತ್ತ ವಿಚಾರಸಾಹಿತ್ಯದ ರುಚಿ ಹಚ್ಚಿದರು. ಎಮ್. ಗೋವರ್ಧನರಾಯರು ಕನ್ನಡಕ್ಕೆ ಅನುವಾದಿಸಿದ 'ಸಾಮ್ಯವಾದವೇ ಏಕೆ?' (Why Socialism) ಎನ್ನುವ ಜಯಪ್ರಕಾಶ ನಾರಾಯಣರ ಗ್ರಂಥ ನನ್ನ ಮನಸ್ಸಿನ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿತು. ನನ್ನ ವೈಚಾರಿಕ ಬದುಕನ್ನೇ ರೂಪಿಸಿತೆನ್ನಬೇಕು.

ಇದರ ಜೊತೆಗೆ ಇನ್ನೊಂದು ಸಂಗತಿಯನ್ನು ಇಲ್ಲಿ ಪ್ರಸ್ತಾಪಿಸಲೇಬೇಕು. ನರಗುಂದಕ್ಕೆ ಆ ದಿನಮಾನದಲ್ಲಿ ಪಡುವಗೊಂಡ ಕೆರೆ ಕುಡಿವ ನೀರಿನ ಆಸರೆ. ಅದರ ಪಕ್ಕದಲ್ಲಿ ತಕ್ಕಮಟ್ಟಿಗೆ ವಿಶಾಲವಾದ ತಗ್ಗು ಪ್ರದೇಶದಲ್ಲಿ ಒಂದು ಭಾವಿಯಿತ್ತು. ದಿನಾಲು ನಸುಕಿನಲ್ಲಿ ಅಲ್ಲಿಗೆ ಯಾವಗಲ್ಲ ಗುರುಗಳೊಂದಿಗೆ ಮೂರು ನಾಲ್ಕು ಜನ ಗೆಳೆಯರು ಈಜಲು ಹೋಗುತ್ತಿದ್ದೆವು. ಮೂಢ ಜನ ದಾರಿಯಲ್ಲಿ ಮಾಟ ಮದ್ದು ಎಂದು ಮಣ್ಣಿನ ಮುಚ್ಚಳದಲ್ಲಿ ನಿಂಬೆಹಣ್ಣು, ಬಾಳೆಹಣ್ಣು, ಎಲೆಅಡಿಕೆ, ಕುಂಕುಮ ಇತ್ಯಾದಿ ಸಾಮಾನುಗಳನ್ನು ಇಟ್ಟಿರುತ್ತಿದ್ದರು– ತಮ್ಮ ಪೀಡೆ ಇನ್ನೊಬ್ಬರಿಗೆ ಹೋಗಲೆಂದು. ಅದನ್ನು ಕಂಡು ನಾವು ದೂರ ಹೋಗುತ್ತಿದ್ದೆವು.

ಗುರುಗಳು "ಯಾಕ ಅಂಜತೀರಲೇ ಬರ್ರಿ" ಎಂದು ಕರೆದು ಲಿಂಬೆಹಣ್ಣನ್ನು ತಾವು ಜೇಬಿನಲ್ಲಿಟ್ಟುಕೊಂಡು, ಬಾಳೆಹಣ್ಣುಗಳನ್ನು ನಮಗೆ ಕೊಟ್ಟು, ತಿನ್ನಲು ಹೇಳುತ್ತಿದ್ದರು. ನಮ್ಮಲ್ಲಿ ಧೈರ್ಯ ತುಂಬಿ ತಿನ್ನಿಸುತ್ತಿದ್ದರು. ಮುಂದೆ ನಮಗೆ ಅದೇ ರೂಢಿಯಾಯಿತು. ಆದರೆ, ನಮಗೆ ಯಾವ ಪೀಡೆಯೂ ತಗಲಿಕೊಳ್ಳಲಿಲ್ಲ. ಗುರುಗಳು ಮೂಢ ನಂಬಿಕೆಯನ್ನು ಮೆಟ್ಟಿ ನಿಲ್ಲುವ ಗಟ್ಟಿ ನಿಲುವನ್ನು ನೆಲೆಗೊಳಿಸಿದರು.

ಹೈಸ್ಕೂಲಿನಲ್ಲಿಯೂ ಸಹ ಸರಿಯಾಗಿ ಪಾಠ ಮಾಡಿಕೊಂಡು ಬರದಿದ್ದರೆ, ತರಗತಿಯಲ್ಲಿ ಅಲಕ್ಷ್ಯ ಮಾಡಿದರೆ, ಅನುಮಾನವಿಲ್ಲದೆ ಹೊಡೆಯುತ್ತಿದ್ದವರಲ್ಲಿ ನಮ್ಮ ಕಲಬುರ್ಗಿ ಗುರುಗಳು ಮೊದಲಿಗರೆನ್ನಬೇಕು. ಅವರು ಪ್ರಕಾಂಡ ಪಂಡಿತರೇ ಆಗಿದ್ದರು. ಸಮಾಜ ಸುಧಾರಣೆಯ ದೃಷ್ಟಿಕೋನದಿಂದ ಒಂದು ಗ್ರಂಥವನ್ನು ಬರೆದಿದ್ದರು. ಶ್ರಾವಣ ಮಾಸ ಬಂದಿತೆಂದರೆ ಪ್ರಸಾದನಿಲಯದ ವಿದ್ಯಾರ್ಥಿಗಳಿಗೆ ತರಗತಿಯಲ್ಲಿ ಬೈಗುಳ, ಬಡಿತ ಇದ್ದದ್ದೆ. ಅದಕ್ಕೆ ಕಾರಣವಿಷ್ಟೇ. ಶ್ರಾವಣ ಮಾಸದುದ್ದಕ್ಕೂ ಆ ಊರಿನ ಸಹೃದಯ ಗೃಹಸ್ಥರು ದಿನಕ್ಕೊಂದು ಮನೆಗೆ ಪ್ರಸಾದನಿಲಯದ ವಿದ್ಯಾರ್ಥಿಗಳನ್ನು ಊಟಕ್ಕೆ ಆಮಂತ್ರಿಸುತ್ತಿದ್ದರು. ಅಂದು ಆ ಮನೆಯವರ ಸಡಗರ, ಸಂಭ್ರಮ ವರ್ಣಿಸಲಸದಳ. ನಾವು ನಲವತ್ತು ಜನ ವಿದ್ಯಾರ್ಥಿಗಳು, ಪ್ರಸಾದನಿಲಯದ ಸಿಬ್ಬಂದಿ ನಾಲ್ಕು ಜನ. ಆತಿಥೇಯರು, ವಿಶೇಷವಾಗಿ ಆ ಮನೆಯ ತಾಯಂದಿರು, ಅಕ್ಕರೆಯಿಂದ ಒತ್ತಾಯ ಮಾಡಿ ಮಾಡಿ ಉಣಬಡಿಸುತ್ತಿದ್ದರು. ಅದರ ಪರಿಣಾಮ ತರಗತಿಯಲ್ಲಿ ಆಕಳಿಕೆ, ತೂಕಡಿಕೆ. ಯಥಾಪ್ರಕಾರ ಶಿಕ್ಷೆ. ಅಂತೂ ಹೈಸ್ಕೂಲಿನ ಓದು ನಿರಾತಂಕವಾಗಿ ಮುಗಿಯಿತು. ಸಹಪಾಠಿಗಳೆಲ್ಲ ಚದುರಿದೆವು, ಬೇರೆ ಯಾವ ಕಸುಬನ್ನೂ ಅರಿಯದ, ಜ್ಞಾನದಾನವನ್ನೇ ಜೀವನದ ಏಕಮಾತ್ರ ಗುರಿಯಾಗಿಸಿಕೊಂಡ ಗುರುವೃಂದವನ್ನು ಭಾರವಾದ ಹೃದಯದಿಂದ ಆಗಲಿದೆವು. ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಪಡೆದ ಶಿಕ್ಷಣವೇ ಜೀವನಕ್ಕೆ ಶಿಕ್ಷಣದ ಭದ್ರ ಬುನಾದಿ. ಅಂಥ ಭದ್ರ ಬುನಾದಿಯನ್ನು ನಮ್ಮ ಗುರುಗಳು ಹಾಕಿದರೆಂಬುದರಲ್ಲಿ ಅನುಮಾನವೇ ಇಲ್ಲ.

ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಕಲಿಯುವಾಗಿನ ನನ್ನ ನೂರಾರು ಸಹಪಾಠಿಗಳನ್ನು ಒಂದಲ್ಲ ಒಂದು ಸಂದರ್ಭದಲ್ಲಿ ಕಾಣುವ ಅವಕಾಶ ಸಿಗುತ್ತದೆ. ಅವರಲ್ಲಿ ಎಷ್ಟೋ ಜನ ಡಾಕ್ಟರುಗಳು, ವಕೀಲರು, ಗಣ್ಯ ವ್ಯಾಪಾರಸ್ಥರು ಆಗಿದ್ದಾರೆ. ರಾಜಕೀಯದಲ್ಲೂ ಮಿಂಚುತ್ತಿದ್ದಾರೆ. ಇವೆಲ್ಲಕ್ಕಿಂತ ಮಿಗಿಲಾಗಿ ನಮ್ಮಲ್ಲಿ ಒಬ್ಬನೇ ಒಬ್ಬನೂ ಮನೆಗೆ ಹೊರೆಯಾಗಿಲ್ಲ, ಸಮಾಜಕಂಟಕನಾಗಿಲ್ಲ. ಎಲ್ಲರೂ ಪ್ರಜ್ಞಾವಂತ ಸತ್ಪ್ರಜೆಗಳಾಗಿ ಬಾಳು ಸಾಗಿಸಿದ್ದೇವೆ. ಅದಕ್ಕೆ ಬಹುಮಟ್ಟಿಗೆ ಕಾರಣ, ನಮಗೆ ಉತ್ತಮ ಸಂಸ್ಕಾರ ನೀಡಿದ ಮೇಲ್ಪಂಕ್ತಿಸಿದ ಗುರುಗಳೇ.

ಗುರುಗಳ ಹರಕೆ, ಹಾರೈಕೆಯ ಫಲವಾಗಿ ಅಷ್ಟಿಷ್ಟು ಬರವಣಿಗೆಯನ್ನು ಮಾಡುತ್ತ ಎರಡು ಪುಸ್ತಕಗಳನ್ನು ರಚಿಸಿರುವೆ. ವಿದ್ಯಾದಾನ ಮಾಡಿದ, ಪುಣ್ಯಶ್ಲೋಕರಾದ ಗುರುಗಳನ್ನು, ಪ್ರಸಾದನಿಲಯವನ್ನು, ಶ್ರಾವಣದಲ್ಲಿ ಕರುಳು ಕಕ್ಕುಲಾತಿಯಿಂದ ಉಣಬಡಿಸುತ್ತಿದ್ದ ನರಗುಂದದ ತಾಯಂದಿರನ್ನು ನನ್ನೆದೆಯ ಗೂಡಿನಲ್ಲಿಟ್ಟುಕೊಂಡು ನಿತ್ಯವೂ ಸ್ಮರಿಸುತ್ತಿರುವೆ.

■ **ಬಸವರಾಜ ಚಿಕ್ಕನರಗುಂದ :**

೯೩, ನಿರಂಜನ, ಶಿರೂರ ಪಾರ್ಕ್, ೨ನೇ ಹಂತ, ವಿದ್ಯಾನಗರ, ಹುಬ್ಬಳ್ಳಿ-೫೮೦ ೦೩೧ ■

ನನ್ನ ಗುರುಗಳು

ಎಂ. ಡಿ. ಗೋಗೇರಿ

ನಾನು ಸ್ವಾತಂತ್ರ್ಯದ ಪೂರ್ವದಲ್ಲಿ (೨೧-೧-೧೯೪೩) ಹುಟ್ಟಿ ಸ್ವಾತಂತ್ರ್ಯ ಬಂದ ಮರುವರ್ಷ ಗೋಗೇರಿಯಲ್ಲಿ ಗಾಂವಠಿ ಶಾಲೆಗೆ ದಾಖಲಾದೆ. ಈ ಶಾಲೆಯನ್ನು ನಡೆಸುತ್ತಿದ್ದ ಗುರುಗಳು ಘುಡುಸಾಹೇಬ ಅಂಗಡಿ ಎಂಬುವವರು. ಇಸ್ಲಾಂ ಧರ್ಮದ ಬಾಗವಾನ ಪಂಗಡಕ್ಕೆ ಸೇರಿದವರು. ಇವರೇ ನನ್ನ ಪ್ರಥಮ ಗುರುಗಳು. ಇವರನ್ನು ನಾನು ಎಂದೂ ಮರೆಯುವಂತಿಲ್ಲ. ಕಾಳಜಿಯಿಂದ ನನಗೆ ಓದುಬರಹ ಕಲಿಸಿದ್ದಲ್ಲದೆ ಮುಂದೆ ಕಲಿಯಲು ನಮ್ಮ ತಂದೆ ತಾಯಿಗಳಿಗೆ ಒತ್ತಾಯ ಮಾಡಿ ಪ್ರೋತ್ಸಾಹಿಸಿದ್ದಕ್ಕೆ ಇಂದು ನಾನು ಅವರನ್ನು ಸ್ಮರಿಸಬೇಕಾಗಿದೆ. ನನ್ನಂತೆ ಹತ್ತಾರು ವಿದ್ಯಾರ್ಥಿಗಳು ಅಂದು ನನ್ನ ಜೊತೆಗೆ ಕಲಿಯುತ್ತಿದ್ದರು. ನನ್ನ ಗುರುಗಳ ಸ್ವಂತ ಮೊಮ್ಮಕ್ಕಳೂ ಕಲಿಯುತ್ತಿದ್ದರು. ಆದರೆ ಅವರೆಲ್ಲ ಅದೇ ನಾಲ್ಕನೇ ಇಯತ್ತೆಗೆ ಶರಣು ಹೊಡೆದು ಒಕ್ಕಲುತನ ವ್ಯವಸಾಯ ಮಾಡಲಿಕ್ಕೆ ತೊಡಗಿದರು. ಶಿಕ್ಷಣವನ್ನು ಮುಂದುವರಿಸಲಿಲ್ಲ. ಬೇರೆ ಊರಿಗೆ ಹೋಗಿ ಕಲಿಯುವ ಪ್ರಯತ್ನ ಮಾಡಲಿಲ್ಲ. ಅವರ ಹೆತ್ತವರೂ ಅದಕ್ಕೆ ಮನಸ್ಸು ಕೊಡಲಿಲ್ಲ. ಆದರೆ ನನ್ನ ಅದೃಷ್ಟವು ಚೆನ್ನಾಗಿತ್ತೆಂದು ಕಾಣುತ್ತಿದೆ. ಹೇಗೊ! ಎಂತೊ! ಎಲ್ಲೆಲ್ಲೊ ಬಿದ್ದು ಎದ್ದು ಶಿಕ್ಷಣ ಮುಂದುವರಿಸಿದೆ. ಇದಕ್ಕೆ ಬಹುಪಾಲು ಕಾರಣರು ನನ್ನ ಗುರುಗಳಾದ ಘುಡುಸಾಹೇಬ ಮಾಸ್ತರರು ಮತ್ತು ಅವರ ಮಾತು ಪಾಲಿಸಿದ ನನ್ನ ತಂದೆ ತಾಯಿಗಳು.

ಈಗಿನ ಗದಗ ಜಿಲ್ಲೆಯ ಗಜೇಂದ್ರಗಡಾದಿಂದ ಪೊಗಲಾಯಿ ಹದ್ದಿನಲ್ಲಿ ಕೊನೆಯ ಹಳ್ಳಿಯಾದ ನನ್ನ ಊರು ಗೋಗೇರಿಯಲ್ಲಿ ಆಗ ವಿದ್ಯಾವಂತರೇ ಇರಲಿಲ್ಲ. ಉಚ್ಚ ಶಿಕ್ಷಣ ಪಡೆಯಬೇಕೆಂಬ ಹಂಬಲದವರೂ ಇರಲಿಲ್ಲ. ಅವರಿಗೆ ಮಾರ್ಗದರ್ಶಕರೂ ಇರಲಿಲ್ಲ. ಈ ನಮ್ಮ ಘುಡುಸಾಹೇಬ ಮಾಸ್ತರರೂ ಏಳನೆ ಇಯತ್ತೆ ಪಾಸಾಗಿ ಗಾಂವಠಿ ಶಾಲೆ ಹಾಕಿಕೊಂಡು ಕುಳಿತವರಾಗಿದ್ದು, ಹೈಸ್ಕೂಲು ಕಾಲೇಜು ನೋಡಿದವರೇ ಅಲ್ಲ. ಗಜೇಂದ್ರಗಡ ದೊಡ್ಡ ಪಟ್ಟಣವಾಗಿದ್ದರೂ ಆಗ ಅಲ್ಲಿ ಒಂದು ಹೈಸ್ಕೂಲು ಸಹ ಇದ್ದಿಲ್ಲ. ಘೋರ್ಪಡೆ ಎಂಬ ಗಜೇಂದ್ರಗಡಾದ ಸಾಮಂತರ ಆಡಳಿತದಲ್ಲಿದ್ದ ೨೭ ಹಳ್ಳಿಗಳ ಪರಿಸ್ಥಿತಿಯೂ ಸರ್ವೇಸಾಮಾನ್ಯ ನಮ್ಮೂರಂತೆಯೇ ಇತ್ತು. ಹೈಸ್ಕೂಲ ಅಭ್ಯಾಸಕ್ಕೆ ಹೋಗಬೇಕೆಂದರೆ ರೋಣಕ್ಕೆ ಇಲ್ಲವೆ ಗದಗ ನಗರಕ್ಕೆ ಅಥವಾ ನರೇಗಲ್ಲಿಗೆ ಬರಬೇಕಾಗಿತ್ತು. ಆದರೆ ಈ ಮಸಾರಿ ಭೂಮಿಯ ೨೭ ಹಳ್ಳಿಗಳಲ್ಲಿ ಹೈಸ್ಕೂಲು ಶಿಕ್ಷಣ ಪಡೆಯಲು ಯಾವ ಅನುಕೂಲತೆಯೂ ಇದ್ದಿಲ್ಲ. ಇಂತಹ ಅಸಹಾಯಕ ಪರಿಸ್ಥಿತಿಯಲ್ಲಿ ಒಂದು ಪ್ರಣತಿಯಂತೆ ನನ್ನ ಗುರುಗಳು ವರ್ಷಕ್ಕೆ ಮೂರುನಾಲ್ಕು ನೂರು ರೂಪಾಯಿ ಗ್ರ್ಯಾಂಟಿನ ಸಂಬಳ ಪಡೆದು ಜ್ಞಾನದ ಜ್ಯೋತಿ ಬೆಳಗಿಸುತ್ತಿದ್ದುದು ಒಂದು ಪವಾಡವೇ ಸರಿ.

ನನ್ನ ಕಣ್ಣ ಮುಂದೆ ಈಗಲೂ ಅವರ ವ್ಯಕ್ತಿಚಿತ್ರ ಮೂಡಿಬರುತ್ತಿದೆ. ಅಷ್ಟೊಂದು ಎತ್ತರದ ವ್ಯಕ್ತಿ ಅಲ್ಲ. ಅಂಡರವೀಯರ ಇಲ್ಲದೆ ಧೋತರ ಉಡುತ್ತಿದ್ದರು. ಶರ್ಟ ತೊಡುತ್ತಿದ್ದರು. ಶಾಲೆಗೆ ಬರುವಾಗ ಕಾಟನ್ ಕೋಟು ತೊಟ್ಟುಕೊಂಡು ರುಮಾಲು ಸುತ್ತಿಕೊಂಡು ಬರುತ್ತಿದ್ದರು. ಸಾದಾ ಚಪ್ಪಲಿ ಮೆಟ್ಟುತ್ತಿದ್ದರು. ನಮ್ಮ ಶಾಲೆ ಬಸವಣ್ಣ ದೇವರ ಗುಡಿ ಮತ್ತು ಹನುಮಂತ ದೇವರ ಗುಡಿಗಳಲ್ಲಿ ನಡೆಯುತ್ತಿತ್ತು. ಇವೆರಡೂ ಗುಡಿಗಳು ಹೊಂದಿಕೊಂಡೇ ಇದ್ದವು.

ನಮ್ಮ ಗುರುಗಳಿಗೆ ಕೂಡಲಿಕ್ಕೆ ಕುರ್ಚಿ ಇದ್ದಿಲ್ಲ. ಬರೆಯಲಿಕ್ಕೆ ಮೇಜು ಇದ್ದಿಲ್ಲ. ಯಾವುದೇ ಪಾಠೋಪಕರಣ ಇಟ್ಟುಕೊಳ್ಳಲು ಕಪಾಟು, ಡೆಸ್ಕು ಸುಡುಗಾಡು ಶುಂಠಿ ಕೊಂಬು ಏನೂ ಇರಲಿಲ್ಲ. ಕಲಿಯುವ ಹತ್ತಿಪ್ಪತ್ತು ಹುಡುಗರು, ಕಲಿಸುವ ಘುಡುಸಾಹೇಬ ಮಾಸ್ತರರು. ಗುಡಿಯ ಒಳಗೆ ಹನುಮಂತ ಮತ್ತು ಬಸವಣ್ಣ ದೇವರು ಇಷ್ಟೇ. ಮೂಸಿ ನೋಡುತ್ತೇನೆಂದರೂ ಒಂದು ಹುಡಿಗೆಯೂ ಇದ್ದಿಲ್ಲ. ಹೀಗಾಗಿ ನಮ್ಮ ಊರಲ್ಲಿ ಮಹಿಳೆಯರು ಬಹಳ ವರ್ಷಗಳ ವರೆಗೆ ನಿರಕ್ಷರಿಗಳಾಗಿಯೇ ಉಳಿದುಬಿಟ್ಟರು.

ಈಗಿನ ಎಲ್.ಕೆ.ಜಿ., ಯು.ಕೆ.ಜಿ.ಯಂತೆ ಆಗ ಸಣ್ಣ ಬಿನ್ನೆ ಇಯತ್ತೆ ಒಂದು ವರ್ಷ, ದೊಡ್ಡ ಬಿನ್ನೆ ಇಯತ್ತೆ ಒಂದು ವರ್ಷ ಕಲಿತ ಮೇಲೆ ಒಂದನೇ ಇಯತ್ತೆಗೆ ದಾಖಲಾಗುತ್ತಿದ್ದೆವು. ಮುಂದೆ ನಾಲ್ಕು ವರ್ಷ ಕಲಿತು ನಾಲ್ಕನೇ ಇಯತ್ತೆ ಪಾಸಾದ ಮೇಲೆ ನಮ್ಮೂರಲ್ಲಿ ಕಲಿಯುವ ಹಣೆಬರಹ ಮುಗಿಯಿತು. ಮುಂದೆ ಐದನೆ ವರ್ಗ ಕಲಿಯಬೇಕೆನ್ನುವ ವಿದ್ಯಾರ್ಥಿಗಳು ಗಜೇಂದ್ರಗಡಾಕ್ಕೆ ಹೋಗಬೇಕಾಗುತ್ತಿತ್ತು. ಅಂದು ನಮ್ಮೂರಿಂದ ಗಜೇಂದ್ರಗಡಾಕ್ಕೆ ಹೋಗಿ ಬರಲು ಬಸ್ಸುಗಳೇ ಇದ್ದಿಲ್ಲ. ರಸ್ತೆಯೂ ಚೆನ್ನಾಗಿರಲಿಲ್ಲ. ಯಾವಾಗಲೊ ಒಂದೆರಡು ಖಾಸಗಿ ಬಸ್ಸುಗಳು ಇಕ್ಕಟ್ಟಾದ ಚಕ್ಕಡಿ ರಸ್ತೆಗಳಲ್ಲಿ ಕುಷ್ಟಗಿ ತಾಲೂಕ ವರೆಗೆ ಬಂದು ಹೋಗಿ ಮಾಡುತ್ತಿದ್ದವು. ಹೀಗಿರುವಾಗ ನಮ್ಮೂರ ಯಾವ ಮಕ್ಕಳೂ ಗಜೇಂದ್ರಗಡಾಕ್ಕೆ ನಡೆಯುತ್ತ ಹೋಗಿ ಕಲಿತು ಬರುವ ಸಾಹಸಕ್ಕೆ ಇಳಿಯುತ್ತಿರಲಿಲ್ಲ. ಅಂಥವರಿಗೆ ನಮ್ಮ ಘುಡುಸಾಹೇಬ ಮಾಸ್ತರರೇ ಪ್ರಥಮ ಗುರುಗಳು ಮತ್ತು ಕೊನೆಯ ಗುರುಗಳಾಗಿದ್ದರು.

ಅಂದಿನ ಶಾಲೆಗಳು ಮುಂಜಾನೆ ೭-೩೦ ಕ್ಕೆ ಪ್ರಾರಂಭವಾಗಿ ೧೦-೪೫ ಕ್ಕೆ ಬಿಡುತ್ತಿದ್ದವು. ಇದಕ್ಕೆ ಮುಂಜಾನೆ ಶಾಲೆ ಎಂದು ಕರೆಯುತ್ತಿದ್ದರು. ಮತ್ತೆ ಮಧ್ಯಾಹ್ನ ೨-೩೦ ಗಂಟೆಗೆ ಸುರುವಾಗಿ ಸಂಜೆ ೫-೪೫ ಕ್ಕೆ ಮುಕ್ತಾಯಗೊಳ್ಳುತ್ತಿದ್ದವು. ಇದಕ್ಕೆ ಮಧ್ಯಾಹ್ನದ ಶಾಲೆ ಎನ್ನುತ್ತಿದ್ದರು. ನಮ್ಮ ಘುಡುಸಾಹೇಬ ಮಾಸ್ತರರು ಮುಂಜಾನೆ ಸರಿಯಾಗಿ ೭-೧೫ ಕ್ಕೆ ಓಣಿಗಳಲ್ಲಿ ಅಡ್ಡಾಡುತ್ತ, ಲೇ ಬಸ್ಯಾ, ಎಂಕಣ್ಣ, ಪರಿಸ್ಯಾ, ಮೌಲಾ ಬರ್ರಿ ಬರ್ರಿ ಅಂತಾ ಹುಡುಗರನ್ನು ಕಲೆಹಾಕುತ್ತಲೇ ಬಂದು ಶಾಲೆಗೆ ಹಾಜರಾಗುತ್ತಿದ್ದರು. ಗುಡಿಯ ಮುಂಭಾಗದಲ್ಲಿ ಸಾಲಾಗಿ ನಿಲ್ಲಿಸಿ ಪ್ರಾರ್ಥನೆ ಹೇಳಿಸುತ್ತಿದ್ದರು. ವಾರ, ತಾರೀಖು, ಪಂಚಾಂಗದ ಮಾಹಿತಿ ಹೇಳುತ್ತಿದ್ದರು. ವರ್ತಮಾನ ಪತ್ರಿಕೆ ನಮ್ಮೂರಿಗೆ ಬರುತ್ತಿರಲೇ ಇಲ್ಲ. ನಮ್ಮ ಮಾಸ್ತರರೂ ಓದುತ್ತಿರಲಿಲ್ಲ. ನಾವಂತೂ ಅದನ್ನು ನೋಡಿದ್ದೇ ಇಲ್ಲ. ಪ್ರಾರ್ಥನೆ ಮುಗಿದ ಮೇಲೆ ಸುನೀತಗಳನ್ನು ಹೇಳಿ ಅರ್ಥ ವಿವರಿಸುತ್ತಿದ್ದರು. ನಂತರ ಬಾಯಿ ತೆರೆಸಿ ಹಲ್ಲಿನ ಸ್ವಚ್ಛತೆ ಪರೀಕ್ಷಿಸುತ್ತಿದ್ದರು. ಉಗುರುಗಳಲ್ಲಿ ಮಣ್ಣು ಹೊಲಸು ಕುಳಿತಿದ್ದರೆ ಛಡಿಯಿಂದ ಹೊಡೆದು ಉಗುರು ಕತ್ತರಿಸಿಕೊಳ್ಳಲು ಹೇಳುತ್ತಿದ್ದರು. ಕೆಲವು ಹುಡುಗರ ಮೂಗು ಜೋಗಜಲಪಾತದ ರಾಜಾ ಧಾರೆಯಂತೆ ಕಂಡಾಗ ಗುಡಿಯ ಹಿಂದೆ ಪ್ರವಾಹ ತಿರುಗಿಸಿ ಬರಲು ಬೈದು ಕಳಿಸುತ್ತಿದ್ದರು.

ನಂತರ ಸಾಲಾಗಿ ಹೋಗಿ ನಮ್ಮ ನಮ್ಮ ತಟ್ಟಿನ ಮೇಲೆ ಕುಳಿತುಕೊಳ್ಳುತ್ತಿದ್ದೆವು. ಕೆಲವು ವರ್ಗಗಳಿಗೆ ಬಳ್ಳಿ ಬರೆಯಲು ಹೇಳುತ್ತಿದ್ದರು. ಮತ್ತೆ ಕೆಲವು ವರ್ಗಗಳಿಗೆ ಕನ್ನಡ ವಾಚನ ಪಾಠ ಕಲಿಸುತ್ತಿದ್ದರು. ಆಗ ಇಂಗ್ಲೀಷ ಮತ್ತು ಹಿಂದಿಯ ಹಾವಳಿ ಪ್ರಾಥಮಿಕ ಶಾಲೆಗಳಲ್ಲಿ ಇರಲಿಲ್ಲ. ವಾಚನ(ಭಾಷೆ), ಗಣಿತ, ಭೂಗೋಳ, ಇತಿಹಾಸ ಇಷ್ಟೇ ವಿಷಯಗಳಿದ್ದವು.

ಇವುಗಳನ್ನೇ ಚೆನ್ನಾಗಿ ಕಲಿಸುತ್ತಿದ್ದರು. ಈ ನಾಲ್ಕು ವಿಷಯಗಳಲ್ಲಿ ಭಾಷೆ ಮತ್ತು ಗಣಿತಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡುತ್ತಿದ್ದರು. ಇತಿಹಾಸದಲ್ಲಿ ಯುದ್ಧಗಳು ನಡೆದ ಇಸ್ವಿಗಳನ್ನು ಕಂಠಪಾಠ ಮಾಡಿಸುತ್ತಿದ್ದರು. ಭೂಗೋಳದಲ್ಲಿ ಮಳೆ ಬೆಳೆ ಹವಾಮಾನಗಳನ್ನು ಬಾಯಿಪಾಠ ಹೇಳಿಸುತ್ತಿದ್ದರು.

ಮುಂಜಾನೆ ಶಾಲೆಯಲ್ಲಿ ಕನ್ನಡ ಪಾಠ ಓದುವದು, ಶಬ್ದಗಳನ್ನು ಬರೆಯುವದು ಮತ್ತು ಕವಿತೆಗಳನ್ನು ಹಾಡುವದು ಎಲ್ಲ ವರ್ಗಗಳಿಗೂ ಕಡ್ಡಾಯವಾಗಿತ್ತು. ನಮ್ಮ ಗುರುಗಳು ಜಾಣ ಹುಡುಗರ ಸಹಾಯವನ್ನೂ ತೆಗೆದುಕೊಳ್ಳುತ್ತಿದ್ದರು. ತಾವು ಕವಿತೆಗಳನ್ನು ಸರಾಗವಾಗಿ ಹಾಡಿ ಕಲಿಸುತ್ತಿದ್ದರು. ಅವರು ಮುಂದೆ ಮುಂದೆ ಹಾಡಿದಂತೆ ನಾವು ಹಿಂದೆ ಹಿಂದೆ ಹಾಡುತ್ತ ಕವಿತೆ ಕಲಿಯುತ್ತಿದ್ದೆವು. ನೋಡಿ ಶುದ್ಧಬರಹ ಬರೆಸುತ್ತಿದ್ದರು. ಅಡ್ಡಾಡುತ್ತ ಉಕ್ತಲೇಖನ ಹೇಳಿ ಬರೆಸುತ್ತಿದ್ದರು. ದೀರ್ಘ ಸ್ವರ, ಹ್ರಸ್ವ ಸ್ವರದ ಅಂತರ ಹೇಳುತ್ತ 'ೀ' ಬಾಲಾ ಕೊಡು ಅನ್ನುತ್ತಿದ್ದರು. ಮಹಾಪ್ರಾಣ ತಪ್ಪಿದರೆ 'ಕುಂಡಿ ಸೀಳಲೆ' ಎಂದು ಗದರಿಸುತ್ತಿದ್ದರು. ಅಕ್ಷರಗಳನ್ನು ದುಂಡಾಗಿ ಬರೆಯಲು ರೂಢಿ ಮಾಡಿಸುತ್ತಿದ್ದರು. ಅಂದಿನ ಆ ನನ್ನ ೭ ನೇ ಇಯತ್ತೆ ನಪಾಸಾದ ಗಾಂವಠಿ ಶಾಲಾ ಗುರುಗಳಾದ ಘುಡುಸಾಹೇಬ ಮಾಸ್ತರರು ಕಲಿಸಿದ ಶುದ್ಧ ಕನ್ನಡವು ನನ್ನ ಮುಂದಿನ ಇಯತ್ತೆಗಳ ಓಟಕ್ಕೆ ಕಾಠೇವಾಡದ ಕುದುರೆಯ ವೇಗವನ್ನು ಕೊಟ್ಟಿತೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಮುಂಜಾನೆ ಶಾಲೆ ಬಿಟ್ಟ ಮೇಲೆ ಮನೆಗೆ ಓಡುತ್ತಿದ್ದೆವು. ಊಟ ಮಾಡಿದ ಮೇಲೆ ಮನೆಯಲ್ಲಿ ಮಗ್ಗಿ ಬರೆದುಕೊಂಡು ಬರಲು ಹೇಳುತ್ತಿದ್ದರು. ಈ ಮಧ್ಯಂತರ ಬಿಡುವಿನಲ್ಲಿ ಹೊಲಕ್ಕೆ ಹೋಗಿ ಬುತ್ತಿ ಕೊಟ್ಟು ಬರುತ್ತಿದ್ದೆವು. ಪಾಟಿಯನ್ನು ಇದ್ಲಿ(ಇದ್ದಲಿ)ಯಿಂದ ತಿಕ್ಕಿ ತಿಕ್ಕಿ ತೊಳೆಯುತ್ತಿದ್ದೆವು. ಮಧ್ಯಾಹ್ನ ನಮ್ಮ ಮಾಸ್ತರರು ಊಟವಾದ ಮೇಲೆ ಒಂದು ತಾಸು ನಿದ್ರೆ ಮಾಡಿ ಮಧ್ಯಾಹ್ನದ ಶಾಲೆಗೆ ಒಂದು ಲೆಕ್ಕಿ ಜರ್ಲ (ಸಣ್ಣ ಬಡಿಗೆ) ಹಿಡಿದುಕೊಂಡೇ ಬರುತ್ತಿದ್ದರು. ಮಗ್ಗಿ ಬಾಯಿಪಾಠ ಹೇಳುವಾಗ ಆ ಜರ್ಲಿನ ಜರೂರತ ಇರುತ್ತಿತ್ತು. ಸಾಲಾಗಿ ನಿಲ್ಲಿಸಿ ತಾವೇ ಮಗ್ಗಿ ಕೇಳುತ್ತಿದ್ದರು. ೧೩ x ೮ ಲೆ = ೧೦೪ ಎಂದು ಹೇಳಬೇಕು. "ಎಷ್ಟು ಏಳಲೆ ನೂರಾಹನ್ನೆರಡು?" ಗುರುಗಳ ಪ್ರಶ್ನೆ. ಇದಕ್ಕೆ ನಾವು ೧೬ x ೭ ಲೆ ನೂರಾಹನ್ನೆರಡು ಎಂದು ಹೇಳದಿದ್ದರೆ ಕುಂಡಿಯ ಮೇಲೆ ಜರ್ಲಿನ ಮಾಲೀಸು ಜರಗುತ್ತಿತ್ತು. ತಪಾಸಣೆಗೆಂದು ಬಂದ ಸಾಹೇಬರೂ ಮಗ್ಗಿಗಳನ್ನೇ ಹೆಚ್ಚಾಗಿ ಮಕ್ಕಳಿಗೆ ಕೇಳುತ್ತಿದ್ದರು.

ಒಂದು ಸಲ ಒಬ್ಬ ಸಾಹೇಬರು ಬಂದು ಮೂರನೇ ವರ್ಗದ ವಿದ್ಯಾರ್ಥಿಗಳಿಗೆ ಒಂಭತ್ತೆಂಟಲೆ ಎಷ್ಟು ಎಂದು ಕೇಳಿದರು. ಹುಡುಗರು ತಪ್ಪು ಹೇಳತೊಡಗಿದರು. ನಮ್ಮ ಮಾಸ್ತರರಿಗೆ ಬಹಳ ಕಸಿವಿಸಿ ಆಗತೊಡಗಿತು. ಸಾಹೇಬರು ಹುಡುಗರನ್ನು ಕೇಳುತ್ತ ಕೇಳುತ್ತ ಒಂದು ಮೂಲೆಕಡೆ ಹೋದರು. ಆಗ ಮಾಸ್ತರರು ನನ್ನ ಮರ್ಯಾದೆ ಕಳೆದಿರ್ರಿ, ಗ್ರ್ಯಾಂಟೂ ಕಡಿಮೆ ಆಗತ್ತರ್ರಿ. ಅಂತಾ ಅಂದವರೆ ಮಗ್ಗಲು ನಿಂತ ಹುಡುಗನ ತೊಡೆಗೆ ಕೋಲಿನಿಂದ ಸ್ವಲ್ಪ ಚುಚ್ಚಿದಾಗ ಕೋಲು ಹುಡುಗನ ಆಯ ಮಟ್ಟಿಗೆ(ವೃಷಣ) ತಟ್ಟಿದಾಗ ಹುಡುಗ 'ಎಪ್ಪಾ' ಶಬ್ದಕ್ಕೆ ವೃಷಣದ ಗ್ರಾಮ್ಯ ಶಬ್ದವನ್ನು ಜೋಡಿಸಿ ಜೋರಾಗಿ ಕೂಗಿಬಿಟ್ಟ. ಆಗ ಸಾಹೇಬರ

ತಲೆಯಲ್ಲಿ ಅದೇ ಗುಂಗು ಇದ್ದುದರಿಂದ ಸಾಹೇಬರೇ 'ಗುಪ್ ಗುಪ್' ಎನ್ನುತ್ತ "ಒಂಭತ್ತೆಂಟಲೆ ಎಪ್ಪತ್ತೆರಡು" ಕರೆಕ್ಟ್, ಕರೆಕ್ಟ್ ಅಂದು ಹುಡುಗನ ಬೆನ್ನು ಚಪ್ಪರಿಸಿದರು. ಆದರೆ ಹುಡುಗ ಅಂದದ್ದೇ ಬೇರೆ, ಸಾಹೇಬರು ತಿಳಿದುಕೊಂಡಿದ್ದೇ ಬೇರೆ. ಘುಡುಸಾಹೇಬ ಮಾಸ್ತರರು ಕಕ್ಕಾಬಿಕ್ಕಿಯಾಗಿ ಅಂದಿನಿಂದ ಕೋಲನ್ನು ಬಹಳ ಹುಷಾರಿಯಿಂದ ಬಳಸಹತ್ತಿದರು.

ಮಹಾನವಮಿ ಹಬ್ಬ ಬಂದಿತೆಂದರೆ ನಮಗೆ ಬಿಲ್ಲಿನ ಆಟ ಕಲಿಸುತ್ತಿದ್ದರು. ತಿಪ್ಪಿಗುಂಡಿಯಲ್ಲಿ ಹತ್ತೆಂಟು ದಿನ ಬಿದಿರನ್ನು ನೆನೆಹಾಕಿ ಬಿಲ್ಲು ಮಾಡುತ್ತಿದ್ದೆವು, ಬಿಲ್ಲಿಗೆ ಅಂದಚೆಂದವಾದ ಬಣ್ಣದ ಹಾಳೆ ಹಚ್ಚಿ ಸಿಂಗರಿಸಿಕೊಂಡು ಎಲ್ಲರ ಮನೆಗೂ ಹಾಡುತ್ತ ಹೋಗುತ್ತಿದ್ದೆವು. ನಮ್ಮ ಮಾಸ್ತರರು ಸುಮ್ಮನೆ ನೇತೃತ್ವ ವಹಿಸುತ್ತಿದ್ದರು.

ಚೌಪದಾನ ಚೌಪದಾನ / ಶಾಲಾ ಬಾಲರು ಬಂದಿಹೆವು / ಮಳೆ ಬೆಳೆ ಸಿರಿಕೆ ತಂದಿಹೆವು ಎಂದು ಹಾಡುತ್ತ ನಮ್ಮೂರಲ್ಲಿ ಹಾಗೂ ಸುತ್ತಲೂರುಗಳಲ್ಲಿ ಬಿಲ್ಲಿನಾಟ ಆಡಿ ಸಾಕಷ್ಟು ದುಡ್ಡು ಕಾಳು ಕೂಡಿಸುತ್ತಿದ್ದೆವು. ಕೊನೆಯ ದಿನ ನಮ್ಮ ಗುರುಗಳು ಹಳ್ಳದ ದಂಡೆಗೆ ನಮ್ಮನ್ನು ಕರೆದುಕೊಂಡು ಹೋಗಿ ಅಲ್ಲಿ ಕೇರಿ ಹಬ್ಬವನ್ನು ಮಾಡಿಸುತ್ತಿದ್ದರು. ಅಲ್ಲಿ ನಮಗೆ ಸಿಹಿ ಊಡಿ, ಫರಾಳ ಕೊಡುತ್ತಿದ್ದರು.

ಹೀಗೆ ಹಲವಾರು ಸಾಂಸ್ಕೃತಿಕ ಅಭ್ಯಾಸಗಳೊಂದಿಗೆ ನಾಲ್ಕನೇ ಇಯತ್ತೆಯನ್ನು ಘುಡುಸಾಹೇಬ ಮಾಸ್ತರ ಕೈಯಲ್ಲಿ ಕಲಿತು ಪಾಸಾದೆ. ಮುಂದೆ ಐದನೆ ವರ್ಗಕ್ಕೆ ಹೋಗಬೇಕಾಗಿತ್ತು. ಗೋಗೇರಿಯಲ್ಲಿ ಐದನೆಯ ವರ್ಗ ಇರಲಿಲ್ಲ. ನಮ್ಮ ತಾಯಿ ತಂದೆಗಳಿಗೆ ಘುಡುಸಾಹೇಬ ಮಾಸ್ತರರು ಕರೆದು, "ಮಗ ಶ್ಯಾಣೆ ಅದಾನ, ಶಾಲೆ ಬಿಡಿಸಬೇಡಿರಿ. ನಿಮ್ಮ ಬೀಗರ ಊರಾಗ ಕಳಿಸಿ ಶಾಲೆ ಕಲಿಸಿರಿ" ಎಂದು ದಾರಿ ಹೇಳಿಕೊಟ್ಟರು. ಆಗ ನಮ್ಮ ತಾಯಿಯವರು ತಮ್ಮ ತವರೂರಾದ ಕುರುಡಗಿ ಎಂಬ ಊರಿಗೆ ಕರೆದುಕೊಂಡು ಬಂದು ತಮ್ಮ ಅಣ್ಣನ ಮನೆಯಲ್ಲಿಟ್ಟು, ೫ ನೇ ವರ್ಗಕ್ಕೆ ಹೆಸರು ಹಚ್ಚಿಸಿದರು. ಇಲ್ಲಿಯೇ ನನ್ನ ಜೀವನದ ದಿಶೆ ಬದಲಾದದ್ದು. ನಾಲ್ಕನೇ ಇಯತ್ತೆಗೇನೆ ಶಾಲೆ ಬಿಡಿಸಿದ್ದರೆss ಮುಗಿಯುತ್ತಿತ್ತು ನನ್ನ ಕಥೆ.

ಕುರುಡಗಿ ಆರ್. ಸಿ. ಹಿರೇಮಠರ ಜನ್ಮಸ್ಥಳ. ಅಂದು ಆ ಗ್ರಾಮದ ಜನರು ಗಾಡಿ ಮೋಟಾರುಗಳನ್ನು ಹತ್ತಬೇಕಾದರೆ ಹತ್ತು ಮೈಲು ನಡೆದು ಬರಬೇಕಾಗಿತ್ತು. ಊರಿನ ಸುತ್ತಲೂ ತುಂಬಿ ಹರಿಯುವ ಹಿರೇಹಳ್ಳ. ಇಂಥ ಕಾಡು ಕುಗ್ರಾಮ ಕುರುಡಗಿಯಲ್ಲಿ ಹೈಸ್ಕೂಲು ಅಭ್ಯಾಸ ಮಾಡುವವರು, ಕಾಲೇಜು ಕಲಿಯುವವರು, ಮಾಸ್ತರಿಕೆ ಮಾಡುವವರು ಸಾಕಷ್ಟು ಜನರಿದ್ದರು. ಶಿಕ್ಷಣದಲ್ಲಿ ಸಾಕಷ್ಟು ಮುಂದುವರಿದ ಜನತೆಯಾದ್ದರಿಂದ ಸರಕಾರಿ ಶಾಲೆ ಅಲ್ಲಿ ಚೆನ್ನಾಗಿ ನಡೆಯುತ್ತಿತ್ತು. ಇಲ್ಲಿ ನಾನು ೫ ನೇ ವರ್ಗ ಕಲಿಯಲು ಬಂದಾಗ ನನ್ನ ಗುರುಗಳಾಗಿ ಸಿಕ್ಕವರು ಶ್ರೀ ಅಣ್ಣಿಗೌಡರ ಎಂಬವರು. ಆರೋಗ್ಯವಂತ ಕೆಂಪನೆಯ ದುಂಡಾದ ಮುಖದ ವ್ಯಕ್ತಿತ್ವ ಅವರದಾಗಿತ್ತು. ಧೋತರ, ಶರ್ಟ, ಕೋಟು ತೊಡುತ್ತಿದ್ದರು. ಗಾಂಧೀ ಟೋಪಿ ಹಾಕುತ್ತಿದ್ದರು. ಸರಕಾರಿ ಶಾಲೆಯಾದ್ದರಿಂದ ಸಂಬಳಕ್ಕೆ ಯಾವುದೇ ತೊಂದರೆ ಇರಲಿಲ್ಲ. ಬಹುಶಃ ತಿಂಗಳಿಗೆ ಅರವತ್ತು ರೂಪಾಯಿ ಇರಬಹುದು.

ಅಣ್ಣಿಗೌಡರ ಗುರುಗಳದೂ 'ಛಂ ಛಂ ಛಂ, ವಿದ್ಯೆ ಘಂ ಘಂ' ಎಂಬುದೇ ಮಂತ್ರವಾಗಿತ್ತು. ಐದನೇ ವರ್ಗದಲ್ಲಿಯೂ ಇಂಗ್ಲೀಷ ಹಿಂದಿಗಳ ಗೊಂದಲವಿರಲಿಲ್ಲ. ಕನ್ನಡ,

ಗಣಿತ, ಇತಿಹಾಸ, ಭೂಗೋಳ, ವಿಜ್ಞಾನ ವಿಷಯಗಳನ್ನು ಪರಿಣಾಮಕಾರಿಯಾಗಿ ಕಲಿಸುತ್ತಿದ್ದರು. ಸಂಜೆಯ ಮುಂದೆ 'ಪುರೋಚ' ಮಗ್ಗಿ ಬಾಯಿಪಾಠ ಮಾಡಿಸುವದು, ಎಷ್ಟಲೆ ಎಷ್ಟಲೆ? ಎಂದು ಕೇಳುವದು ಮಾಡುತ್ತಿದ್ದರು. ಅರಸರು ಮಾಡಿದ ಸುಧಾರಣೆಗಳನ್ನು ಅನಾಹುತಗಳನ್ನು ಇಸ್ವಿಗಳನ್ನು ಕೇಳುತ್ತಿದ್ದರು. ಬಹಳಷ್ಟು ಸಲ ಸರಿಯಾದ ಉತ್ತರ ಹೇಳುತ್ತಿದ್ದ ನನಗೆ ಉತ್ತರ ತಪ್ಪಿದ ಹುಡುಗರ ಮೂಗು ಹಿಡಿದು ಕಪಾಳಕ್ಕೆ ಹೊಡೆಯುವ ಛಾನ್ಸ ಬರುತ್ತಿತ್ತು. ಮೂಗು ವಿಕಾರಗೊಂಡ ಹುಡುಗರನ್ನು ಬಗ್ಗಿಸಿ ಗುದ್ದುತ್ತಿದ್ದೆ. ಅವರು ಅದೇ ಸಿಟ್ಟು ಇಟ್ಟುಕೊಂಡು ಆಟ ಆಡುವಾಗ ನನ್ನನ್ನು ಗುದ್ದುತ್ತಿದ್ದರು.

ಕುರುಡಗಿಯಲ್ಲಿ ಓದುವಾಗ ನನಗೆ ಹಾಡುವದಕ್ಕೂ ಪಂದ್ಯಾಟಗಳಲ್ಲಿ ಆಡುವದಕ್ಕೂ ಸಾಭಿನಯ ಗೀತೆಗಳಲ್ಲಿ ಪಾತ್ರ ಮಾಡುವದಕ್ಕೂ ನನ್ನ ಸೋದರಮಾವ ಅಲ್ಲಿಸಾಬ ಮಾಸ್ತರರು ಪ್ರೋತ್ಸಾಹ ನೀಡಿ ಕಲಿಸುತ್ತಿದ್ದರು. ಅಲ್ಲಿಸಾಬರು ಮಾಸ್ತರಿಕೆ ಮಾಡುತ್ತ ನಾಟಕ ಕಲಿಸುತ್ತಿದ್ದರು. ಕರಡಿಮಜಲು ಬಾರಿಸುತ್ತಿದ್ದರು. ತಬಲಾ ನುಡಿಸುತ್ತಿದ್ದರು. "ತೊಗಲ ವಿದ್ಯೆಯಲ್ಲಿ ಅಲ್ಲಿಸಾಬ ಬಹಳ ಜಾಣ" ಎಂದು ಊರ ಜನ ಮಾತಾಡಿಕೊಳ್ಳುತ್ತಿದ್ದರು. ಅಲ್ಲಿಯೇ ಹೊಟ್ಟೀನ ಎಂಬ ಗುರುಗಳೂ ಇದ್ದರು. ಎತ್ತರದ ಆಳು. ರಟ್ಟಿನ ಟೊಪ್ಪಿಗೆ ಹಾಕುತ್ತಿದ್ದರು. ಇವರು ಸ್ವಲ್ಪ ತೊದಲಿಸಿ ಮಾತಾಡುತ್ತಿದ್ದರು. ಲೇ ಪಿಂಜಾಗ, ಬಾ ಇಲ್ಲಿ ಎನ್ನುತ್ತಿದ್ದರು. (ಆಗ ನನ್ನ ಅಡ್ಡ ಹೆಸರು ಪಿಂಜಾರ ಎಂದಿತ್ತು. ನಂತರ ಗೋಗೇರಿ ಎಂದು ಬದಲಿಸಿದ್ದೇನೆ.)

ಹೀಗೆ ನಾನು ೫ ನೇ ವರ್ಗ ಪಾಸಾದ ಮೇಲೆ ನನ್ನ ತಂದೆ ತಾಯಿಗಳು ಮತ್ತೆ ಗಜೇಂದ್ರಗಡಾಕ್ಕೆ ನನ್ನನ್ನು ಕರೆದುಕೊಂಡು ಬಂದರು. ಅಲ್ಲಿ ನನ್ನನ್ನು ಬಾಗವಾನರ ಗುಂಡಮ್ಮ ಎಂಬವರ ಮನೆಯಲ್ಲಿ ಇಟ್ಟು ೬ ನೇ ಇಯತ್ತೆಗೆ ಹೆಸರು ಹಚ್ಚಿಸಿದರು. ಗುಂಡಮ್ಮನಿಗೆ ನಮ್ಮ ತಂದೆಯವರು ವಾರಕ್ಕೆ ಎರಡು ರೂಪಾಯಿ ನನ್ನ ಊಟದ ಬಿಲ್ಲು ಕೊಡುತ್ತಿದ್ದರು. ಗಜೇಂದ್ರಗಡಾದ ಗುಡ್ಡದೋರೆಯಲ್ಲಿ ವಾಡೇದ ಶಾಲೆ ಅಂತಾ ಇತ್ತು. ಮಹಡಿಯ ಮೇಲೆ ೬ ನೇ ವರ್ಗ ನಡೆಯುತ್ತಿತ್ತು. ಇಲ್ಲಿ ನನಗೆ ವರ್ಗದ ಗುರುಗಳಾಗಿ ದೊರೆತವರು ಶ್ರೀ ವದೆಗೋಳ ಎಂಬ ಶಿಕ್ಷಕರು.

ವದೆಗೋಳ ಗುರುಗಳ ಊರು ರೋಣ ತಾಲೂಕಿನ ಹಾಲಕೇರಿ ಎಂಬ ಗ್ರಾಮ. ಕುಟುಂಬವನ್ನು ತಮ್ಮೂರಲ್ಲಿಯೇ ಇಟ್ಟಿದ್ದರು. ಒಬ್ಬರೇ ಗಜೇಂದ್ರಗಡಾದಲ್ಲಿ ರೂಮು ಮಾಡಿಕೊಂಡು ಖಾನಾವಳಿಯಲ್ಲಿ ಊಟ ಮಾಡಿಕೊಂಡು ಇದ್ದರು. ವಾರಕ್ಕೊಮ್ಮೆ ಊರಿಗೆ ಹೋಗಿಬರುತ್ತಿದ್ದರು. ಅವರಿಗೆ ಅಸ್ತಮಾ ಇತ್ತೆಂದು ತೋರುತ್ತಿತ್ತು. ಬಹಳ ಕಟ್ಟುನಿಟ್ಟಿನ ಗುರುಗಳಾಗಿದ್ದರು. ಮಧ್ಯಾಹ್ನದ ಶಾಲೆಗೆ ಹೋಗಲು ಗಡಗಡ ನಡುಗುತ್ತಿದ್ದೆ. ಏಕೆಂದರೆ ಗಣಿತ ವಿಷಯವನ್ನು ಗುಣಕಿನೊಂದಿಗೆ ಕಲಿಸುತ್ತಿದ್ದರು. ಸರಳ ಬಡ್ಡಿ, ಚಕ್ರಬಡ್ಡಿ ಕಲಿಸುವವರಲ್ಲಿ ವದೆಗೋಳ ಅವರು ನಿಷ್ಣಾತರಾಗಿದ್ದರು. ಲೆಕ್ಕ ತಪ್ಪಿದರೆ ಸಾಧಾರಣ ದಪ್ಪವಿದ್ದ ಬಿದಿರು ಬಡಿಗೆ ಅವರ ಹೊಡೆತಕ್ಕೆ ಸೀಳಿಬಿಡುತ್ತಿತ್ತು. ವರ್ಗದಲ್ಲಿ ನನಗಿಂತಲೂ ದೊಡ್ಡ ದೊಡ್ಡ ಹುಡುಗರು ಇದ್ದರು. ಮಧ್ಯಾಹ್ನದಲ್ಲಿ ನಾಲ್ಕು ಲೆಕ್ಕಗಳನ್ನು ಬಿಡಿಸುವ ಹೊತ್ತಿಗೆ ಒಂದು ಬಿದಿರು ಬಡಿಗೆ ಚಿಪ್ಪಾಡಿಯಾಗಿ ಅವಸಾನ ಕಾಣುತ್ತಿತ್ತು. ಆದರೆ ಅವರ ಹೊಡೆತಕ್ಕೆ ನಾನು ಶಾಲೆ ಬಿಟ್ಟು ಓಡಿಹೋಗಲಿಲ್ಲ. ಶಾಲಾ ತಪಾಸಣೆಗೆ ಬಂದಾಗ ಸಾಹೇಬರ ಪ್ರಶ್ನೆಗೆ

ಉತ್ತರ ಸರಿಯಾಗಿ ಹೇಳದಿದ್ದರೆ ಪದೆಗೋಳ ಗುರುಗಳ ಏಟು. ಸುನಾಮಿ ಅಲೆಗಳಂತೆ ಮರುದಿನ ಇಡೀ ಕ್ಲಾಸಿಗೆ ನುಗ್ಗುತ್ತಿತ್ತು. ಹೀಗಾಗಿ ಗಜೇಂದ್ರಗಡದ ಎಷ್ಟೋ ಹುಡುಗರು ನಡುವೆಯೇ ಶಾಲೆ ಬಿಟ್ಟು ಕಿರಾಣಿ ಅಂಗಡಿಗಳಲ್ಲಿ, ಅರಿವೆ ಅಂಗಡಿಗಳಲ್ಲಿ ನೌಕರಿಗೆ ಸೇರಿದರು. ಇಂದು ಅವರೇ ಗಜೇಂದ್ರಗಡದ ಶ್ರೀಮಂತರಲ್ಲಿ ಪ್ರಮುಖರೂ ಆಗಿದ್ದಾರೆ. ಆ ಮಾತು ಬೇರೆ.

ಇಲ್ಲಿಯ ಕೆಲವು ಗುರುಗಳಲ್ಲಿ ಅಂಗಡಿ ಎಂಬವರು ಹೆಡ್‌ಮಾಸ್ತರ ಆಗಿದ್ದರು. ಗಂಡೂಡಿ ಮಾಸ್ತರ, ಡೋಣಿ ಮಾಸ್ತರ, ಕರಡಿ ಮಾಸ್ತರ ಮುಂತಾದವರು ಪ್ರಸಿದ್ಧರಾಗಿದ್ದರು. ಇವರ ಪ್ರಯತ್ನದಿಂದ ಕಾಲಕಾಲೇಶ್ವರ ಹೈಸ್ಕೂಲು ಪ್ರಾರಂಭವಾಯಿತು. ಅದೇ ಈಗ ಭೂಮರಡ್ಡಿ ಡಿಗ್ರಿ ಕಾಲೇಜ ಆಗಿ ಸಾಕಷ್ಟು ಪ್ರಗತಿ ಸಾಧಿಸಿದೆ.

ಇನ್ನೊಂದು ನೆನಪು ಬರುತ್ತಿದೆ. ಇದೇ ವಾಡೇದ ಶಾಲೆಯಲ್ಲಿ ೬ ನೇ ವರ್ಗ ಕಲಿಯುತ್ತಿರುವಾಗ ನಾನು ಒಂದು ಕವನ ಬರೆದಿದ್ದೆ. ಅದನ್ನು ಪೆಂಡಾರಿ ಎಂಬ ಗುರುಗಳು ಓದಿ ಮೆಚ್ಚಿಕೊಂಡಿದ್ದರು. ಅದು ಗಾಂಧೀಜಿಯವರನ್ನು ಕುರಿತು ರಚಿತವಾಗಿತ್ತು. ಮುಂದೆ ಅದು ಎಲ್ಲಿ ಹೋಯಿತೊ! ಏನೊ! ತಿಳಿಯಲಿಲ್ಲ. ೬ ನೇ ವರ್ಗ ಗಜೇಂದ್ರಗಡದಲ್ಲಿ ಪಾಸಾದ ಮೇಲೆ ಮರುವರ್ಷ ನನ್ನ ವಿದ್ಯಾಭ್ಯಾಸದ ಚಕ್ಕಡಿ ಪರುತಮಲ್ಲಯ್ಯನವರ ಗುಡಿಯಂತೆ ಊರೂರು ತಿರುಗುತ್ತ ಅದೇ ತಾಲೂಕಿನ ನಿಡಗುಂದಿ ಗ್ರಾಮಕ್ಕೆ ಏಳನೇ ವರ್ಗ ಕಲಿಯಲು ಬಂದಿತು.

ನಿಡಗುಂದಿ ಗ್ರಾಮವು ಗದಗ ಗಜೇಂದ್ರಗಡದ ಹೆದ್ದಾರಿಯ ಮೇಲಿದ್ದ ದೊಡ್ಡ ಗ್ರಾಮ. ಇಲ್ಲಿ ಸರಕಾರಿ ಹೆಣ್ಣುಮಕ್ಕಳ ಶಾಲೆ ಮತ್ತು ಗಂಡುಮಕ್ಕಳ ಶಾಲೆ ೭ ನೇ ವರ್ಗದ ವರೆಗೆ ನಡೆಯುತ್ತಿದ್ದವು. ಈ ಊರಲ್ಲಿ ನನ್ನ ತಂದೆಯ ಅಣ್ಣನ ಮಗಳು ಅಲ್ಲಮ್ಮನನ್ನು ಮದುವೆಮಾಡಿ ಕೊಟ್ಟಿತ್ತು. ಈ ಅಲ್ಲಮ್ಮ ನಮ್ಮೂರಲ್ಲಿ ಲಾವಣಿ ಹೊಲ ಮಾಡಿದ್ದಳು. ಉತ್ತುವ ಬಿತ್ತುವ ಕೆಲಸ ಮಾಡಿಕೊಡುತ್ತೇನೆಂದು ಹೇಳಿ ನನ್ನಪ್ಪ ನಿಡಗುಂದಿಯ ಅಲ್ಲಮ್ಮನ ಮನೆಯಲ್ಲಿ ನನ್ನನ್ನು ೭ ನೆಯ ಇಯತ್ತೆ ಕಲಿಯಲು ತಂದು ಇಟ್ಟರು. ಇಲ್ಲಿ ನನ್ನ ಗುರುಗಳಾಗಿ ಬಂದವರು ಶ್ರೀ ಹನುಮಪ್ಪ ಮಣ್ಣೊಡ್ಡರ ಎಂಬವರು. ಇವರ ವ್ಯಕ್ತಿತ್ವವೂ ಬಹಳ ಆಕರ್ಷಕವಾಗಿತ್ತು. ಕೆಂಪು ಬಣ್ಣ, ಸದೃಢ ಕಾಯ, ನನ್ನಂತೆ ಕೂದಲುದುರಿದ ತಲೆ. ಏಳನೇ ಇಯತ್ತೆ ಕಲಿಸುವವರಲ್ಲಿ ರೋಣ ತಾಲೂಕಿನಲ್ಲಿಯೇ ಎತ್ತಿದ ಕೈ.

ಎಲ್ಲ ವಿಷಯಗಳನ್ನೂ ಬಾಯಿಪಾಠ ಹೇಳುತ್ತಿದ್ದರು. ಕೈಯಲ್ಲಿ ಯಾವಾಗಲೂ ಹೆಬ್ಬಟ್ಟಿ ದಪ್ಪದ ಬಡಿಗೆ ಹಿಡಿದಿರುತ್ತಿದ್ದರು. ಬೆನ್ನಹಿಂದೆ ಎರಡೂ ಕೈ ಜೋಡಿಸಿಕೊಂಡು ನಿಂತು ಹಿಡಿದ ಬಡಿಗೆಯಿಂದ ತಮ್ಮ ಹಿಂಗಾಲಿಗೆ ಸಾವಕಾಶವಾಗಿ ಬಡಿದುಕೊಳ್ಳುತ್ತಾ ನಗುನಗುತ್ತಾ ಪಾಠ ಹೇಳುತ್ತಿದ್ದರು. ವಿದ್ಯಾರ್ಥಿಗಳು ತಪ್ಪಿದಾಗ, ಹೇಳಿದ ಅಭ್ಯಾಸ ಬರೆದುಕೊಂಡು ಬಾರದಿದ್ದಾಗ ಹಿಂದಿದ್ದ ಬಡಿಗೆ ಮುಂದೆ ಬಂದು ನಮ್ಮ ಅಂಗೈಗೆ ಚೆನ್ನಾಗಿ ಥಳಿಸುತ್ತಿತ್ತು. ೭ ನೇ ವರ್ಗ ಕಲಿಯುವ ಹುಡುಗರಲ್ಲಿ ಆಗಲೇ ಚಿಗುರುಮೀಸೆ ಮೂಡಿದ ಯುವಕರು ಬಹಳಷ್ಟು ಇದ್ದರು. ಆದರೆ ಅವರೆಂದೂ ಗುರುಗಳಿಗೆ ತಿರುಗಿ ನಿಲ್ಲುತ್ತಿರಲಿಲ್ಲ. ಅಂದಿನ ವಿದ್ಯಾರ್ಥಿಗಳಲ್ಲಿ ವಿನಯ ವಿಧೇಯತೆ ಹಾಗೆ ಇತ್ತು.

ಹನುಮಪ್ಪ ಮಾಸ್ತರರು ನಿಡಗುಂದಿ ಬಸ್‌ಸ್ಟ್ಯಾಪಿನ ಹತ್ತಿರವೇ ಮನೆ ಮಾಡಿಕೊಂಡು ಇದ್ದರು. ಅವರ ಧರ್ಮಪತ್ನಿಯೂ ಬಹಳ ಒಳ್ಳೆಯವರಾಗಿದ್ದರು. ಆಗಲೆ ಅವರಿಗೆ ಚಿಕ್ಕ

ಚಿಕ್ಕ ನಾಲ್ಕು ಹೆಣ್ಣುಮಕ್ಕಳು, ಶಂಕರ ಎಂಬ ಗಂಡುಮಗುವು ಇದ್ದವು. ಈಗ ಶಂಕರನು ಡಾಕ್ಟರನಾಗಿ ಜಿಲ್ಲಾ ಆಸ್ಪತ್ರೆಯ ಮುಖ್ಯಸ್ಥನಾಗಿದ್ದಾನೆ. ನಾನು ನನ್ನ ಗುರುಗಳ ಮನೆಯಲ್ಲಿಯೇ ಶಾಲಾ ಬಿಡುವಿನಲ್ಲಿ ಹೆಚ್ಚು ಕಾಲ ಕಳೆಯುತ್ತ ಗುರುಗಳ ಮಕ್ಕಳನ್ನು ಆಡಿಸುತ್ತ ಇರುತ್ತಿದ್ದೆ. ಮನೆ ಸಾರಿಸಲು ಶಗಣಿ ತರುವುದು, ಮಾಳಿಗೆ ಸೋರುತ್ತಿದ್ದರೆ ಮಣ್ಣು ಹಾಕುವುದು, ನೀರು ತರುವುದು ಮಾಡುತ್ತಿದ್ದೆ. ಹನುಮಪ್ಪ ಮಾಸ್ತರರು ತಮ್ಮ ಮನೆಯ ಪಕ್ಕದಲ್ಲಿಯೇ ಒಂದು ರೂಮು ಬಾಡಿಗೆ ಹಿಡಿದು ಅಲ್ಲಿ ನಮಗೆ ರಾತ್ರಿ ಪಾಠ ಹೇಳುತ್ತಿದ್ದರು. ತಮ್ಮದೇ ಚಿಮಣಿ ಎಣ್ಣೆ, ತಮ್ಮದೇ ಕಂದೀಲು. ರಾತ್ರಿ ಹತ್ತೂವರೆ ತನಕ ಇತಿಹಾಸ, ಭೂಗೋಳ, ಕನ್ನಡ ವ್ಯಾಕರಣ, ನಿಬಂಧ, ಪತ್ರ ಎಲ್ಲವನ್ನೂ ಕಲಿಸುತ್ತಿದ್ದರು. ನಡುನಡುವೆ ಹಾಸ್ಯಮಾತುಗಳಿಂದ ನಮಗೆ ಹುರುಪು ಕೊಟ್ಟು ಪಾಠ ಮಾಡುತ್ತಿದ್ದರು.

ಒಮ್ಮೆ ಒಂದು ಘಟನೆ ನಡೆಯಿತು. ಅದೇ ಶಾಲೆಯಲ್ಲಿ ಗುರಪ್ಪ ಎಂಬ ಮಾಸ್ತರರು ಇದ್ದರು. ಅವರ ಒಂದು ಕಾಲಿನ ಪಾದ ಸೊಟ್ಟಾಗಿತ್ತು. ಅವರಿಗೆ ಹಿಂದೆ ಮುಂದೆ ಹುಡುಗರು ಕುಂಟ ಮಾಸ್ತರು ಎಂದು ಕರೆಯುತ್ತಿದ್ದರು. ಉಳಿದ ಮಾಸ್ತರರೂ ಹಾಗೆ ಹೇಳುತ್ತಿದ್ದರು. ಆದರೆ ಹುಡುಗರ ಮುಂದೆ ಅನ್ನುತ್ತಿರಲಿಲ್ಲ. ನನಗೆ ಒಂದು ದಿನ ಗುರಪ್ಪ ಮಾಸ್ತರರು ಯಾವುದೋ ಕೆಲಸ ಹೇಳಿದರು. ಆಗ ನನಗೇನಾಗಿತ್ತೋ! ಏನೋ! ನನ್ನ ವಿಧೇಯತೆ ಎಲ್ಲಿ ಹೋಗಿತ್ತೊ! ತಿಳಿಯದು. “ನಮ್ಮ ಹನುಮಪ್ಪ ಮಾಸ್ತರರು ಈಗ ಗಣಿತ ಕ್ಲಾಸು ತಗೊಳ್ತಾರ್ರಿ, ನಾನು ತಪ್ಪಿಸಿದರೆ ನನ್ನನ್ನು ನಿಮ್ಮನ್ನು ಕೂಡಿಯೇ ಬಡಿಯುತ್ತಾರೆ” ಎಂದುಬಿಟ್ಟೆ. ಆಗ ಗುರಪ್ಪ ಮಾಸ್ತರರ ಸಿಟ್ಟು ಎಲ್ಲಿತ್ತೊ ಏನೊ! “ಯಾಕೊ ಮಗನೆ, ನನ್ನ ಯಾಕೆ ಬಡಿತಾರೆ?” ಎಂದವರೆ ಜಿಗಿದುನಿಂತು ನನ್ನ ಕಪಾಳಕ್ಕೆ ಬಿಗಿದುಬಿಟ್ಟರು. ಕಣ್ಣಿಗೆ ಚಕ್ರ ಬಂದಂತಾಗಿ ಕುಳಿತುಬಿಟ್ಟೆ. ನನ್ನದೇ ತಪ್ಪಾಗಿದ್ದರಿಂದ ಯಾರೂ ನನ್ನನ್ನು ರಮಿಸಲಿಕ್ಕೆ ಬರಲಿಲ್ಲ. ಒಬ್ಬನೇ ೧ ತಾಸು ಕಪಾಳ ನೇವರಿಸಿಕೊಳ್ಳುತ್ತ ವರ್ಗದಲ್ಲಿ ಅಳುತ್ತ ಕುಳಿತುಕೊಂಡೆ. ಸ್ವತಃ ಮಣ್ಣೊಡ್ಡರ ಗುರುಗಳೂ ಗುರುಪ್ಪನವರ ಮೇಲೆ ಸಿಟ್ಟಾಗಲಿಲ್ಲ. ಇದೂ ನನ್ನ ನೆನಪಿನಲ್ಲಿ ಇನ್ನೂ ಉಳಿದಿದೆ. ಈಗ ಗುರಪ್ಪನವರೂ ಇಲ್ಲ, ಹನುಮಪ್ಪನವರೂ ಇಲ್ಲ. ಆ ರೀತಿ ಈಗಿನ ಹುಡುಗರನ್ನು ಬಡಿದರೆ ಓಡಿ ಹೋಗಿ ತಮ್ಮ ಪಾಲಕರನ್ನು ಬಡಿಗೆ ಸಹಿತ ಕರೆದುಕೊಂಡು ಬರುತ್ತಾರೆ.

ಅದೇ ವರ್ಷ ಹನುಮಪ್ಪ ಗುರುಗಳನ್ನು ಧಾರವಾಡಕ್ಕೆ ಮಧ್ಯಂತರ ತರಬೇತಿಗೆಂದು ಒಂದು ತಿಂಗಳು ಆಯ್ಕೆ ಮಾಡಿದರು. ಆಗ ಎಲ್ಲ ವಿದ್ಯಾರ್ಥಿಗಳು ಬಿಕ್ಕಿ ಬಿಕ್ಕಿ ಅಳತೊಡಗಿದರು. ಅವರೂ ದುಃಖ ತಡೆಯಲಾರದೆ ಅಳುತ್ತ ಹೋದರು. ಇಂದು ದಂಡಿಸಿ ಕಲಿಸುವ ಮಾಸ್ತರರು ವರ್ಗವಾಗಿ ಊರಿಗೆ ಹೋದರೆ ಕೈಯಲ್ಲಿ ಕಲಿಯುವ ವಿದ್ಯಾರ್ಥಿಗಳು ಹಾರಾಡಿ ಸಂತೋಷಪಡುತ್ತಾರೆ. ತರಬೇತಿ ಮುಗಿಸಿಕೊಂಡು ಬಂದಮೇಲೆ ಹನುಮಪ್ಪ ಮಾಸ್ತರರು ಬಹಳ ಕಾಳಜಿಯಿಂದ ಕಲಿಸತೊಡಗಿದರು. ತಿಂಗಳ ಪರೀಕ್ಷೆ, ತ್ರೈಮಾಸಿಕ ಪರೀಕ್ಷೆ, ಷಾಣ್ಮಾಸಿಕ ಪರೀಕ್ಷೆ, ನೂಲುವದು, ನೆಯ್ಯುವದು ಹೀಗೆ ಎಲ್ಲ ವಿಷಯಗಳನ್ನು ವರ್ಷವಿಡಿ ನಮಗೆ ದೃಢೀಕರಣ ಮಾಡಿಸುತ್ತ ವಿದ್ಯಾರ್ಥಿಗಳ ಶ್ರೇಯಸ್ಸಿಗೆ ಯಾವುದೇ ಪ್ರತಿಫಲ ಬಯಸದೆ ಶ್ರಮಿಸುತ್ತಿದ್ದರು. ಮುಲ್ಕಿ ಪರೀಕ್ಷೆ ಬಂದಿತು. ರೋಣಕ್ಕೆ ಎಲ್ಲ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋದರು. ಮಾರ್ಗದರ್ಶನ ಮಾಡುತ್ತ ಪರೀಕ್ಷೆಗೆ ಹಾಜರ ಪಡಿಸಿದರು. ಕಾಪಿ ಮಾಡುವ ಕೆಟ್ಟ ಚಾಳಿ

ಆಗ ಎಳ್ಳಷ್ಟೂ ಇರಲಿಲ್ಲ. ಎಲ್ಲರೂ ಪ್ರಥಮ ವರ್ಗದಲ್ಲಿ ಪಾಸಾದೆವು. ಆಗ ನೋಡಬೇಕಿತ್ತು ಮಣ್ಣೊಡ್ಡರ ಗುರುಗಳ ಸಂತೋಷ ಸಂಭ್ರಮ!

ಮುಂದೆ `ಮಣ್ಣೊಡ್ಡರ' ಎಂಬ ಅಡ್ಡ ಹೆಸರನ್ನು ಬದಲಿಸಿಕೊಂಡು `ನರೇಗಲ್ಲ' ಅಂತಾ ಮಾಡಿಕೊಂಡರು. ತಾಲೂಕ ಶಾಲಾ ಹೆಡ್‌ಮಾಸ್ತರ ಆದರು. ಕೊನೆಗೆ ಹುಬ್ಬಳ್ಳಿಯ ಒಂದು ಶಾಲೆಗೆ ಹೆಡ್‌ಮಾಸ್ತರ ಆಗಿ ನಿವೃತ್ತಿ ಹೊಂದಿದರು. ಹುಬ್ಬಳ್ಳಿಯ ನವನಗರದಲ್ಲಿ ಮನೆ ಮಾಡಿಕೊಂಡು ವಾಸ ಮಾಡಿದ್ದರು. ನಾನೂ ಹುಬ್ಬಳ್ಳಿಯಲ್ಲಿಯೇ ಇದ್ದುದರಿಂದ ಆಗಾಗ ಹೋಗಿ ಭೇಟಿಯಾಗಿ ಬರುತ್ತಿದ್ದೆ. ನನ್ನ ಕವನ, ಲೇಖನ ಓದಿ ಸಂತೋಷಪಡುತ್ತಿದ್ದರು. ಕೊನೆಗೆ ಪಾರ್ಶ್ವವಾಯು ಬಡಿದು ಎಂಭತ್ತನೇ ವಯಸ್ಸಿನಲ್ಲಿ ತೀರಿಕೊಂಡರು. ಅಂತ್ಯಕ್ರಿಯೆಗೆ ಹೋಗಿ ಕಣ್ಣೀರು ಸುರಿಸಿ ಋಣಮುಕ್ತನಾದೆ. ಅವರ ಇಡೀ ಕುಟುಂಬಕ್ಕೆ ನಾನು ಚಿರಪರಿಚಿತನಾಗಿ ಇಂದಿಗೂ ಉಳಿದಿದ್ದೇನೆ.

ಮಣ್ಣೊಡ್ಡರ ಗುರುಗಳ ಕೈಯಲ್ಲಿ ಮುಲ್ಕಿ ಪರೀಕ್ಷೆ ಪಾಸಾದ ಮೇಲೆ ಮರಳಿ ಗಜೇಂದ್ರಗಡಾಕ್ಕೆ ಹೋಗಿ ಹೈಸ್ಕೂಲು ಸೇರಿಕೊಂಡೆ. ಅದೇ ಆಗ ಹಿಂದಿನ ವರ್ಷ ಪ್ರಥಮವಾಗಿ ಹೈಸ್ಕೂಲನ್ನು ಕಾಲಕಾಲೇಶ್ವರ ದೇವರ ಹೆಸರಿನಿಂದ ಗಜೇಂದ್ರಗಡಾದ ಹಿರಿಯರು ಪ್ರಾರಂಭಿಸಿದ್ದರು. ಕೋಡಿಮಠದಲ್ಲಿ ವರ್ಗಗಳು ನಡೆಯುತ್ತಿದ್ದವು. ಹಳ್ಳಿಯ ನಮ್ಮಂಥ ವಿದ್ಯಾರ್ಥಿಗಳಿಗೆ ವಸತಿ ಮತ್ತು ಊಟದ ವ್ಯವಸ್ಥೆ ಮಾಡಿದ್ದರು. ಒಂದು ವರ್ಷಕ್ಕೆ ೧೦ ರೂ. ಕೊಡುತ್ತಿದ್ದೆವು. ಹೊಲ ಇದ್ದವರು ಒಂದು ಚೀಲ ಜೋಳ ಕೊಡುತ್ತಿದ್ದರು.

ಅಲ್ಲಿ ಟಿ. ಬಸವರಾಜ ಎಂಬುವರು ಹೈಸ್ಕೂಲ ಹೆಡ್‌ಮಾಸ್ತರ ಆಗಿದ್ದರು. ಇವರು ನಮಗೆ ಇಂಗ್ಲೀಷ ಕಲಿಸುತ್ತಿದ್ದರು. ಗಾಂಭೀರ್ಯದೊಡನೆ ಹಾಸ್ಯಪ್ರವೃತ್ತಿಯವರೂ ಆಗಿದ್ದರು. ಓದಲಿಕ್ಕೆ ರ್‍ಯಾಪಿಡ್ ರೀಡರ್ ಪುಸ್ತಕಗಳನ್ನು ಕೊಡುತ್ತಿದ್ದರು ಈವರೆಗೂ ಇಂಗ್ಲೀಷ ಅಕ್ಷರ ಕಲಿಯಲಾರದ ನಾವು ಎಂಟನೆ ಇಯತ್ತೆಯಲ್ಲಿ ಇಂಗ್ಲೀಷ ಪ್ರಾರಂಭಿಸಿದೆವು. ಅದರಂತೆ ಹಿಂದೀ ಭಾಷೆಯನ್ನೂ ಹೈಸ್ಕೂಲಿನಲ್ಲಿಯೇ ಕಲಿಯಲು ಸುರುಮಾಡಿದೆವು. ಎರಡು ಮೂರು ತಿಂಗಳಲ್ಲಿ ಎರಡೂ ಭಾಷೆಗಳನ್ನು ಚೆನ್ನಾಗಿ ಅರ್ಥ ಮಾಡಿಕೊಂಡು ಕಲಿಯಹತ್ತಿದೆವು. ಹಿಂದೀ ಭಾಷೆಯನ್ನು ಎಂ.ಎನ್.ಬಡಿಗೇರ ಎಂಬ ಶಿಕ್ಷಕರು ಕಲಿಸುತ್ತಿದ್ದರು. ಬೀಜಗಣಿತವನ್ನು ಗೋವಿಂದ ರಡ್ಡಿ ಎಂಬವರು ಬೋಧಿಸುತ್ತಿದ್ದರು. ಹೆಚ್ಚಾಗಿ ಈ ಮೂವರು ಶಿಕ್ಷಕರು ಈಗಲೂ ನನ್ನ ನೆನಪಿನಲ್ಲಿ ಉಳಿದಿದ್ದಾರೆ. ಗೋವಿಂದ ರಡ್ಡಿ ಗುರುಗಳು ಮೃದು ಸ್ವಭಾವದವರಾದ್ದರಿಂದ ಬಡಿಗೆ ಗಿಡಿಗೆ ಇವರ ಹತ್ತಿರ ಏನೂ ಇರುತ್ತಿರಲಿಲ್ಲ. ನಗುನಗುತ್ತ ಬೀಜಗಣಿತದ ಸಮಸ್ಯೆಗಳನ್ನು ಬಿಡಿಸಿ ಹೇಳುತ್ತಿದ್ದರು. ಬೋರ್ಡ ಮೇಲೆ ಬರೆದು ಬರೆದು, ಡಸ್ಟರಿಂದ ಒರೆಸಿ ಒರೆಸಿ ಸ್ವಲ್ಪ ಕಪ್ಪಾಗಿದ್ದ ಕೈಗಳು ರೊಟ್ಟಿ ಬಡಿಯುವ ಕೈಗಳಂತೆ ಖಡುವಿನ ಧೂಳಿನಿಂದ ಮುಚ್ಚಿಕೊಂಡು ಬೆಳ್ಳಗಾಗಿರುತ್ತಿದ್ದವು.

ಬಡಿಗೇರ ಗುರುಗಳು ನಾವು ಕಲಿಯುವಾಗ ಬ್ಯಾಚಲರ ಇದ್ದುದರಿಂದ ಬೋರ್ಡಿಂಗಿ ನಲ್ಲಿಯೇ ನಮ್ಮೊಡನೆ ಊಟ ಮಾಡುತ್ತಿದ್ದರು. ತುಪ್ಪದ ಬಾಟ್ಲಿಯನ್ನು ತಮ್ಮೊಡನೆ ತಂದು ಊಟ ಮಾಡಿದ ಮೇಲೆ ಮತ್ತೆ ರೂಮಿಗೆ ಒಯ್ಯುತ್ತಿದ್ದರು. ಬೋರ್ಡಿಂಗಿನಲ್ಲಿ ನಾವು ಊಟ ಮಾಡಿದ ಮೇಲೆ ಅಲ್ಲೇ ಇದ್ದ ರೂಮುಗಳಲ್ಲಿ ಅಭ್ಯಾಸ ಮಾಡಿಸುತ್ತಿದ್ದರು. ಹರೆಯದ ಮಬ್ಬಿನಲ್ಲಿ ತೂಕಡಿಸುತ್ತ ಕುಳಿತಾಗ ನಮ್ಮ ತಲೆಗೆ ಕುಟೆದು ಎಬ್ಬಿಸಿ, ಮುಖಕ್ಕೆ ನೀರು ಚಿಮುಕಿಸಿ. ರಾತ್ರಿ

ಹತ್ತನೆ ವರೆಗೆ ಅಭ್ಯಾಸ ಮಾಡಿಸಿದ ಬಡಿಗೇರ ಅವರು ನಮ್ಮ ಪಾಲಕರಂತೆಯೇ ಕಾಳಜಿ ವಹಿಸುತ್ತಿದರು. ಹೈಸ್ಕೂಲ ಅಭ್ಯಾಸದ ಈ ನಾಲ್ಕು ವರ್ಷಗಳಲ್ಲಿ ನನ್ನ ಹಾಡುಗಾರಿಕೆಗೆ, ಸಾಹಿತ್ಯದ ಒಲವಿಗೆ, ಅಭಿನಯಕ್ಕೆ, ಭಾಷಣ ಕಲೆಗೆ ಪ್ರೋತ್ಸಾಹಿಸಿ ಪುಟ ಕೊಟ್ಟವರೇ ಬಡಿಗೇರ ಗುರುಗಳು. ಪ್ರತಿ ವರ್ಷ ನಡೆಸುತ್ತಿದ್ದ ವಾರ್ಷಿಕೋತ್ಸವದಲ್ಲಿ ನಾಟಕಗಳನ್ನು ಕಲಿಸಿ ಆಡಿಸುತ್ತಿದ್ದರು. ಪ್ರತಿ ಸ್ಪರ್ಧೆಯಲ್ಲಿ ಭಾಗವಹಿಸಲು ಹುರಿದುಂಬಿಸುತ್ತಿದ್ದರು. ಹೈಸ್ಕೂಲುಗಳಲ್ಲಿ ಪಿರಿಯಡ್ ಸಿಸ್ಟಿಮ ಇರುತ್ತದಷ್ಟೇ. ಅದರಂತೆ ನಮ್ಮ ಹೈಸ್ಕೂಲಿನಲ್ಲಿಯೂ ಹತ್ತಾರು ಶಿಕ್ಷಕರು ಇದ್ದರು. ಆದರೆ ನನ್ನ ನೆನಪಿನಲ್ಲಿ ಉಳಿದವರೆಂದರೆ ಇದೇ ಮೂರು ಜನ ಶಿಕ್ಷಕರು— ಶ್ರೀ ಟಿ. ಬಸವರಾಜ, ಶ್ರೀ ಗೋವಿಂದ ರಡ್ಡಿ, ಶ್ರೀ ಬಡಿಗೇರ ಅವರು ಮಾತ್ರ. ಗೋವಿಂದ ರಡ್ಡಿ ಸರ್ ಉಣಕಲ್ಲಿನ ಅಚ್ಚಮ್ಮ ಕಾಲನಿಯಲ್ಲಿ ಮನೆ ಮಾಡಿಕೊಂಡು ಇದ್ದಾರೆ.

ಇನ್ನೊಬ್ಬ ಗುರುಗಳು ಇದ್ದರು. ಅವರ ಹೆಸರು ಬೆಂಗೇರಿ ಅಂತಾ ಇತ್ತು. ಅವರೂ ಇಂಗ್ಲೀಷ ಕಲಿಸುತ್ತಿದ್ದರು. ಆದರೆ ಸಿಗರೇಟ ಬಹಳ ಸೇದುತ್ತಿದ್ದರು. ಅವು ಬರ್ಕ್ಲೆ ಸಿಗರೇಟ ಅಂತಾ ನೆನಪಿನಲ್ಲಿ ಇದೆ. ಒಬ್ಬರೇ ಬಾಯಲ್ಲಿ ವಟಗುಡುತ್ತ, ಬೆರಳು ಮಣಿಸುತ್ತ, ಸಿಗರೇಟ ಬೂದಿ ಹಾರಿಸುತ್ತ ಹೋಗುತ್ತಿದ್ದರು. ಅವರು ತಮ್ಮ ಇಂತಹ ವರ್ತನೆಯಿಂದ ನನ್ನ ನೆನಪಿನಲ್ಲಿ ಉಳಿದಿದ್ದಾರೆ. ನಾಲ್ಕು ವರ್ಷಗಳ ವರೆಗೆ ಬೋರ್ಡಿಂಗಿನಲ್ಲಿ ಊಟ ಮಾಡುತ್ತ ಎಂಥದೇ ಊಟ ನೀಡಲಿ, ಅದರ ಬಗ್ಗೆ ಚಕಾರ ಶಬ್ದವೆತ್ತದೆ ಓದಿ ಎಸ್.ಎಸ್.ಸಿ. ಪಾಸು ಮಾಡಿದೆ. ನಮ್ಮ ಊರವರಿಗೆಲ್ಲ ಬಹಳ ಹೆಮ್ಮೆಯಾಯಿತು. ನಮ್ಮ ಘುಡುಸಾಹೇಬ ಮಾಸ್ತರರಿಗಂತೂ ಹಿಡಿಸಲಾರದಷ್ಟು ಸಂತೋಷವಾಯಿತು.

ಮುಂದೆ ಕಾಲೇಜಿಗೆ ಹೋಗುವ ತಾಕತ್ತು ಇರಲಿಲ್ಲ. ಟಿ.ಸಿ.ಎಚ್. ಮಾಡಿದರೆ ಮಾಸ್ತರಿಕೆ ಗ್ಯಾರಂಟಿ ಎಂಬ ಸಲಹೆ ಸಿಕ್ಕಿತು. ಹುಬ್ಬಳ್ಳಿಯ ಜೆ.ಜಿ.ಕೆ.ಪಿ.ಟಿ. ಕಾಲೇಜಿಗೆ ಬಂದು ೧೨೫ ರೂ. ಫೀ ತುಂಬಿ ಹೆಸರು ಹಚ್ಚಿಸಿದೆ. ೨೫ ರೂ. ಗಳನ್ನು ಮೂರುಸಾವಿರಮಠದಲ್ಲಿ ತುಂಬಿ ಒಂದು ವರ್ಷ ಊಟ ಮಾಡಲು ವ್ಯವಸ್ಥೆ ಮಾಡಿಕೊಂಡೆ. ಈ ೧೫೦ ರೂ. ಗಳನ್ನು ಬಡಿಗೇರ ಮಾನಪ್ಪ ಎಂಬವರ ಹತ್ತಿರ ನಮ್ಮಪ್ಪ ನಾನೂ ಹೋಗಿ ಒಂದು ವರ್ಷದ ಮಟ್ಟಿಗೆ ಸಾಲ ತಂದಿದ್ದೆವು.

ಹುಬ್ಬಳ್ಳಿಯ ಕಾಮರ್ಸ ಕಾಲೇಜಿನ ಎರಡು ಕೋಣೆಗಳಲ್ಲಿ ವರ್ಗಗಳು ನಡೆಯುತ್ತಿದ್ದವು. ಇಲ್ಲಿ ಎಸ್. ಎಸ್. ಮಠಪತಿ ಎಂಬವರು ನನ್ನ ಖಾಸಾ ಗುರುಗಳಾಗಿ ಲಭಿಸಿದರು. ಅವರೂ ಸಾಹಿತಿಗಳಾಗಿದ್ದರು, ವಿಶ್ವವಾಣಿ ಪತ್ರಿಕೆಯಲ್ಲಿ ಬರಹಗಾರರಾಗಿದ್ದರು, ನನ್ನ ಸಾಹಿತ್ಯಿಕ ಚಟುವಟಿಕೆಯಲ್ಲಿ ಇವರದೂ ಹೆಚ್ಚಿನ ಪಾಲು ಇರುತ್ತದೆ. ಆಗ ಟಿ.ಸಿ.ಎಚ್. ಒಂದೇ ವರ್ಷದ ತರಬೇತಿ ಇದ್ದುದರಿಂದ ಪ್ರಥಮ ತರಗತಿಯಲ್ಲಿ ಪಾಸಾದೆ. ಪರೀಕ್ಷೆ ಪಾಸಾದ ಒಂದೇ ತಿಂಗಳಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕನಾಗಿ ನಿಯುಕ್ತಿಗೊಂಡೆ. ೧೨ ವರ್ಷ ಹಳ್ಳಿಗಳಲ್ಲಿ ಶಿಕ್ಷಕನಾಗಿ ಕೆಲಸ ಮಾಡಿದೆ. ಓದಬೇಕೆಂಬ ಹಂಬಲ ತುಡಿಯುತ್ತಿತ್ತು. ಕಾಲೇಜಿಗೆ ರೆಗ್ಯುಲರ್ ಆಗಿ ಕಲಿಯಲು ಸಾಧ್ಯವಿದ್ದಿಲ್ಲ. ಅದೇ ಆಗ ಮೈಸೂರು ವಿ.ವಿ. ಅಂಚೆ ತೆರಪಿನ ಕಾಲೇಜು ಆರಂಭಿಸಿತ್ತು. ಪಿ.ಯು.ಸಿ. ಯಿಂದ ಬಿ.ಎ. ದ ವರೆಗೆ ಅಭ್ಯಾಸ ಮಾಡಿದೆ. ಇತ್ತ ಸಾಹಿತ್ಯದ ಕೃಷಿಯೂ ನಡೆದಿತ್ತು. ಕರ್ನಾಟಕ ವಿ.ವಿ. ಯಿಂದ ಸಮಿಸ್ಟರ ಯೋಜನೆಯಲ್ಲಿ ಎಂ.ಎ. ಪಾಸು ಮಾಡಿದೆ. ಒಂದು ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕನೆಂದು ಕರೆ ಬಂದಿತ್ತು. ಆದರೆ ಮ್ಯಾನೇಜಮೆಂಟ ಗದ್ದಲದಲ್ಲಿ

ಒಪ್ಪುವುದು ಬೇಡ ಎಂದು ಸರಕಾರಿ ನೌಕರಿಯಲ್ಲಿಯೇ ಉಳಿದೆ. ಮುಂದೆ ಅಣ್ಣಾಮಲೈ ವಿ.ವಿ. ಯಿಂದ ಇಂಗ್ಲೀಷ ಮೀಡಿಯಮ್‌ದಲ್ಲಿ ಬಿ.ಎಡ್. ಮುಗಿಸಿದೆ. ಶಿಕ್ಷಕನಾಗಿ ಪ್ರಾಥಮಿಕ ಶಾಲೆಯಲ್ಲಿ ಪ್ರೌಢಶಾಲೆಯಲ್ಲಿ ಸೇವೆ ಮಾಡುತ್ತ ಮೂವತ್ತು ಗ್ರಂಥಗಳನ್ನು ಹೊರತಂದಿದ್ದೇನೆ. ಸಾಹಿತ್ಯ, ಸಂಗೀತ, ಹಾಸ್ಯ ಅಂತಾ ಕಾರ್ಯಕ್ರಮದಲ್ಲಿ ತಿರುಗಾಡುತ್ತಿರುತ್ತೇನೆ. ನನಗೆ ಕಲಿಸಿದ ಗುರುಗಳು ನನ್ನ ನೆನಪಿನಲ್ಲಿ ಉಳಿದಂತೆ ಶಿಕ್ಷಕನಾಗಿ ದುಡಿದ ನಾನು ಎಷ್ಟು ಶಿಷ್ಯರ ಮನಸ್ಸಿನಲ್ಲಿ ಉಳಿದಿದ್ದೇನೆಯೋ! ಗೊತ್ತಿಲ್ಲ. ಉಳಿದಿರಬಹುದು. ಸ್ಮೃತಿಯನ್ನು ದಾಖಲಿಸುವ ಸಾಚಿ ಶಿಷ್ಯರು ಬೇಕಲ್ಲ! ಅದೇ ಒಜ್ಜೆ.

■ ಎಂ. ಡಿ. ಗೋಗೇರಿ : ನವಅಯೋಧ್ಯಾನಗರ, ಹುಬ್ಬಳ್ಳಿ-೫೮೦ ೦೩೨ ■

ಮೂರು ಕವಿತೆಗಳು

ಜಿ. ಕೆ. ರವೀಂದ್ರಕುಮಾರ್

೧. ಈ ಹೊತ್ತಿನ ಕವಿತೆ

ಈ ಹೊತ್ತಿನ ಪುಟಕ್ಕೆ ಯಾವ ಅಕ್ಷರವೋ
ಅವೇ ಅಕ್ಷರಗಳು ಸುಳಿದಾಡಿ ಪದವೊಂದಾಗುವಲ್ಲಿ
ಏನೆಲ್ಲ ಜರುಗುವುದೋ
ಹೀಗೆ ಕಾಯುವಾಗ ಇಲ್ಲೊಂದು ಗಾಯ
ಯಾರು ಮಾಡಿದ್ದೋ ಸುಮ್ಮನೆ ತರೆದದ್ದೋ
ಕವಿತೆಯೊಂದಾಗುವಲ್ಲಿ ಏನೆಲ್ಲ ಹೇಳುವುದೋ
ಹೇಳಿ ಕೇಳುವ ಸುಮ್ಮಾನದ ಹಿಂದೆ
ಬರೀ ನೆರಳುಗಳು ಅತ್ತ ಇತ್ತ ಎತ್ತ
ನೆರಳ ಇಂಗುವ ಬೆಳಗ
ಕಾಯುವ ಮೌನದಲ್ಲಿ
ಕವಿತೆಯ ಹೊಸ್ತಿಲಲ್ಲಿ
ಹೂವೊಂದು ಅರಳಿಬಿಟ್ಟಿತು
ಏನೊಂದೂ ಸೋಕಿಕೊಳ್ಳದೆ
ಈ ಹೊತ್ತಿನ ಚರಿತೆಯಂತೆ
ತಲ್ಲಣಗಳೆಲ್ಲ ಮರುಹೊತ್ತಿನಲ್ಲಿ ಕೂತಿವೆ
ಕವಿತೆ ಮರೆತಂತೆ
ಹೂವೇ ಕವಿತೆಯಾದ ಗೋಜಲಲ್ಲಿ
ಬೀಜ ಬಿತ್ತಿದ ಶೂರರಂತೆ
ಬಾಗಿದ ಹೂವ ಮುಂದೆ
ಈಗ ಅಕ್ಷರಗಳು ಕೂತಿವೆ
ಕವಿಯ ದಾಟಿದ ದೈನ್ಯದಂತೆ

೨. ಮರವೊಂದು ಬದುಕುತ್ತಿದೆ

ಬೇರು ಕಾಣದ ಕಾಂಡ
ಮುಗಿಲ ಮುಟ್ಟಲು ಯತ್ನಿಸುತ್ತಿದೆ
ನೆಲದೊಳಗಿನ ಬೇರಿಗೆ
ಮೇಲಿನ ಮರ ಗೊತ್ತೋ ಇಲ್ಲವೋ
ನೆಲವನ್ನು ಸೀಳುತ್ತಲೇ ಇದೆ
ನೆಲ ಹೇಳದ ಸತ್ಯ
ಮುಗಿಲು ಹೇಳದ ಸತ್ಯದಲ್ಲಿ
ಮರವೊಂದು ಬದುಕುತ್ತಿದೆ
ಬದುಕಿರುವ ಜೀವವೊಂದು ಪಾದಗಳೆಡೆ ನೋಡುತ್ತಿದೆ
ನೋಟವಿಲ್ಲದ ಹೆಜ್ಜೆ
ಹೆಜ್ಜೆಯಿಲ್ಲದ ಕಣ್ಣು
ಕಂಡ ಮಿಥ್ಯೆಯಂತೆ ಕಾಣದ ಸತ್ಯದಂತೆ
ಹಂಚಿಕೊಳ್ಳುತ್ತಿವೆ
ತಲೆ ಕೆಳಗಾಗಿ ನಿಂತ ಜೀವವೃಕ್ಷದ
ನಿತ್ಯ ಸಂಶಯಿಗಳಂತೆ
ತೋರಲಾಗದ ಪ್ರೀತಿಯ ಅಧ್ಯಾತ್ಮದಂತೆ

೩. ಒಂದು ನೂಲಿನ ಜಾಡು

ಯಾವೊಂದು ಭಾವವೂ ಹೂವ ತಿದ್ದಲಾರದು
ಹೂವಿಗೊಂದು ಭಾವ ಭಾವಕ್ಕೊಂದು ಹೂವು
ಅರಳಿ ಮುಡಿಯುವರೆಗೆ ಮುಡಿದು ಬಾಡುವೊಳಗೆ
ಹರಿದಾಡುವ ಭಾವವೂ ಹೂವಿನಂತೆ
ಹೂವು ಭಾವದ ಜೊತೆಗೆ ನಮ್ಮ ನಡಿಗೆ
ಹೂವೇ ಆದಂತೆ ಭಾವವೇ ಆದಂತೆ
ಎಂದು ಭಾಸವಾದಂತೆ
ಈ ತಿಳಿವ ಗಳಿಗೆಗೆ ಒಂದು ಕಣ್ಣ ಹನಿ
ನಿನ್ನ ಹೊಳೆವ ಕಣ್ಣಲ್ಲಿ
ನನ್ನ ರೆಪ್ಪೆ ತೇವದಲ್ಲಿ
ನಮ್ಮ ಅಪ್ಪುಗೆಯಲ್ಲಿ ಹೂವು ಅಪ್ಪಚ್ಚಿಯಾಗದಂತೆ
ತಡೆಯುವ ಭಾವ
ಐಕ್ಯವೇ ಆಗುವಂತೆ ಕಾಯುವ ಹೂವು
ತುಟಿ ಹೂವಿನೊಳಗೆ ಉಸುರುವ ಭಾವ
ಹುಡುಕುವ ತುಟಿಗಳು ಊರಿದಂತೆಲ್ಲಾ
ಹೂವೇ ಅರಳುತ್ತಿದೆ

ಹೂವ ಮೇಲೆ ಬಿದ್ದ ಕಣ್ಣ ಹನಿ
ಹೊಳೆವ ಭಾವ ಮಣಿ
        ಹುಡುಕಿ ಬಂದ ಬೆಳಗು ಇರುಳಂತೆ ತೆರಳಿ
        ಕರೆಯ ಬಂದ ಇರುಳು ಬೆಳಕಾಗಿ ಬೆಳೆದು
        ಹೂವಂತೆ ಸಲ್ಲುವುದೋ
        ಭಾವದಂತೆ ಕರಗುವುದೋ
ಸಂಭವದ ಹೊತ್ತಲ್ಲಿ
ನೂರು ಭಾವ
ಹೂವ ಮಾಲೆ
ಕಟ್ಟಿಕೊಳ್ಳುವ ತಂತು
ಕಿತ್ತ ತುದಿಯಿಂದ ಮತ್ತೆ ಕೀಳುವ ವರೆಗೆ
ಹೆಣೆವ ಬೆರಳುಗಳ ಅಲೆದಾಟ
ಒಂದು ನೂಲಿನ ಜಾಡು

■ ಜಿ. ಕೆ. ರವೀಂದ್ರಕುಮಾರ್ : ಕಾರ್ಯಕ್ರಮ ನಿರ್ವಾಹಕ, ಆಕಾಶವಾಣಿ, ಯಾದವಗಿರಿ
ಮೈಸೂರು-೫೭೦ ೦೨೦ ■

ಎಲ್ಲರೂ ಯಾರೂ

ರೇಣುಕಾ ಕೋಡಗುಂಟಿ

ಬರುವರಿಲ್ಲಿ ಬಹಳ ಜನ
ನನ್ನಲ್ಲಿಗೆ ಬರುವರಾರು
        ಇರುವರಿಲ್ಲಿ ಭಾರಿ ಜನ
        ಇದರಲ್ಲಿ ನನ್ನವರಾರು
ಮನೆಗೆ ಬಹರು ನೂರು ಜನ
ಮನಕೆ ಬರುವರಾರು
        ಸ್ನೇಹಿತರಿಲ್ಲಿ ಸಾವಿರ ಜನ
        ಸಿಹಿಯ ನೀಡುವರಾರು
ಕರುಳ ಬಂಧುಗಳು
ಹಲವು ಬಿಂದುಗಳು
ಪ್ರೀತಿ ತೋರುವರಾರು
        ಇಲ್ಲಿ ಇಹರು ಎಲ್ಲರೂ
        ಆದರೂ
        ಇಲ್ಲ ಯಾರೂ.

■ ರೇಣುಕಾ ಕೋಡಗುಂಟಿ : D/o ಅಯ್ಯಪ್ಪ ಕೋಡಗುಂಟಿ, ಹಳೆ ಬಸ್ ನಿಲ್ದಾಣದ ಹತ್ತಿರ
ಮಸ್ಕಿ-೫೮೪ ೧೨೪ ತಾ. ಲಿಂಗಸೂಗೂರು, ಜಿ. ರಾಯಚೂರು ■

೧. ಅಮ್ಮನಿಗೆ - ೧

ನಾನು ನನ್ನಮ್ಮನ ಹಾಗೆ.
ಪೀಚು ದೇಹ, ಎಲುಬು ಕಾಣುವ ಕೈ,
ಕಣ್ಣ ಕೆಳಗೆ ಹರಡಿದ ಕಪ್ಪು
ಒಳಗೆ ಹೊರೆಹೊರೆ ದುಃಖ
ಹೊತ್ತ ಎದೆ ಭಾರ
ಹೊರಲಾರದ ಚಿಂತೆ ಮನಸ್ಸಿಗೆ
ಮೇಲೊಂದು ಮುಗುಳ್ನಗೆ.

ನಾನು ನನ್ನಮ್ಮನ ಹಾಗೆ
ನನ್ನ ಕಣ್ಣೊಳಗೆ ಅವಳ ಕಣ್ಣೀರು.

೨. ಅಮ್ಮನಿಗೆ - ೨

ಅವಳು ತಲೆ ಎತ್ತಿ ನೋಡಿದರೆ
ಆಕಾಶದ ತುಂಬ ಬೆಳಕು
ಅವಳ ಕಣ್ಣಲ್ಲಿ ತೇಲೋ ಮೋಡ.
ಕಣ್ಣ ಮುಚ್ಚಿದರೆ,
ಆಕಾಶಕ್ಕೇ ಕತ್ತಲು
ಮೋಡ ಒಡೆದು ದುಃಖ ಧಾರಾಕಾರ.

೩. ಅಮ್ಮನಿಗೆ - ೩

ಮುಟ್ಟಿದರೆ ಬೆರಳ ತುದಿಗೆ
ಮೃದು,
ಗುಲಾಬಿ
ಪಕಳೆಗಳ ನವಿರು
ದಳ ದಳದಲ್ಲಿ ತಿಳಿರಂಗು
ತುಟಿಯಲ್ಲಿ ತಿಳಿ ಗುಲಾಬಿ ನಗು

ಎಸಳು,
ಹಾಳೆಗಳ ನಡುವೆ ಹಿಡಿದಿಟ್ಟ
ಗುಲಾಬಿ ಚಿಟ್ಟೆ.

ಮತ್ತೊಂದು ದಿನ
ಪುಟ ತೆರೆದರೆ,
ಗುಲಾಬಿ ಮಾಯ
ಪಕಳೆಗಳು ಪಾರದರ್ಶಕ

ಸುಳಿವೂ ಸಿಕ್ಕದ ಹಾಗೆ
ಮರೆಯಾದ ಗುಲಾಬಿ

ಏನೂ ಹೇಳದೆ
ಏನೂ ಕೇಳದೆ
ಸುಮ್ಮನೆ ಹಾಗೇ....!!
ಹೊರಟು ಹೋಯ್ತು(?)
ಸದ್ದು ಗದ್ದಲವಿಲ್ಲದೆ
ಕದ್ದು ಮಾಯವಾಗಿದ್ದು
ತಿಳಿಯಲೇಯಿಲ್ಲ....
ಅಳಿಸಿ ಗುಲಾಬಿಯ
ಗಾಳಿ ಮೈಯೊಳಗೆ
ಬೆರೆತು ಹೋದ ಬಣ್ಣ!!

ನನ್ನ ಅಮ್ಮನ ನೆನಪು
ಅವಳು ಎದೆಯಲ್ಲಿ ಹತ್ತಿಕ್ಕಿದ
ಹನಿ ಹನಿ ನೋವು
ನನ್ನೊಳಗೆ ನೋಯುತ್ತದೆ.

೪. ಅಮ್ಮನಿಗೆ - ೪

ನಿನ್ನ ಉಸಿರಿನ ಬಿಸಿ
ಸುಡುವ ಎದೆಯೊಳಗಿಂದ
ಹೊರಟ ಬಿಸಿ ನೋವು.

ತೊಡೆ ಮೇಲೆ ನಾನು
ಬೆಚ್ಚಗಿದೆ ನಿನ್ನೊಡಲು,
ತಲೆಯಿಟ್ಟು ಮಲಗಿದ್ದೇನೆ.

ಡವಗುಟ್ಟುವ ನಿನ್ನೆದೆ ಬಡಿತ
ಕೇಳುತ್ತಾ ಹಾಗೇ ನಿದ್ರಿಸಿದ್ದೇನೆ
ಕನಸು....
ಒಡೆಯುತ್ತದೆ!
ನಿನ್ನ ಕಣ್ಣೀರ ಬಿಸಿ ತಣ್ಣಗಾಗಿ
ನನ್ನ ಕೆನ್ನೆಯ ಮೇಲೆ.

ಕಣ್ಣು ಬಿಟ್ಟರೆ
ನನ್ನ ತೊಡೆಮೇಲೊಂದು ಕೂಸು
ಏದುಸಿರು, ಡವಗುಟ್ಟುವೆದೆ,
ತಡೆಹಿಡಿದ ಕಣ್ಣೀರು ಕಣ್ಣ ಕೊನೆಯಲ್ಲಿ.

೫. ಮಂಜಿನ ಹನಿ

ಗರಿಕೆ ಹುಲ್ಲಿನ ಚೂರಿಯಂಥ
ಮೊನಚು ತುದಿಯಲ್ಲೊಂದು
ಮಂಜಿನ ಹನಿ.
ಈಗಲೋ ಆಗಲೋ ತೊಟ್ಟಿಕ್ಕಿ
ನೆಲಕ್ಕುದುರೀತೆಂಬಂತೆ ಜೀಕು ಹಾಕುತ್ತಿದೆ.

ಒಂದು ಚಕ ಮಕಿ ಕಿರಣ
ಸಪ್ತರಂಗಿ ಹರಳು
ಉಬ್ಬಿದ ಜಲ, ಬಾಗಿದ ನೆಲ
ಅಂಕು ಡೊಂಕು ಚಹರೆ,
ಮುರುಟಿದಾಕಾಶ.

ಬಿಂಬಕ್ಕೆ ಪ್ರತಿ
ಬಿಂಬ.
ಕ್ಷಣ ಬಿಂದುವಿನಲ್ಲಿ ಬ್ರಹ್ಮಾಂಡ.

೬. ಕಣ್ಣುಮುಚ್ಚಾಲೆಯಾಟ

ಒಂದು ಎಲೆ ಹಾಗೇ ಮೆಲ್ಲಗೆ
ಮರದಿಂದ ಜಾರಿ ತೇಲುತ್ತ
ಜೀಕುತ್ತ ಗಾಳಿಪಟವಾಗುತ್ತ
ಗಾಳಿಯ ಮೈದಡವಿ ಜಾರುತ್ತ
ನೀರ ಮೇಲಿನ ದೋಣಿಯಾಯ್ತು.

ಬಣ್ಣ ಬಣ್ಣದ ಮೀನ ಜೊತೆ
ಅಲೆಯ ಮೇಲೆ ಹೊಳೆವ
ಹಳದಿ ಹಸಿರಿನ ಚಮಕು
ಸರಸರನೆ ಕಣ್ಣು ತಪ್ಪಿಸಿ
ನೀರ ಜೊತೆಯಲ್ಲಿ ಮರೆಯಾಯ್ತು.

ನೀರಿಗೂ ಗೊತ್ತಿಲ್ಲ, ಮೀನಿಗೂ ಗೊತ್ತಿಲ್ಲ.
ಗಾಳಿಗೂ ಗೊತ್ತಿಲ್ಲ. ಮರಕ್ಕೂ ಗೊತ್ತಿಲ್ಲ

ಈ ಕಣ್ಣುಮುಚ್ಚಾಲೆಯಾಟ.

■ ಮಮತಾ ಜಿ. ಸಾಗರ :
೩೦೧, ಮಾಫಾರ್ ಕ್ಯಾಸಲ್, ೧೨-೨-೭೯೦/೭೮,
ಅಯೋಧ್ಯಾನಗರ, ಮೆಹದಿಪಟ್ಟಣಮ್, ಹೈದರಾಬಾದ್-೫೦೦ ೦೨೮
■

ನಮ್ಮಮ್ಮಪ್ಪ

ರಾಗಿಣಿ ಆರ್.

'ನಮ್ಮಮ್ಮಪ್ಪ' ಎಂಬ ಪದದಲ್ಲಿ ನಮ್ಮಮ್ಮ ಹಾಗೂ ನಮ್ಮಪ್ಪ ಇಬ್ಬರೂ ಸೇರಿದ್ದಾರೆ. ಈ ಲೇಖನಕ್ಕೆ ಈ ತರಹ ಶೀರ್ಷಿಕೆ ಕೊಡಲು ಎರಡು ಕಾರಣಗಳಿವೆ. ಮೊದಲನೇ ಕಾರಣ— ನಮ್ಮ ತಂದೆಯು ಮರಣಾನಂತರ ನಮ್ಮಮ್ಮನೇ ಅಪ್ಪನಾಗಿ ನಿಂತು ನಮ್ಮನ್ನೆಲ್ಲಾ ಸಾಕಿದ್ದು. ಎರಡನೆಯದಾಗಿ, ನಮ್ಮಮ್ಮ ಹಾಗೂ ಅಪ್ಪ ಯಾವಾಗಲೂ ಒಟ್ಟಾಗಿಯೇ ಇರುತ್ತಿದ್ದುದು. ಅವರಿಬ್ಬರೂ ಬೇರೆ ಬೇರೆಯಾಗಿ ಇದ್ದದ್ದೇ ನನಗೆ ನೆನಪಿಲ್ಲ. ಯಾವಾಗಲೂ ಜೊತೆಯಲ್ಲಿಯೇ ನೋಡಿದ ನೆನಪು. ನಮ್ಮ ತಂದೆಗೆ ಯಾವುದೇ ಜಾಗಕ್ಕೆ ಹೋಗಬೇಕಾಗಿರಲಿ-ಬರಬೇಕಾಗಿರಲಿ, ಮನೆಯ ಹತ್ತಿರ ಹತ್ತೇ ಹೆಜ್ಜೆಯಲ್ಲಿರುವ ಮಾರುಕಟ್ಟೆಗೆ ಹೋಗಿ ಬರಬೇಕಾಗಿರಲಿ, ನಮ್ಮಮ್ಮ ಜೊತೆಯಲ್ಲಿಯೇ ಇರಬೇಕು. ಅವರ ಕಛೇರಿ ಕೆಲಸಗಳು, ವ್ಯವಹಾರಗಳಿದ್ದಾಗ ಮಾತ್ರ ಅಮ್ಮ ಮನೆಯಲ್ಲಿ. ಆ ಸಮಯದಲ್ಲಿ ನಾವೂ ಸ್ಕೂಲು, ಕಾಲೇಜು ಅಂತ ಹೊರಗೇ ಇರ್ತಿದ್ವಿ. ಸಂಜೆ ಬಂದ ನಂತರ ನಾವು ಅವರಿಬ್ಬರನ್ನೂ ಒಟ್ಟಿಗೇ ನೋಡ್ತಿದ್ವಿ.

ನಮ್ಮ ತಂದೆ ಆಗಿನ ಕಾಲದಲ್ಲೇ ಬಿ.ಎಸ್‌ಸಿ., ಎಮ್.ಇಡಿ. ನಮ್ಮ ಅಜ್ಜಿ ಬಹಳ ಕಷ್ಟಪಟ್ಟು ಅವರನ್ನು ಸಾಕಿ, ವಿದ್ಯೆ ನೀಡಿ ಒಂದು ಮಟ್ಟಕ್ಕೆ ತಂದರು ಅಂತ ಅವರು ಯಾವಾಗಲೂ ಹೇಳುವುದನ್ನು ಕೇಳಿದ್ದೇವೆ. ತಂದೆಯೂ ಅಷ್ಟೆ, ಅವರ ತಾಯಿಯನ್ನು ಅಷ್ಟೇ ಚೆನ್ನಾಗಿ ಅರ್ಥಮಾಡಿಕೊಂಡು ಅವರಂತೆ ನಡೆಯುತ್ತಿದ್ದರು. ಮೊದಲಿಗೆ ತಂದೆಯವರು ಹುಲ್ಲಹಳ್ಳಿಯ ಜೆ.ಎಸ್.ಎಸ್. ಪ್ರೌಢಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿ ಕೆಲಸಕ್ಕೆ ಸೇರಿದರು. ಸುಮಾರು ಹತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿ ಕೆಲಸ ಬಿಟ್ಟರು. ಕೆಲಸ ಬಿಡಲು ಕಾರಣ ಅವರಲ್ಲಿದ್ದ ಸ್ವಾಭಿಮಾನ, ಸ್ವತಂತ್ರ ಮನೋಭಾವ. ಬೇರೆಯವರ ಮುಂದೆ ಕೈಚಾಚಿ ನಿಲ್ಲುವುದು ಅವರಿಗೆ ಇಷ್ಟವಿಲ್ಲದ ಕೆಲಸ. ಆದರೂ ಪ್ರಾರಂಭದಲ್ಲಿ ಅವರಿಗಿದ್ದ ಅಂದರೆ ಅಜ್ಜಿಗಿದ್ದ ತೊಂದರೆಯನ್ನು ಯೋಚಿಸಿ, ಸ್ವಲ್ಪವಾದರೂ ದುಡಿದು ತಂದು ಅಮ್ಮನಿಗೆ ಸಹಾಯ ಹಸ್ತ ನೀಡಬೇಕೆಂಬ ಉದ್ದೇಶ ಇಟ್ಟುಕೊಂಡು ಅವರು ಕೆಲಸಕ್ಕೆ ಸೇರಿದ್ದರು. ನಂತರ ತನ್ನಲ್ಲಿದ್ದ ಬುದ್ಧಿಶಕ್ತಿಯಿಂದ ಸ್ವಂತ ವ್ಯಾಪಾರ ಪ್ರಾರಂಭಿಸಿದ್ದರು.

ವ್ಯಾಪಾರಕ್ಕೆ ಬಂಡವಾಳ ಎಲ್ಲಿಂದ ಬಂತಪ್ಪ ಅಂತ ಆಶ್ಚರ್ಯವಾಗಬಹುದು. ಅವರು ಅಂದಿನ ಮಾಧ್ಯಮಿಕ ತರಗತಿ ಆರಕ್ಕೆ ಗಣಿತ ಪಠ್ಯಪುಸ್ತಕವನ್ನು ರಚಿಸಿದ್ದರು, ಅದು ಸರಕಾರದಿಂದ ಮಾನ್ಯತೆ ಪಡೆದಿತ್ತು ಎಂದು ಹೇಳುತ್ತಿದ್ದರು. ಸರಕಾರದ ವತಿಯಿಂದ ಅವರಿಗೆ ಕೈತುಂಬಾ ಹಣವೂ ಸಿಕ್ಕಿತಂತೆ. ಇದರ ಸಹಾಯದಿಂದ ಅವರು ಒಂದಿಷ್ಟು ಜಮೀನು ಕೊಂಡುಕೊಂಡರು. ಎರಡು ಪಂಪ್‌ಸೆಟ್, ೫೦೦ ತೆಂಗಿನ ಮರ, ೩೦೦ ಮಾವಿನ ಮರ ಹೀಗೆ ಇನ್ನೂ ಏನೇನೋ ಫಲ ಕೊಡುವ ಮರಗಳಿದ್ದಂತಹ ಜಮೀನು. ಆಳುಗಳಿಗೆ ಅಲ್ಲೇ ಮನೆ ಕಟ್ಟಿಸಿ. ಮಧ್ಯೆ ಮಧ್ಯೆ ಬಿಡುವು ಮಾಡಿಕೊಂಡು ಹೋಗಿ ಜಮೀನನ್ನು ನೋಡಿಕೊಂಡು ಬರುತ್ತಿದ್ದುದು ನನಗೆ ಚೆನ್ನಾಗಿ ನೆನಪಿದೆ. ನಮ್ಮನ್ನೂ ಸಹ ೧೫ ದಿನಗಳಿಗೊಮ್ಮೆ ಭಾನುವಾರ ಕರೆದುಕೊಂಡು ಹೋಗುತ್ತಿದ್ದರು. ನಾವೂ ಚಿಕ್ಕವರಾದ್ದರಿಂದ ಏನೋ ಸಂತೋಷ, ಏನೋ ಹೇಳಿಕೊಳ್ಳಲಾಗದ ಸಂಭ್ರಮ.

ಇದರ ಜೊತೆಗೆ ಒಂದು ಮುದ್ರಣಾಲಯವೂ ಇತ್ತು. ಮೊದಲಿಗೆ ಮುದ್ರಣಾಲಯದಲ್ಲಿ ಚಿಕ್ಕ ಚಿಕ್ಕ ಯಂತ್ರಗಳನ್ನು ಇಟ್ಟುಕೊಂಡು ಕಾರ್ಯ ನಿರ್ವಹಿಸುತ್ತಾ ಕೊನೆಗೆ ದೊಡ್ಡ ದೊಡ್ಡ ಮುದ್ರಣ ಯಂತ್ರಗಳನ್ನು ಕೊಳ್ಳುವ ಸಾಮರ್ಥ್ಯವನ್ನು ಪಡೆದರು. ಅಂದಿನ ಕಾಲದಲ್ಲಿ ಸರಕಾರಿ ಮುದ್ರಣಾಲಯವನ್ನು ಬಿಟ್ಟರೆ ಹಿಂದಿಯನ್ನು ಮುದ್ರಿಸುವ ವ್ಯವಸ್ಥೆ ಇದ್ದಿದ್ದು ನಮ್ಮ ಮುದ್ರಣಾಲಯದಲ್ಲೇ ಎಂಬುದಾಗಿ ಹೇಳಲಾಗುತ್ತಿತ್ತು. ಈ ಮುದ್ರಣಾಲಯ ಅಂದಿನ ದಿನಗಳಲ್ಲಿ ಅಂದರೆ, ೬೦-೭೦ ನೇ ದಶಕದಲ್ಲಿ ಹೆಸರುವಾಸಿಯಾದದ್ದು. ಹೀಗೆ ಪರಿಶ್ರಮಪಟ್ಟು ಸ್ವಂತ ದುಡಿಮೆಯಿಂದ ಸಾಕಷ್ಟು ಹಣ ಹಾಗೂ ಹೆಸರು ಸಂಪಾದನೆ ಮಾಡಿಕೊಂಡರು. ಅವರ ಪೂರ್ಣ ಹೆಸರು ರಾಜಯ್ಯಂಗಾರ್. ಹೆಸರಿಗೆ ತಕ್ಕಂತೆ 'ರಾಜ'ನ ಹಾಗೆಯೇ ಸುಮಾರು ವರ್ಷಗಳ ಕಾಲ ಬಾಳ್ವೆ ಮಾಡಿದರು. ಇದೆಲ್ಲವೂ ಗತವೈಭವ.

ಇನ್ನು ಅವರ ಬುದ್ಧಿಶಕ್ತಿಯನ್ನು ಪರಿಚಯ ಮಾಡಿಸುವುದಾದರೆ ನಮ್ಮ ಲೆಕ್ಕದಲ್ಲಿ ನಮ್ಮ ತಂದೆಯಂತಹ ಬುದ್ಧಿವಂತ ಇಡೀ ಭೂಮಂಡಲದಲ್ಲೇ ಇಲ್ಲ ಎಂಬುದಾಗಿತ್ತು. ಪ್ರತಿಯೊಂದು ಹೆಜ್ಜೆಯಲ್ಲೂ ಅತಿ ಶಿಸ್ತು, ಅತಿ ಗಾಂಭೀರ್ಯ, ಹೊರಗಿನ ಜನರೊಂದಿಗೆ ಅತಿ ಕಡಿಮೆ ಮಾತು (ನಮಗೆ ತಿಳಿದಂತೆ), ಅತಿ ಛಲ, ಅತಿ ಹಠ, ಅಂತೆಯೇ ಅತಿ ಸಿಟ್ಟು. ಬೇರೆ ಎಲ್ಲವೂ ನಮಗೆ ಸಹನೀಯ. ಆದರೆ ಸಿಟ್ಟು ಮಾತ್ರ ನಮಗೆ ಅಸಹನೀಯವಾಗಿತ್ತು. ನಮಗೆ ಅವರ ಸಿಟ್ಟೆಂದರೆ ಅತಿ ಭಯ. ಯಾವ ಗಳಿಗೆಯಲ್ಲಿ ಯಾರ ಮೇಲೆ ಸಿಟ್ಟಿನ ಸುರಿಮಳೆಯಾಗುತ್ತಿತ್ತೋ ಹೇಳಲು ಆಗುತ್ತಿರಲಿಲ್ಲ. ಎಷ್ಟೋ ಸಾರಿ, ಪರವಾಗಿಲ್ಲ ಈವತ್ತು ತಂದೆಯವರು ಖುಷಿಯಾಗಿದ್ದಾರೆ ಅಂದುಕೊಂಡು ಹತ್ತಿರ ಹೋಗಿ ಕೂತರೆ, ಮಾತಾಡುತ್ತಾ ಆಡುತ್ತಾ ಹೀಗೇ ಯಾವುದೋ ವಿಷಯಕ್ಕೆ ಕೋಪಿಸಿ ನಮ್ಮನ್ನು ಬೈಯುವುದು, ಹೊಡೆಯುವುದು ಮಾಡಿಬಿಡುತ್ತಿದ್ದರು. ಆದರೆ ಆ ಹೊಡೆತದಲ್ಲಿ, ಕೋಪದಲ್ಲಿ ಪ್ರೀತಿಯೇ ತುಂಬಿರುತ್ತಿತ್ತು. ಊಟಕ್ಕೆ ನಮ್ಮ ಮನೆಯಲ್ಲಿ ಯಾವಾಗಲೂ ಐದೂ ಜನ– ನಾನು, ಅಕ್ಕ, ತಮ್ಮ, ತಂದೆ, ತಾಯಿ– ಒಟ್ಟಿಗೆ ಕೂರುವುದು ಪದ್ಧತಿ.

ನಮ್ಮ ತಂದೆ, ಅವರ ಒಂದು ಪಕ್ಕ ನಾನು, ಇನ್ನೊಂದು ಪಕ್ಕ ಅಕ್ಕ, ಎದುರಿಗೆ ಅಮ್ಮ, ಅವರ ಪಕ್ಕದಲ್ಲಿ ತಮ್ಮ ಹೀಗೆ ಸುತ್ತ ಕೂರುವುದಿತ್ತು. ತಂದೆಯ ಎಡಪಕ್ಕ ಕುಳಿತುಕೊಳ್ಳಲು ನನಗೆ, ಅಕ್ಕನಿಗೆ ಇಬ್ಬರಿಗೂ ಭಯ. ಯಾಕೆಂದರೆ ಊಟ ಮಾಡುವಾಗ ಅವರ ಎಡಗೈ ಖಾಲಿ ಇರುತ್ತಿತ್ತು. ಮೊದಲೇ ಹೇಳಿದಂತೆ ಎಲ್ಲಾ ವಿಚಾರದಲ್ಲೂ ಶಿಸ್ತು. ಊಟ ಕಲೆಸುವುದರಿಂದ ಹಿಡಿದು, ನೀರು ಕುಡಿಯುವ ರೀತಿ, ತಿನ್ನುವ ರೀತಿ, ಕೊನೆಯಲ್ಲಿ ತಟ್ಟೆಯಲ್ಲಿ ಒಂದಗುಳೂ ವ್ಯರ್ಥ ಮಾಡದೆ ಶುದ್ಧವಾಗಿ ತಿನ್ನುವ ರೀತಿ, ಎಲ್ಲಕ್ಕೂ ಶಿಸ್ತು. ಇದರಲ್ಲಿ ಒಂದಿಷ್ಟು ಆಚೆ-ಈಚೆ ಆದರೆ ಎಡಗೈಯಿಂದ ನಮ್ಮ ತೊಡೆಯ ಮೇಲೆ ರಪ್ಪನೆ ಬಾಸುಂಡೆ ಬರುವಂತೆ ಬೀಳುತ್ತಿತ್ತು. ನೋವಾದರೆ ಜೋರಾಗಿ ಅಳುವಂತೆ ಇಲ್ಲ. ಬಾಸುಂಡೆ ನೋಡಿಕೊಳ್ಳುತ್ತಾ ಕಣ್ಣಲ್ಲಿ ನೀರು ಹರಿಸುತ್ತಾ ಊಟವನ್ನು ಪೂರ್ತಿ ಮಾಡಬೇಕು. ಅರ್ಧದಲ್ಲಿ ಬಿಟ್ಟು ಏಳುವಂತಿಲ್ಲ. ಹೀಗೇ ಇನ್ನೂ ಏನೇನೋ ನಿಯಮಗಳು. ಈ ಎಡಗೈ ಚಳಕಕ್ಕೆ ಯಾವಾಗಲೂ ಸಿಕ್ಕುತ್ತಿದ್ದವಳು ನಾನೇ. ಹೀಗೆ ಅತಿ ಹೆಚ್ಚು ಏಟು ತಿನ್ನುತ್ತಿದ್ದವಳು ನಾನೇ. ಅಕ್ಕ ಯಾವಾಗಲೂ ನಿಃಶಬ್ದ.

ಹೆಚ್ಚು ಮಾತಾಡುತ್ತಿರಲಿಲ್ಲ. ಹೇಳಿದ್ದನ್ನು ಹೇಳಿದಂತೆ ಕೇಳಿಕೊಂಡು ಪಾಲಿಸುವವಳು. ದೊಡ್ಡವರಿಗೆ ಯಾವತ್ತೂ ಎದುರಾಡುವವಳಲ್ಲ. ನಾನು ಹಾಗಲ್ಲ. ಅವಳಿಗೆ ತದ್ವಿರುದ್ಧ. ಏನು ಮಾಡಿದರೂ ಅದಕ್ಕೊಂದು ಪ್ರಶ್ನೆ. ತಂದೆ ಹೊಡೆದರೆ ಯಾಕೆ ಹೊಡೆದೆ, ನಾನೇನು ಮಾಡಿದೆ. ನೀನು ಯಾಕೆ ನನ್ನನ್ನೇ ಹೊಡೆಯೋದು, ಅವರಲ್ಲೇನು ತಪ್ಪು, ಇದ್ಯಾಕೆ ಮಾಡಬಾರದು, ಅದ್ಯಾಕೆ ಹೇಳಬಾರದು, ಹೀಗೇ... ಅವರೇನು ಬೈದರೂ ಅದಕ್ಕೆ ಹಿಂತಿರುಗಿ ಒಂದು ಪ್ರಶ್ನೆ. ಹಿಂತಿರುಗಿ ಮಾತನಾಡಿದ್ದಕ್ಕೆ ಒಂದು ಏಟು ರಪ್ಪನೆ ಬೀಳುತ್ತಿತ್ತು. ತಂದೆಯವರ ಸಹನೆಯನ್ನು ಪರೀಕ್ಷಿಸುತ್ತಾ ಬೆಳೆದವಳು ನಾನು.

ನಮ್ಮ ತಂದೆಯವರ ದೂರದರ್ಶಿತೆ ನಿಜಕ್ಕೂ ಮೆಚ್ಚುವಂತಹುದೇ. ಭವಿಷ್ಯದ ಬಗ್ಗೆ ಯೋಚಿಸಿ ಅದಕ್ಕೆ ತಕ್ಕಂತೆ ನಡೆಯುವುದು ಅವರ ವಿಶೇಷ ಗುಣ. ತಂದೆಗೆ ಡಯಾಬಿಟಿಸ್. ಈ ಕಾಯಿಲೆ ನಮ್ಮ ಅಜ್ಜಿಯಿಂದ ತಂದೆಗೆ ಆನುವಂಶಿಕವಾಗಿ ಬಂದಿತ್ತು. ನಮ್ಮ ಅಜ್ಜಿಯವರು ತಮ್ಮ ೫೨ ನೇ ವಯಸ್ಸಿನಲ್ಲಿ ತೀರಿಕೊಂಡರು. ಅದೇಕೋ ಏನೋ ತಂದೆಯವರಿಗೆ ಮನಸ್ಸಿನಲ್ಲಿ ತಾನೂ ತನ್ನ ತಾಯಿಯಂತೆ ಸರಿ ೫೨ ವಯಸ್ಸಿಗೇ ಸಾಯುತ್ತೇನೆ ಎಂಬ ಭ್ರಮೆಯಿತ್ತು. ಈ ಭಾವನೆ ಎಷ್ಟು ಆಳವಾಗಿತ್ತು ಎಂದರೆ ಈ ಮಾತನ್ನು ಪದೇ ಪದೇ ತಾಯಿಗೆ ಹೇಳುವುದಿತ್ತು. ಇದರೊಂದಿಗೆ ಇನ್ನೂ ಒಂದು ಮಾತನ್ನು ಹೇಳುತ್ತಿದ್ದರು. ಈ ಎರಡೂ ಹೆಣ್ಣುಮಕ್ಕಳಿಗೆ ಆದಷ್ಟೂ ಬೇಗ ಮದುವೆ ಮಾಡಿಬಿಡಬೇಕು. ಇಲ್ಲದಿದ್ದರೆ ನಾನೇನಾದರೂ ಮಧ್ಯದಲ್ಲಿಯೇ ಸತ್ತುಹೋದರೆ ಗಂಡು ಹುಡುಕುವುದು, ಮದುವೆ ಮಾಡುವುದು ಎಲ್ಲವೂ ನಿನಗೆ ಕಷ್ಟವಾಗುತ್ತದೆ. ಹಾಗೆಂದು ಹೇಳಿ ನಾವಿಬ್ಬರೂ– ನಾನು, ಅಕ್ಕ– ಚಿಕ್ಕವರಿರುವಾಗಲೇ ಮದುವೆ ಮಾಡಿಯೇ ಬಿಟ್ಟರು. ನಮ್ಮಗಳ ಬಾಣಂತನ, ಮೊಮ್ಮಕ್ಕಳ ದೇಖ್‌ರೇಖ್ ಎಲ್ಲ ಕರ್ತವ್ಯಗಳನ್ನೂ ಪೂರೈಸಿಬಿಟ್ಟರು. ತಾವಂದುಕೊಂಡಂತೆಯೇ ತಮ್ಮ ೫೨ ನೇ ವಯಸ್ಸಿನಲ್ಲಿಯೇ ಮರಣ ಹೊಂದಿಬಿಟ್ಟರು. ಅವರಿಗೆ ಯಾವತ್ತೂ ನನ್ನ ತಮ್ಮನ ಚಿಂತೆ ಇರಲಿಲ್ಲ. ಯಾಕೆಂದರೆ ಅವನು ಗಂಡು ಹುಡುಗ, ಹೇಗೋ ನಡೆಯುತ್ತದೆ ಅನ್ನುವ ಮನೋಭಾವನೆ ಅವರಲ್ಲಿತ್ತು.

ವಸ್ತುಗಳನ್ನು ಜೋಪಾನವಾಗಿ ಕಾಪಾಡುವ ಗುಣ ನಮ್ಮ ಮೂವರಿಗೂ ತಂದೆಯಿಂದ ಬಂದಿತ್ತು. ಇದರಲ್ಲಿ ನಮ್ಮ ತಾಯಿಯವರ ಪಾತ್ರವೂ ಹಿರಿದೇ. ಯಾವುದೇ ಒಂದು ಸಣ್ಣ ಗುಂಡುಸೂಜಿಯಾಗಲಿ, ಸೂಜಿಯಾಗಲಿ ಅಥವಾ ಅಮೂಲ್ಯವಾದ ಚಿನ್ನ, ಬೆಳ್ಳಿ ವಸ್ತುವಾಗಲೀ ಕೊಂಡುಕೊಂಡ ದಿನ ಹೇಗಿತ್ತೋ ಅದೇ ಸ್ಥಿತಿಯಲ್ಲಿ ಜೋಪಾನವಾಗಿ ಇರಬೇಕು. ಯಾವುದನ್ನೂ ಹಾಳು ಮಾಡುವಂತಿಲ್ಲ. ಸ್ಥಳ ಬದಲಾವಣೆ ಮಾಡುವಂತಿಲ್ಲ. ನಿದ್ದೆಗಣ್ಣಲ್ಲಿ ಹೋಗಿ ಕೈಹಾಕಿದರೂ ಆ ವಸ್ತು ಅದೇ ಜಾಗದಲ್ಲಿ ಸಿಕ್ಕಬೇಕು. ಇಲ್ಲದಿದ್ದರೆ ದೊಡ್ಡ ಪ್ರಳಯವೇ ನಡೆದುಬಿಡುತ್ತಿತ್ತು. ಇಂತಹ ಶಿಸ್ತಿನಲ್ಲಿ ಬೆಳೆದವರು ನಾವು ಮೂವರು. ನಾವುಗಳೂ ಕೂಡ ನಮ್ಮ ನಮ್ಮ ಮಕ್ಕಳನ್ನು ಇದೇ ಶಿಸ್ತಿನಿಂದ ಬೆಳೆಸಲು ಪ್ರಯತ್ನಪಟ್ಟರೂ ಸಹ ಈಗಿನ ವ್ಯಸ್ತ ಜೀವನದಲ್ಲಿ ಅದು ಸಫಲವಾಗದೇ ಹೋಯಿತು. ಯಾವುದೇ ಹೊಸ ವಸ್ತು ಕೊಂಡು ಬಂದು ಒಂದೆರಡು ಸಲ ಉಪಯೋಗಿಸಿದ ನಂತರ ಮತ್ತೆ ಬೇಕಾದಾಗ ಮನೆಯೆಲ್ಲಾ ಹುಡುಕಿದರೂ ಸಿಕ್ಕದೆ, ಪುನಃ ಅದಕ್ಕಾಗಿ ಇನ್ನಷ್ಟು ಹಣ ವ್ಯಯ ಮಾಡಬೇಕಾದ ಸ್ಥಿತಿ ಈಗ

ನಮ್ಮ ಮಕ್ಕಳೊಂದಿಗೆ. ಹೇಗೋ ಜೀವನ ನಡೆದರೆ ಸಾಕು ಎಂಬುದು ನಮ್ಮ ಈಗಿನವರ ನಿಯಮವಾದರೆ 'ಹೀಗೇ ಜೀವನ ನಡೆಯಬೇಕು' ಎಂಬುದು ನನ್ನ ಅಪ್ಪ, ಅಮ್ಮನ ನಿಯಮವಾಗಿತ್ತು. ಇವರಿಬ್ಬರದೂ ಈ ವಿಷಯದಲ್ಲಿ ಮಾತ್ರವಲ್ಲ, ಬಹುತೇಕ ಎಲ್ಲಾ ವಿಷಯಗಳಲ್ಲಿ ಹೇಳಿ ಮಾಡಿಸಿದ ಜೋಡಿ ಎಂದೇ ಹೇಳಬಹುದು.

ನಮ್ಮ ಅಪ್ಪ, ಅಮ್ಮನಲ್ಲಿ ಇದ್ದಂತಹ ಅತ್ಯಂತ ವಿಶೇಷ ಗುಣವನ್ನು ನಾನಿಲ್ಲಿ ಸ್ಮರಿಸಲೇಬೇಕಾಗಿದೆ. ಅವರಿಬ್ಬರಲ್ಲೂ ಯಾವುದೇ ತರಹದ ಜಾತಿಭೇದ, ಧರ್ಮಭೇದ ಇದ್ದಿರಲಿಲ್ಲ. ನಮ್ಮದು ಶ್ರೀವೈಷ್ಣವ ಸಂಪ್ರದಾಯ. ಶ್ರೀವೈಷ್ಣವರಿಗೆ ಗಣೇಶನ ಹಬ್ಬವಿಲ್ಲ. ಆದರೆ ಈ ಹಬ್ಬವನ್ನು ನಾವು ವಿಜೃಂಭಣೆಯಿಂದಲೇ ಆಚರಿಸುತ್ತಿದ್ದೆವು. ವರ್ಷಪೂರ್ತಿ ಎಲ್ಲಾ ಹಬ್ಬಗಳನ್ನೂ ಆಚರಿಸುತ್ತಿದ್ದೆವು. ೨೫-೩೦ ವರ್ಷಗಳ ಹಿಂದೆ ಪ್ರತಿ ಭಾನುವಾರ ರೇಡಿಯೋ ದಲ್ಲಿ 'ಏಸು ಅಳೈಕ್ಕಿರಾನ್' ಎಂಬ ಒಂದು ಕಾರ್ಯಕ್ರಮ ಪ್ರಸಾರವಾಗುತ್ತಿತ್ತು. ತಂದೆಯವರು ಆ ಕಾರ್ಯಕ್ರಮ ಶುರುವಾಗುವ ಮೊದಲು ಎರಡು ಮೇಣದ ಬತ್ತಿಗಳನ್ನು ರೇಡಿಯೋದ ಅಕ್ಕಪಕ್ಕ ಹತ್ತಿಸಿಟ್ಟು ಶ್ರದ್ಧೆಯಿಂದ, ಭಕ್ತಿಭಾವದಿಂದ ಕಾಯಕ್ರಮ ಕೇಳುತ್ತಿದ್ದರು. ಇದರಲ್ಲಿ ಮನೆಯ ಎಲ್ಲರೂ ಸಮಭಾಗಿಗಳು. ಕಾಕತಾಳೀಯವೋ ಎಂಬಂತೆ ಕ್ರಿಸ್ತನ ಕರುಣೆಯಿಂದಲೋ ಏನೋ ನಾನೀಗ ಕ್ರೈಸ್ತ ಮಿಶನರಿ ಶಾಲೆಯಲ್ಲಿ ೨೩ ವರ್ಷದಿಂದ ಸೇವೆ ಸಲ್ಲಿಸುತ್ತಿದ್ದೇನೆ. ತಂದೆ, ತಾಯಿಗೆ ಅಲ್ಲಾಹ್ ಎಂದರೂ ಭಕ್ತಿ, ಬುದ್ಧ, ಮಹಾವೀರ ಹೀಗೆ ಯಾರಲ್ಲಿಯೂ ಭೇದವಿಲ್ಲದ ಭಕ್ತಿ. ಇಂತಹ ವಾತಾವರಣದಲ್ಲಿ ಬೆಳೆದ ನಮ್ಮ ಮೂವರಲ್ಲಿಯೂ ಅದೇ ಗುಣ. ಆಹಾರಪದ್ಧತಿಯ ಭೇದಭಾವ ಬಿಟ್ಟರೆ ಮತ್ತ್ಯಾವ ಭೇದಭಾವವೂ ನಮ್ಮಲ್ಲಿ ಇಲ್ಲ.

ಇನ್ನು ನನ್ನ ತಾಯಿಯವರ ಬಗ್ಗೆ ಹೇಳುವುದಾದರೆ ಅವರ ವರ್ಣನೆಗೆ ಯಾವ ಪುಸ್ತಕ, ಯಾವ ಲೇಖನಿ, ಯಾವ ಮಸಿಯೂ ಸಾಲುವುದಿಲ್ಲ ಎಂತಲೇ ಹೇಳಬೇಕಾಗಿದೆ. ತಾಯಿಯೇ ಪ್ರತ್ಯಕ್ಷ ದೇವರು, ತಾಯಿಯೇ ಮೊದಲ ಗುರು ಎಂಬ ಯಾವುದೇ ನಾಣ್ಣುಡಿಯ ಸತ್ಯತೆಯನ್ನು ಪರಿಚಯಿಸಿಕೊಟ್ಟವರು ಅವರು. ಅವರಲ್ಲಿದ್ದ ಶಾಂತ ಸ್ವಭಾವ ಮುಂಗೋಪಿಯಾದ ತಂದೆಯನ್ನೂ ಕೆಲವೊಮ್ಮೆ ಮೂಕರನ್ನಾಗಿ ಮಾಡಿಬಿಡುತ್ತಿತ್ತು. ನನ್ನ ತಾಯಿಗೆ ಮದುವೆಯಾದಾಗ ಕೇವಲ ಹದಿನಾಲ್ಕೂವರೆ ವರ್ಷ ವಯಸ್ಸು. ನನ್ನ ದೊಡ್ಡಮ್ಮನನ್ನು ಹೆಣ್ಣು ನೋಡಲು ಬಂದ ನನ್ನ ತಂದೆ ಹೆಣ್ಣು ನೋಡಿಕೊಂಡು, ವಾಪಸ್ಸು ಹೊರಡಲು ಹೊರಗೆ ಬಂದಾಗ ತಲೆಗೆ ನೀರು ಹಾಕಿಸಿಕೊಂಡು ಕೂದಲು ಒಣಗಿಸುತ್ತಾ ಕೂತಿದ್ದ ಈ ಹುಡುಗಿಯನ್ನು (ನನ್ನ ತಾಯಿ) ನೋಡಿದರಂತೆ. ತಕ್ಷಣವೇ ಅಜ್ಜಿಯ ಹತ್ತಿರ ನನಗೆ ಆ ಹುಡುಗಿ (ದೊಡ್ಡಮ್ಮ) ಬೇಡ ಇವಳನ್ನೇ ಮದುವೆ ಆಗ್ತೀನಿ ಅಂದರಂತೆ. ನನ್ನ ತಂದೆ ದೊಡ್ಡ ಶ್ರೀಮಂತ ಆಗಿದ್ದರಿಂದ ಅವರಿಚ್ಛೆಯಂತೆ ದೊಡ್ಡಮ್ಮನಿಗೆ ಬೇರೆ ಹುಡುಗನನ್ನು ಹುಡುಕಿದರಾಯ್ತು ಎಂದುಕೊಂಡು ಮೊದಲಿಗೆ ನನ್ನ ತಾಯಿಯ ಮದುವೆಯನ್ನೇ ಮಾಡಿಬಿಟ್ಟರಂತೆ. ನನ್ನ ಅಮ್ಮನಿಗೆ ಇಬ್ಬರು ಮಕ್ಕಳು ಹುಟ್ಟಿದ ನಂತರ ದೊಡ್ಡಮ್ಮನಿಗೆ ಮದುವೆಯಾಯಿತು. ಹಾಗಂತ ನನ್ನ ದೊಡ್ಡಮ್ಮನೇನೂ ಕುರೂಪಿಯಲ್ಲ. ಬೆಳ್ಳಗೆ ದಂತದ ಗೊಂಬೆಯಂತಿದ್ದರು. ನನ್ನ ತಾಯಿ ಇನ್ನೂ ತಿದ್ದಿದ ಗೊಂಬೆ. ಅವರ ರೂಪ, ಬಣ್ಣ, ಗುಣ

ಯಾವೊಂದೂ ನಮ್ಮ ಮೂವರಲ್ಲಿ ಯಾರಿಗೂ ಪೂರ್ತಿಯಾಗಿ ಬರಲಿಲ್ಲ. ನನ್ನ ತಮ್ಮನ ಮಗಳಲ್ಲಿ(೯ ವರ್ಷ ವಯಸ್ಸು) ಸ್ವಲ್ಪ ಅಮ್ಮನ ಛಾಯೆ ಕಾಣುತ್ತಿದೆ. ಇದು ಮುಂದುವರಿಯುತ್ತದೋ ಇಲ್ಲವೋ ಎಂಬುದನ್ನು ಕಾದು ನೋಡಬೇಕಾಗಿದೆ.

ನನ್ನ ತಾಯಿ ಪದ್ಮಾ ೫ ನೇ ಫಾರ್ಮ್ ಓದಿ ಮುಂದಿನ ತರಗತಿಗೆ ಕಾಲಿಡಬೇಕಿತ್ತು, ಆಗಲೇ ಮದುವೆಯಾಯಿತು. ಅವರು ಬಹಳ ಪ್ರತಿಭಾವಂತೆ. ನನ್ನ ತಂದೆಯವರ ಮರಣವಾದಾಗ ಅವರಿಗೆ ಕೇವಲ ೩೯ ವರ್ಷ ವಯಸ್ಸು. ನಮ್ಮ ಮನೆಯಲ್ಲಿ ಅದುವರೆಗೆ ತಂದೆಯವರದ್ದೇ ಸರ್ವಾಧಿಕಾರ. ಆದರೆ ತಾಯಿಗೆ ಹೇಳದೇ, ಅವರನ್ನು ಕೇಳದೇ ತಂದೆ ಯಾವ ಕೆಲಸವನ್ನೂ ಮಾಡುತ್ತಿರಲಿಲ್ಲ. ಆದರೆ ಅಂತಿಮ ನಿರ್ಧಾರ ತಂದೆಯವರದ್ದೇ. ತಂದೆಯ ಮರಣಾನಂತರ ಸಂಪೂರ್ಣ ಮನೆಯ ಹೊಣೆ ಅಮ್ಮನ ಮೇಲೆಯೇ. ಅವರ ಪ್ರತಿಭೆ ಆಗ ಒಂದೊಂದಾಗಿ ಬೆಳಕಿಗೆ ಬರಲುತೊಡಗಿತು. ಅವರನ್ನು 'ಆಲ್‌ರೌಂಡರ್' ಎಂದರೆ ತಪ್ಪಾಗಲಾರದು. ಅವರ ಸಂಪೂರ್ಣ ಪರಿಚಯ, ಹತ್ತಿರದ ಪರಿಚಯವಿದ್ದ ಕೆಲವರು ನೀವು ಡಾಕ್ಟರಾಗಬೇಕಿತ್ತು, ನೀವು ಲಾಯರಾಗಬೇಕಿತ್ತು, ನೀವು ಅಧ್ಯಾಪಕರಾಗಬಹುದಿತ್ತು, ನೀವು ದೇಶವನ್ನು ಆಳುವ ನಾಯಕರಾಗಲು ಅರ್ಹರು, ನೀವು ಬಹಳ ಉತ್ತಮ ಗೃಹಿಣಿ, ನೀವು ಸಮಾಜ ಸೇವಕಿಯಾಗಬೇಕಿತ್ತು, ನೀವು ಯಾವ ಇಂಜಿನಿಯರ್‌ಗೆ ಕಡಿಮೆಯಿದ್ದೀರಿ, ನೀವು ಬಹಳ ಉತ್ತಮ ಸ್ಪೋರ್ಟ್ಸ್‌ಮನ್ ಆಗ್ತಿದ್ದಿರಿ, ಕಥೆಗಾರ್ತಿಯಾಗಬಹುದಿತ್ತು, ಸಿಬಿಐ ಆಫೀಸರ್, ಮನೋವಿಜ್ಞಾನಿ ಹೀಗೇ ಹತ್ತು ಹಲವು ಹೇಳುತ್ತಿದ್ದರು. ಅವರ ಕೈಅಡುಗೆ ರುಚಿ ನೋಡಿದವರಂತೂ ನಳಪಾಕ ಯಾವ ಲೆಕ್ಕ, ನಳನೇ ನಾಚಬೇಕು ನಿಮ್ಮ ಕೈರುಚಿಯ ಮುಂದೆ ಎಂದು ಹೇಳುವುದಿತ್ತು. ಹೀಗೆ ಯಾವ ಕೆಲಸವನ್ನಾದರೂ ಅಚ್ಚುಕಟ್ಟಾಗಿ ಮಾಡುವ ಪರಿಪಾಠ ಅವರದು. ಮನೆಗೆ ೪೦-೫೦ ಜನ ಒಟ್ಟಾಗಿ ಬಂದರೂ ಯಾವುದೇ ಗಾಭರಿಯಿಲ್ಲ, ಉದ್ವೇಗವಿಲ್ಲ. ಸರಳವಾಗಿ, ಅಚ್ಚುಕಟ್ಟಾಗಿ, ಸ್ವಚ್ಛವಾಗಿ, ಪ್ರೀತಿಯಿಂದ ಎಲ್ಲರ ಮನಸ್ಸಿಗೆ ಒಪ್ಪುವ ಹಾಗೆ ನಿಭಾಯಿಸುತ್ತಿದ್ದ ಆ ಪರಿ ಇಂದಿನ ವರೆಗೆ ನಾನು ಎಲ್ಲಿಯೂ ಕಂಡಿಲ್ಲ. ಈ ನನ್ನ ಅಮ್ಮನ ಗುಣ ನನ್ನ ಸೋದರತ್ತೆಯಲ್ಲಿ ಮಾತ್ರ ಎದ್ದುಕಾಣುತ್ತದೆ. ಇದಕ್ಕೆ ಕಾರಣವೂ ಇದೆ. ನನ್ನ ತಾಯಿ ಮದುವೆಯಾಗಿ ಬಂದಾಗ ನನ್ನ ಅತ್ತೆಗೆ ಒಂಭತ್ತು ವಯಸ್ಸು, ಚಿಕ್ಕಪ್ಪನಿಗೆ ಒಂದೂವರೆ ವರ್ಷ. ಮನೆಯ ಹಿರಿಸೊಸೆ ಆಗಿದ್ದರಿಂದ ಅಜ್ಜಿಯ ಮರಣಾನಂತರ ಅವರಿಬ್ಬರನ್ನೂ ಅಮ್ಮನೇ ತನ್ನ ಮಕ್ಕಳಂತೆ ಸಾಕಿದರು. ಅವರ ನೆರಳಲ್ಲೇ ಬೆಳೆದ ಅತ್ತೆಯಲ್ಲಿ ಅಮ್ಮನ ನೂರಕ್ಕೆ ನೂರು ಗುಣವೂ ಬಂದಿವೆ ಅಂತಲೇ ಹೇಳಬಹುದು. ನನ್ನ ತಂದೆಯ ಕೆಲವು ಗುಣಗಳು ನನ್ನ ಚಿಕ್ಕಪ್ಪನಲ್ಲಿ ಬಂದಿವೆ.

ನನ್ನ ಅಮ್ಮನ ಉದಾರ ಗುಣವನ್ನು ಎಷ್ಟು ಹೊಗಳಿದರೂ ಸಾಲದು. ಯಾರಿಗೆ ಯಾವ ಸಮಯದಲ್ಲಿ ಬೇಕಾದರೂ ಸಹಾಯ ಮಾಡುವುದು ಅವರ ದೊಡ್ಡ ಗುಣ. ಮನೆಯವರಿಗೆ ಒಂದು ಥರ, ಹೊರಗಿನವರಿಗೆ ಒಂದು ಥರ ಯಾವತ್ತೂ ಇಲ್ಲ. ಅರ್ಧರಾತ್ರಿಯಲ್ಲಿ ಎದ್ದು ಹಸಿವಾಗುತ್ತಿದೆ, ಏನಾದರೂ ಮಾಡಿಕೊಡು ಅಂದರೂ ಯಾವುದೇ ಬೇಸರವಿಲ್ಲದೆ ಪ್ರೀತಿಯಿಂದ ಬಿಸಿಬಿಸಿಯಾಗಿ ಏನಾದರೂ ಮಾಡಿಕೊಡುವ ಗುಣ ಇನ್ನೊಂದು ಜನ್ಮವೆತ್ತಿದರೂ ನಮ್ಮಲ್ಲಿ

ಬರಲಾರದು. ಧಾರಾಳ ಬುದ್ಧಿಯಂತೂ ಧಾರಾಳವಾಗಿ ಮನೆ ಮಾಡಿತ್ತು. ಅಮ್ಮ ದೋಸೆ ಮಾಡಿಕೊಡುತ್ತಿದ್ದ ರೀತಿ ನೆನಪಾಗುತ್ತದೆ. ತವಾದ ಮೇಲಿಂದ ಒಂದೊಂದೇ ಬಿಸಿಬಿಸಿ, ಗರಿಗರಿಯಾದ ದೋಸೆ ಎಲ್ಲರೂ ಎಲ್ಲೆಲ್ಲಿ ಕುಳಿತಿರುತ್ತಿದ್ದರೋ ಅಲ್ಲಲ್ಲಿಗೇ ತಂದು ಹಾಕುತ್ತಿದ್ದರು. ಎಷ್ಟು ಕೇಳಿದರೂ ಬೇಜಾರಿಲ್ಲ. ನನ್ನ ಮಗ ಒಂದೊಂದು ಸಾರಿ ೧೦-೧೨ ದೋಸೆ ತಿಂದದ್ದೂ ಇದೆ. ನಾನೇನಾದರೂ ಅವನಿಗೆ ಬೈದರೆ ಅಮ್ಮ ನನಗೇ ಬೈಯುತ್ತಿದ್ದರು. 'ಮಗುವಿಗೆ ಎಷ್ಟು ಬೇಕೋ ಅಷ್ಟು ತಿನ್ನಲಿ ಬಿಡು. ಮಕ್ಕಳ ಆಸೆಗೆ ಯಾವತ್ತೂ ಅಡ್ಡಿಮಾಡಬೇಡ, ನಾಳೆ ಹೇಗೆ, ಏನು ಅಂತ ಯಾರಿಗೂ ಗೊತ್ತಿಲ್ಲ. ಈವತ್ತು ಏನು ಅನುಭವಿಸಿದೆವೊ ಅದೇ ಗ್ಯಾರಂಟಿ. ಅದಕ್ಕೇ ಅವರಿಗೆ ಹೇಗೆ ಬೇಕೋ ಹಾಗಿರಲಿ ಬಿಡು' ಅಂತ ಹೇಳುತ್ತಿದ್ದರು. ಈಗ ಅವರ ಮರಣವಾದ ಮೇಲೆ ಅವರು ಹೇಳುತ್ತಿದ್ದ ಒಂದೊಂದು ಉಪದೇಶದ ಮಾತೂ ಎಷ್ಟು ಸತ್ಯ ಎಂದೆನಿಸುತ್ತದೆ. ಈ ರೀತಿಯ ಧಾರಾಳತನದ ಪರಿಚಯ ಮನೆಗೆ ಬಂದ ನನ್ನ ತಮ್ಮನ ಸ್ನೇಹಿತರು, ನನ್ನ ಪತಿಯ ಸ್ನೇಹಿತರು, ನನ್ನ ಮಗನ ಸ್ನೇಹಿತರು, ನೆಂಟರು, ಇಷ್ಟರು ಎಲ್ಲರಿಗೂ ಇದೆ. ಈಗ ಅವರ ಕಾಲವಾಗಿ ೫ ವರ್ಷಗಳು ಕಳೆದವು. ಆದರೂ ಎಲ್ಲರೂ ಅವರನ್ನು ಕೂತರೆ, ನಿಂತರೆ ನೆನಪು ಮಾಡಿಕೊಳ್ಳುತ್ತೇವೆ.

ತಂದೆಯ ಕಾಲವಾಗಿ ಸುಮಾರು ೩೩ ವರ್ಷಗಳು ಕಳೆದವು. ಅವರ ನೆನಪೂ ಮಾಸಿಲ್ಲ. ತಂದೆಯಾದರೊ ಮುಂಗೋಪಿ, ನೇರ ಒರಟು ನುಡಿ. ಇದರಿಂದಾಗಿ ಎಷ್ಟೋ ಜನರ ಮನಸ್ಸಿಗೆ ನೋವು ಮಾಡಿರಬಹುದು. ಆದರೆ ಅವರ ಹೃದಯ ಮಾತ್ರ ಅತಿ ಒಳ್ಳೆಯದು. ಅದನ್ನು ಅರ್ಥ ಮಾಡಿಕೊಂಡವರು ಯಾರಿಗೂ ನೋವಾಗಿಲ್ಲ. ಆದರೆ ತಾಯಿಯಿಂದ ಯಾರಿಗೂ ನೋವಾದದ್ದು ನನಗೆ ನೆನಪೇ ಇಲ್ಲ. ತನ್ನ ಸೊಸೆಯನ್ನು ತನ್ನ ಹೆಣ್ಣುಮಕ್ಕಳಿಗಿಂತ ಹೆಚ್ಚು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಏನೇ ತಂದರೂ ಏನೇ ಮಾಡಿದರೂ ಮೊದಲ ಆದ್ಯತೆ ಸೊಸೆಗೆ, ನಂತರ ಮಿಕ್ಕಿದ್ದನ್ನು ನಾವಿಬ್ಬರೂ ಆರಿಸಿಕೊಳ್ಳಬೇಕು. ಲೋಕದ ರೂಢಿಯಲ್ಲಿ ಹೆಣ್ಣುಮಕ್ಕಳ ನಂತರ ಸೊಸೆ ಎಂಬುದು ಇವರಲ್ಲಿ ತದ್ವಿರುದ್ಧ. ಬಾಯಲ್ಲಿ ಅವರು ತಮ್ಮ ಹೆಣ್ಣುಮಕ್ಕಳನ್ನು ಆಗಾಗ ಹೊಗಳಿದರೂ ಸಹ ವರಸೆಗಳನ್ನು ಮಾಡುವಾಗ ಸೊಸೆಗೇ ಮೊದಲ ಆದ್ಯತೆ. ಇದರಲ್ಲಿ ನಮಗೇನೂ ಹೊಟ್ಟೆಕಿಚ್ಚಿರಲಿಲ್ಲ. ನಾವಿಬ್ಬರೂ ಸಹ– ನಾನು, ಅಕ್ಕ– ಅಮ್ಮನಿಗೆ ಈ ವಿಚಾರದಲ್ಲಿ ಸಪೋರ್ಟ್ ಮಾಡುತ್ತಿದ್ದೆವು. ಇದರಿಂದ ಅಮ್ಮನಿಗೂ ಬಹಳ ಖುಷಿಯಾಗುತ್ತಿತ್ತು. ತಮ್ಮನ ಮೇಲೆ ಪ್ರಾಣವನ್ನೇ ಇಟ್ಟುಕೊಂಡಿದ್ದರು. ಅವನು ಒಳ್ಳೆಯ ಸ್ಪೋರ್ಟ್ಸ್‌ಮನ್. ದಿನಾ ಮೈದಾನದಲ್ಲಿ ಆಡಿಕೊಂಡು ಬರುವಾಗ ಏನಾದರೂ ಸಣ್ಣಪುಟ್ಟ ಗಾಯಗಳಾಗಿ, ನೋವು ಮಾಡಿಕೊಂಡು ಬಂದುಬಿಟ್ಟರೆ ಅದಕ್ಕೆ ಅಷ್ಟು ಉಪಚಾರ ಮಾಡುತ್ತಿದ್ದರು, ಚಿಂತೆ ಮಾಡುತ್ತಿದ್ದರು. ನಮ್ಮಿಬ್ಬರ ಜೀವನ ರೂಪಿಸುವಾಗ, ನೆಲೆಗೊಳಿಸುವಾಗ ತಂದೆ ಬದುಕಿದ್ದರು. ತಮ್ಮ ಆಗ ಬಹಳ ಚಿಕ್ಕವನು. ತಂದೆಯಿಲ್ಲದ ಮಗನಿಗೆ ಯಾವ ಕೊರತೆಯೂ ಗೊತ್ತಾಗದಂತೆ ಬಹಳ ಪ್ರೀತಿಯಿಂದ ಸಾಕಿ ಬೆಳೆಸಿದರು. ತಂದೆಯ ಮರಣದ ನಂತರ ಮುಂದೇನಪ್ಪಾ ಗತಿ ಎಂದು ಯೋಚಿಸುತ್ತಿದ್ದ ಪ್ರತಿಯೊಬ್ಬರ ಎದುರಿನಲ್ಲಿ ತಂದೆಯ ಕೊರತೆಯೇ ತಿಳಿಯದಂತೆ ಅಮ್ಮ, ಅಪ್ಪ (ನಮ್ಮಮ್ಮಪ್ಪ) ಎರಡೂ ಆಗಿ ನಮ್ಮನ್ನೂ, ನಮ್ಮ ಮಕ್ಕಳನ್ನೂ ಆಸರೆಯಾಗಿ ನಿಂತು ಒಂದು ಮಟ್ಟಕ್ಕೆ ತಂದು ನಿಲ್ಲಿಸಿದರು.

ಸಮವಾಗಿ ಹಂಚಿಕೊಂಡು ಪ್ರೀತಿಯಿಂದ ಬಾಳುವುದನ್ನು ಕಲಿಸಿಕೊಟ್ಟವರು ಅಮ್ಮ. ಒಂದು ಸಣ್ಣ ಚಾಕೊಲೇಟ್ ಸಿಕ್ಕಿದರೂ ಅದನ್ನು ಮನೆಗೆ ತಂದು ಅವರ ಕೈಲಿ ಕೊಡಬೇಕು. ಅವರು ಅದನ್ನು ನಾಜೂಕಾಗಿ ಐದು ಸಮ ಭಾಗ ಮಾಡಿ ಎದುರಿಗೆ ಇದ್ದವರಿಗೆ ಕೊಟ್ಟು ಇಲ್ಲದವರ ಪಾಲನ್ನು ಜೋಪಾನವಾಗಿ ಇಟ್ಟು ಅವರು ಬಂದ ನಂತರ ನೆನಪಿನಿಂದ ಅವರಿಗೆ ಕೊಡುತ್ತಿದ್ದರು. ಅದಕ್ಕೇ ಮನೆಯಲ್ಲಿ ಯಾರು ಏನೇ ತಂದರೂ ಅಮ್ಮನ ಮುಂದಿಟ್ಟು ಹಂಚಿಬಿಡು ಎಂದು ಹೇಳುವುದಿತ್ತು. ಎಷ್ಟೋ ಸಾರಿ ತನ್ನ ಮತ್ತು ತಂದೆಯ ಪಾಲನ್ನು ಪುನಃ ಮೂರು ಪಾಲು ಮಾಡಿ ನಮಗೆ ಮೂವರಿಗೇ ಕೊಟ್ಟುಬಿಡುತ್ತಿದ್ದರು. ಮಕ್ಕಳಿಗೆ ಅಂದರೆ ನಮಗೆ, ನಮ್ಮ ಮಕ್ಕಳಿಗೆ ಪ್ರತಿಯೊಂದು ಹೆಜ್ಜೆಯಲ್ಲೂ ಹೇಗೆ ನಡೆದುಕೊಳ್ಳಬೇಕೆಂದು, ಸಮಾಜದಲ್ಲಿ ಯಾರ ಯಾರ ಜೊತೆ ಹೇಗೆ ವ್ಯವಹರಿಸಬೇಕೆಂಬುದನ್ನು ಸಾಯುವ ವರೆಗೆ ಹೇಳಿಕೊಡುತ್ತಲೇ ಇದ್ದರು.

ನಮ್ಮ ಅಮ್ಮನ ಮತ್ತೊಂದು ವಿಶೇಷ ಗುಣ ಅಂದರೆ, ಪ್ರತಿಯೊಬ್ಬರನ್ನೂ ಆಳವಾಗಿ ಗಮನಿಸುವುದು, ಅವರ ಚಲನವಲನದಿಂದಲೇ ಎಲ್ಲಾ ವಿಷಯಗಳನ್ನು ಗ್ರಹಿಸಿಬಿಡುವುದು. ಯಾರ ಪರಿಚಯವಾದರೂ ಅವರ ಬಗ್ಗೆ, ಅವರು ಮಾಡುವ ನೌಕರಿಯ ಬಗ್ಗೆ ಕುತೂಹಲದಿಂದ ತಿಳಿದುಕೊಳ್ಳುವುದು ಮಾಡುತ್ತಿದ್ದರು. ಹಾಗೆ ತಿಳಿದುಕೊಳ್ಳುತ್ತಿದ್ದರಿಂದಲೇ ಅವರು ಹಲವಾರು ಬಾರಿ ನಮ್ಮ ಕೆಲಸಕ್ಕೂ– ನಾನು, ನನ್ನ ಪತಿ– ಬೇರೆಯವರ ಕೆಲಸಕ್ಕೂ ಹೋಲಿಸುತ್ತಿದ್ದರು. ನಾನು ಮತ್ತು ನನ್ನ ಪತಿ ಇಬ್ಬರದ್ದೂ ಶಿಕ್ಷಕ ವೃತ್ತಿ. ಹೀಗಾಗಿ ನಾವು ಮಾಡುವ ಪ್ರತಿಯೊಂದು ಕೆಲಸದ ಪರಿಚಯ ಅವರಿಗಿತ್ತು. ಒಬ್ಬ ಪ್ರಾಮಾಣಿಕ ಶಿಕ್ಷಕನ ಹೊರೆ ಎಷ್ಟು ಅಂತ ಗೊತ್ತಿತ್ತು. ಶಿಕ್ಷಕರಿಗೆ ಮಧ್ಯದಲ್ಲಿ ಸಿಕ್ಕುವ ಅರ್ಧವಾರ್ಷಿಕ ಪರೀಕ್ಷೆ ನಂತರದ ರಜೆ, ಬೇಸಿಗೆ ರಜೆ ಇದೆಲ್ಲಾ ಸಿಕ್ಕಾಗ ನಾವು ಮಾಡುತ್ತಿದ್ದ ಮೌಲ್ಯಮಾಪನ ಕಾರ್ಯ ಹಾಗೂ ಇನ್ನಿತರೇ ಕೆಲಸಗಳನ್ನು ಗಮನಿಸಿ ಅವರು ಈ ಮಾತನ್ನು ಹೇಳುವುದಿತ್ತು– ಟೀಚರ್ಸ್‌ಗೆ ರಜೆ ಜಾಸ್ತಿ, ಜಾಸ್ತಿ ಅಂತ ಅದ್ಯಾರು ಹೇಳ್ತಾರೊ, ರಜೆಯಲ್ಲಿ ಒಂದು ನಾಲ್ಕೈದು ದಿನ ಆರಾಮವಾಗಿ ಇರುವ ಹಾಗೂ ಇಲ್ಲ, ಅದೇ ಬೇರೆ ಇಲಾಖೆಗಳಲ್ಲಿ ಕೆಲಸ ಮಾಡುವವರು ಕಛೇರಿಯಲ್ಲಿ ಕೆಲಸ ಮಾಡಿದರೆ ಮುಗಿಯಿತು, ಮನೆಗೆ ತಂದು ಮಾಡುವ ಗೋಜಿಲ್ಲ. ಅವರು ರಜೆ ಯಾವಾಗ ಬೇಕೋ ಆವಾಗ ಹಾಕಿಕೊಳ್ಳಬಹುದು, ನೀವು ಸರಕಾರ ಯಾವಾಗ ಕೊಡತ್ತೊ ಆವಾಗ ತೆಗೆದುಕೊಳ್ಳಬೇಕು. ಮಧ್ಯದಲ್ಲಿ ರಜೆ ಹಾಕಿಬಿಟ್ಟರೆ ಪಾಠಗಳು ಹಿಂದೆ ಉಳಿಯುತ್ತವೆ. ನೀವೇ ಸ್ಪೆಶಲ್ ಕ್ಲಾಸ್ ತೆಗೆದುಕೊಂಡು ಮುಗಿಸಬೇಕು. ಆದರೆ ಬೇರೆ ಇಲಾಖೆಯವರಿಗೆ ಹಾಗಲ್ಲ. ಅವರ ಕೆಲಸಕ್ಕೆ ಬೇರೆಯವರನ್ನು ಹಾಕ್ತಾರೆ. ಅವರಿಗೆ ಹೊರೆ ಆಗುವುದಿಲ್ಲ. ನಿಮಗೆ ಸಂಬಳವೂ ಕಡಿಮೆ. ನೀವು ಮಾಡಿರುವ ಡಿಗ್ರಿಗಳಿಗೂ ಬೆಲೆ ಇಲ್ಲ. ಅದಕ್ಕೆ ತಕ್ಕ ಸಂಬಳವೂ ಇಲ್ಲ... ಹೀಗೇ ಏನೇನೋ ದೂರದ ವರೆಗೆ ಯೋಚಿಸಿ ಮಾತನಾಡುತ್ತಿದ್ದರು. ಹೀಗೆ ತಮ್ಮ ಸಂಪರ್ಕದಲ್ಲಿ ಇರುವ ಪ್ರತಿಯೊಬ್ಬರ ಬಗ್ಗೆ ಅತಿ ಕಾಳಜಿ ವಹಿಸಿ ಮಾತನಾಡುತ್ತಿದ್ದರು.

ಇಂತಹ ಅಮ್ಮ, ಅಪ್ಪನನ್ನು ಕಳೆದುಕೊಂಡ ನಾವು ಎಲ್ಲಾ ಸುಖ, ಸೌಕರ್ಯಗಳಿದ್ದರೂ ಅನಾಥರು. ತಂದೆ, ತಾಯಿಯ ಮಹತ್ವವನ್ನು ಗುರುತಿಸದೇ, ಅರ್ಥ ಮಾಡಿಕೊಳ್ಳದೇ ಅವರನ್ನು

ಕಾಡಿಸುವ ಎಷ್ಟೋ ಮಕ್ಕಳನ್ನು ನೋಡಿದಾಗ, ಅವರ ಕಥೆಗಳನ್ನು ಕೇಳಿದಾಗ ಇವರೆಲ್ಲಾ ಎಷ್ಟೊಂದು ಮೂಢರು, ಎಷ್ಟೊಂದು ನತದೃಷ್ಟರು ಎಂದೆನ್ನಿಸುತ್ತದೆ. ಪ್ರಪಂಚದಲ್ಲಿ ಕೆಟ್ಟ ಮಕ್ಕಳು ಹುಟ್ಟಬಹುದು, ಇರಬಹುದು. ಆದರೆ ಕೆಟ್ಟ ತಂದೆ ತಾಯಿಗಳು ಇರಲು ಸಾಧ್ಯವೇ ಇಲ್ಲವೇನೋ. ಪುನಃ ಜನ್ಮವೇನಾದರೂ ಇದ್ದಲ್ಲಿ ನಾನು ಇದೇ ತಂದೆ ತಾಯಿಯ ಮಗುವಾಗಿ ಹುಟ್ಟಿ ಅವರ ಋಣವನ್ನು ತೀರಿಸುವ ಶಕ್ತಿಯನ್ನು ಕೊಡಲಿ ಎಂದು ಆ ದೇವರಲ್ಲಿ ದಿನವೂ ಪ್ರಾರ್ಥಿಸುತ್ತೇನೆ. ತೀರಿಸಲಾರದ ಋಣ ನನ್ನ ಮೇಲಿವೆ.

■ ಡಾ. ರಾಗಿಣಿ ಆರ್. : ೭೩೮/೪, ಸೊಪ್ಪಿನಕೊಳ ಬೀದಿ, ಕಾಶೀಪತಿ ಅಗ್ರಹಾರ,
ಕೆ. ಆರ್. ಮೊಹಲ್ಲಾ, ಮೈಸೂರು-೫೭೦ ೦೨೪ ■

ಹೊಗೆವಿಮಾನ

ಎಂ. ಡಿ. ಒಕ್ಕುಂದ

೧

ಬಯಲ ನೀಲ ವರ್ತುಲದಿ ರಜತ ವ್ಯಾಸ
ಎಳೆಯುತ್ತ ಮಧ್ಯಬಿಂದುವಿನಲಿ ಹಾದು
ಶಾಂತವಾಗಿ ಹೊರಟಿದೆ ಹೊಗೆವಿಮಾನ
ಆದಿಯ ಅರಿವಿಲ್ಲ ಅಂತ್ಯದ ಪರಿವಿಲ್ಲ
ಹೆಜ್ಜೆ ಇಟ್ಟದ್ದೆಲ್ಲ ಹಾಲ ಹಾದಿ!

೨

ಬಾಲವಲ್ಲಾಡಿಸುತ್ತ ಲಂಕೆಗೆ ಹಾರಿದ ಹನುಮ
ಸೇತುವೆಯ ಸೇವೆಗೆ ಓಡುತಿದೆ ಅಳಿಲು
ಬುಗರಿ ಆಡಿಸಲು ಬಿಚ್ಚುತಿದೆ ದಾರ
ಪಾರ್ವತಿಯ ಗೆಜ್ಜೆ ಶಿವನ ಉಡದಾರ
ವಸಂತ ಬೆಳದಿಂಗಳಲಿ ಎರಕ ಹೊಯ್ದ ಪುಷ್ಪಬಾಣ
ಆಗಸದ ಕಡಲಲ್ಲಿ ಸಂಗಾತಿಯನರಸುವ ಮೀನ
ರತಿಯ ಕಣ್ಣ ನೋಟ ಮನ್ಮಥನ ಸ್ಖಲನ
ಗಂಧರ್ವರ ಮಧುಚಂದ್ರದ ಪುಷ್ಪಕವಿಮಾನ.
ಪಡುವಣದ ಬಿಲ್ಲು ಹೂಡಿರುವ ನಿಧಾನ ವಿಷದ ಬಾಣ
ಭೂಮಿಯನು ಗೆದ್ದು ಆಕಾಶಕ್ಕೆ ಲಗ್ಗೆ ಇಟ್ಟ ಚಕ್ರರತ್ನ
ಜಾಗತಿಕ ಹೆದ್ದಾರಿಯ ನೀಲನಕಾಶೆ
ಶಾಂತಿಯಾತ್ರೆಗೆ ಹೊರಟ ಪಾರಿವಾಳ.
ಬಾಲ್ಯದಿಂದಲೂ ನನ್ನ ಬೆರಗಿನಾಗಸದಲ್ಲಿ ಇದರ ನಿಗೂಢ ನಿರಂತರ ಪಯಣ!

೩

ಸದ್ದಿಲ್ಲ ಗದ್ದಲವಿಲ್ಲ ಆರ್ಭಟವಿಲ್ಲ
ಮೌನವೇ ಮಹಾನವಮಿ
ಒಂದೆ ಮುಂದೆ ನೋಡದೇ ಎದುರುಗಿನ ಬಯಲಲ್ಲಿ

ಹೆಜ್ಜೆ ಹಾಕುವದೇ ಸಂಕ್ರಾಂತಿ
ಹಾರಬಲ್ಲವಗೆ ಎಷ್ಟೊಂದು ಆಕಾಶ
ತೋರಬಲ್ಲವಗೆ ಎಷ್ಟೆಲ್ಲ ದಿಕ್ಕು!
        ಕಾಣಬೇಕೆಂಬ ಹಠವಿಲ್ಲ
        ದಿಟ್ಟಿಸಿದವರಿಗೆ ಮಾತ್ರ ಹಗಲನಕ್ಷತ್ರ
        ಯಾರಾದರೂ ಕಂಡರೆ
        ಹೆಜ್ಜೆ ಗುರುತುಗಳನಲ್ಲೇ ಬಿಟ್ಟು
        ಮೋಡಗಳ ಮರೆಯಲ್ಲಿ ಫರಾರಿ!

೪

ಪುಟ್ಟ ಮಗು ಕೇಳುತ್ತದೆ:
"ಅಪ್ಪಾಜೀ,
ಎಲ್ಲಿಂದ ಬಂತು ಹೊಗೆವಿಮಾನ
ಹೊರಟದ್ದು ಎಲ್ಲಿಗೆ
ಚಾಲಕರು ಯಾರು? ಎಷ್ಟು ಜನ ಪಯಣಿಗರು?
ಕೊರೆಯುವದೇಕೆ ಬಾನಲ್ಲಿ ಬೆಳ್ಳಿರೇಖೆ?
        ನನಗೆ ನಾನೇ ಕೇಳಿಕೊಂಡ ಪ್ರಶ್ನೆಗಳಿವು
        ಏನೆಂದು ಉತ್ತರಿಸಲಿ?

■ ಎಂ. ಡಿ. ಒಕ್ಕುಂದ, ಮುಖ್ಯಸ್ಥರು, ಕನ್ನಡ ವಿಭಾಗ, ಶ್ರೀ ಸಿದ್ಧೇಶ್ವರ ಸರಕಾರಿ ಪದವಿ ಕಾಲೇಜು, ನರಗುಂದ ■

ಎಲ್ಲ ಮರೆತು, ಮತ್ತೆ ಅನ್ನಕ್ಕೆ...

ವಿನಯಾ

ಹೊಸ ಮನೆಯ ಮೊಳೆ ಲೈಟು
ರಿಪೇರಿಯ ಗೌಜಿಯಲ್ಲೇ
ಕಂದು ಬಣ್ಣದ ಆ ಹೆಣ್ಣು ನಾಯಿ
ಅಂಗಳದಲ್ಲಿ ಹಾಜರಾದದ್ದು.
        ಮಗಳು ಉಗುಳಿದ ತುತ್ತು
        ಉಳಿದ ರೊಟ್ಟಿಯ ಚೂರು
        ತಿನ್ನುತ್ತ ಅಲ್ಲೇ ನಿಂತಿತು
        ಮಕ್ಕಳು 'ರಾಣಿ' ಎಂದರೆ
        ಅನ್ನದ ನೆಲೆಯೂ ಇಲ್ಲದ ಅದು
        ಬಾಲ ಕುಣಿಸಿ ನಕ್ಕಿತು.
ಆ ಮನೆಯ ನೆಲ ಸವರುತ್ತ ಸವರುತ್ತ
ಮನೆ ನನ್ನದೆಂಬ ಸಂಭ್ರಮದಲಿ
ಅದೂ ಈ ಮನೆ ತನ್ನದೆಂಬ ದೌಲತ್ತಿನಲಿ
ನಾನು ಗೋಡೆ ಗೋಡೆಗಳ ನಡುವೆ

ಅದು ಬೇಲಿ ಬೇಲಿಗಳ ನಡುವೆ
ಮನೆ ಮಂದಿಗೆ ಹೇಗೆ ಬೇಕೋ ಹಾಗೆ
ಹೊಂದಿಕೊಂಡು...
ಗಿಡ ಹಚ್ಚುವಾಗ, ಹುಲ್ಲು ಕೀಳುವಾಗ
ಜಾಡ ಜಾಲಂಧ್ರಗಳನೆಲ್ಲ ಶುಚಿಗೊಳಿಸೋ
ಧಾವಂತದಲಿರುವಾಗ
ತಣ್ಣಗೆ ನಿರುಕಿಸುತ್ತಿತ್ತು—
ತತ್ತ್ವ ಬಲ್ಲವರ ಹಾಗೆ.
ಎಂಥದೋ ಅವ್ಯಕ್ತ ದಿಗಿಲಿನಲಿ
ಬುದ್ಧನಂತೆದ್ದು ಮಕ್ಕಳು ಮನೆಯನೆಲ್ಲ
ತಟ್ಟಾಡಿಸುವ ನನ್ನ ಏಕಾಂತಕ್ಕೆ
ಏಕತಾರಿಯ ಹಾಗೆ ದನಿಗೊಡುತ್ತಿತ್ತು
ರಾತ್ರಿಯಿಡೀ ಅನ್ನಕ್ಕೆ ತನ್ನ ಅಡವಿಡುತ್ತಿತ್ತು
ಯುಗಾಂತರದ ನೆಮ್ಮದಿಯ ಲೋಲಾಕು
ಅತ್ತಿತ್ತ ಓಡಾಡಿದಂತೆ.
ಈಗಿದೋ ಮತ್ತೊಂದು ಮನೆ
ಮತ್ತದೇ ಮೊಳೆ, ಲೈಟು...
ಸಾಮಾನು ಹೇರಿ ಬರುವಾಗ
ನನ್ನ ಮುಖ ಅದು ಅದರ ಮುಖ ನಾನು
ಜತನದಿಂದ ತಪ್ಪಿಸಿದ್ದೇ ಬಂತು
ತಂಗಳನ್ನದಲಿ ರೊಟ್ಟಿ ಬುಟ್ಟಿಯಲಿ
ನೆನಪು ಕಲಿಸಿಟ್ಟಂತೆ ಗಂಟಲುರಿ
ಜ್ವರ ಬಂದ ಮಗಳು ಕನವರಿಸುತ್ತಾಳೆ
'ರಾಣಿ'ಯೊಂದಿಗೆ ಎಲ್ಲೋ ನಡೆದಂತೆ
ನಿದ್ದೆಯಲಿ ನಗುತ್ತಾಳೆ
ರಾತ್ರಿ ಕದಡದಂತೆ ನಾ ಉಸಿರೊತ್ತಿ
ಮಗಳ ಮೈದಡವುತ್ತೇನೆ.
ಅದಕ್ಕೂ ನೆನಪಾದೀತೆ ಆಗೀಗ
ನನ್ನ ಸಾರಿನ ಘಮ
ಮಗಳು ಉಳಿಸಿದ ತುತ್ತನ್ನ
ಕೆದರುತ್ತಿರಬಹುದೇ ಆ ಮಣ್ಣಲ್ಲಿ
ಅರಗಿದ್ದ ನನ್ನ ವಾಸನೆ
ಮುಖ ಮೇಲೆತ್ತಿ ಒರಲಿ
ಹೀಗೆ ಸಿಕ್ಕಗೊಂಡಿರಬಹುದೇ?
ಎಲ್ಲ ಮರೆತಂತೆ... ಮತ್ತೆ ಅನ್ನಕ್ಕೆ!

ಡಾ. ವಿನಯಾ
ಕನ್ನಡ ಉಪನ್ಯಾಸಕಿ
ಶ್ರೀ ಸಿದ್ಧೇಶ್ವರ
ಸರಕಾರಿ ಪದವಿ ಕಾಲೇಜು
ನರಗುಂದ, ಜಿ. ಗದಗ

"ನಟರಾಗಿ ಮುಂದೆ ಬರುವವರಿಗೆ ಮಹಾರಾಜರು ಜಮೀನು ಕೊಡತಾರೆಪೊ" ಎಂದು ಪೇಳಿಕೊಂಡು ಕೆಲವು ಜನರನ್ನು ಕಲೆಹಾಕಿದನು. ಆಗ ಮಹಾರಾಷ್ಟ್ರದಲ್ಲಿ ನಾಟಕ, ರಂಗಭೂಮಿ, ನಟವರ್ಗ ಇದಾವುದೂ ಇರಲಿಲ್ಲ. ಇದ್ದುದು ಹಾಡು, ಮಾತು ಇರುವ ಏಕಪಾತ್ರಾಭಿನಯದ ಕೀರ್ತನೆಗಳು. ಹಾಗೂ ಜಾನಪದ ಧರತಿಯ 'ತಮಾಶಾ'ಗಳು. ಇವಕ್ಕಾದರೂ ರಂಗಭೂಮಿ ಇದ್ದಿತೆ? ದೇವಸ್ಥಾನಗಳ ಹಜಾರ ಇಲ್ಲವೆ ಇಂಬಾಗಿರುವ ರಸ್ತೆಯ ಒಂದು ಬದಿಯೇ ರಂಗಭೂಮಿಯಾಗಿದ್ದಿತು. ನಮ್ಮಲ್ಲಿ ದೊಡ್ಡಾಟಗಳಿಗಾಗಿ, ಯಕ್ಷಗಾನ ಪ್ರಯೋಗಗಳಿಗಾಗಿ ಅಟ್ಟಗಳಿದ್ದುವು. ಆಗ ಎಂದರೆ ೧೮೪೨ರ ಪೂರ್ವದಲ್ಲಿ ಪರದೆ ಇರಲಿಲ್ಲ –ಪಾತ್ರಗಳು ರಂಗಪ್ರವೇಶ ಮಾಡುವಾಗ ಹಿಡಿದಿರುವ ಬಟ್ಟೆಯನ್ನು ಬಿಟ್ಟರೆ. ಏನೇ ಆಗಲಿ, ರಂಗಭೂಮಿಯ ವಿಚಾರವಾಗಿ ಕರ್ನಾಟಕವು ತುಸು ಮುಂದಿದ್ದಿತೆಂದು ಕಾಣುತ್ತದೆ.

ಭಾವೆ ನಟನೇನಲ್ಲ; ಪಾತ್ರ ವಹಿಸುತ್ತಿದ್ದಂತೆ ಎಲ್ಲಿಯೂ ಉಲ್ಲೇಖವಿಲ್ಲ. ಆದ್ಯ ಮರಾಠೀ ನಾಟಕಕಾರ ಎನ್ನುವೆವಾದರೂ ಅವನು ರಚಿಸಿದ್ದು, ನಾಟಕಗಳನ್ನಲ್ಲ; ಚಿಕ್ಕದಾದ ಆಖ್ಯಾನಗಳನ್ನು. ಅವನು ಐವತ್ತಕ್ಕೂ ಮಿಕ್ಕಿ ಇಂಥ ಆಖ್ಯಾನಗಳನ್ನು ರಚಿಸಿದ್ದಿದೆ. ಇವುಗಳಲ್ಲಿ ಹಾಡುಗಳಿಗೆ ಪ್ರಾಧಾನ್ಯ. ಹಿಂದೀ ಭಾಷೆಯನ್ನೂ ಬಲ್ಲವನಾಗಿದ್ದು ಅದರಲ್ಲಿಯೂ ಆಖ್ಯಾನ ರಚಿಸಿದ್ದ (ಗೋಪೀಚಂದಾಖ್ಯಾನ). ತನ್ನ ಈ ಎಲ್ಲ ಹಾಡುಗಳನ್ನು ಸಂಗ್ರಹಿಸಿ ಮೇಲ್ಕಾಣಿಸಿದ ಸಂಗ್ರಹವನ್ನು ಹೊರತಂದದ್ದು.

ಎಲ್ಲ ಹಾಡುಗಳಿಗೂ ರಾಗಗಳ ಉಲ್ಲೇಖವಿರುವುದರಿಂದ ಅವನು ಸಂಗೀತ ಕಲಿತಿದ್ದ. ತಂಜಾವರದ ಭೀಮರಾವ ಫಂಡೇಲ ಎಂಬವನು ಈ ವಿಷಯದಲ್ಲಿ ಅವನ ಗುರು ಎಂಬುದಾಗಿ ಅವನ ಚರಿತ್ರೆಯಿಂದ ತಿಳಿದುಬರುತ್ತದೆ. ಪರಿಣಾಮವಾಗಿ ಅವನು ಕೆಲವು ಕರ್ನಾಟಕೀ ರಾಗಗಳನ್ನೂ ಬಲ್ಲವನಾಗಿದ್ದ. ಝಿಂಝೋಟಿ, ಧನ್ಯಾಸಿ, ಆನಂದ ಭೈರವಿ, ನೀಲಾಂಬರಿ ಮೊದಲಾದ ದಕ್ಷಿಣಾದಿ ಹಾಡುಗಳ ಉಲ್ಲೇಖ ಆ ಸಂಗ್ರಹದಲ್ಲಿ ಬರುತ್ತದೆ. ಇಷ್ಟಕ್ಕೂ 'ಕಾಹೀ ಪದೇ ಕರ್ನಾಟಕೀ ರಾಗಾತ್ ಆಹೆ' ಎಂದು ತನ್ನ ಪೂರ್ವೋಕ್ತ ಪ್ರಸ್ತಾವನೆಯಲ್ಲಿ ಹೇಳಿಯೇ ಇದ್ದಾನೆ. ಆ ಕೆಲವು ರಾಗಗಳು ಯಕ್ಷಗಾನ ಗಳಲ್ಲಿಯೂ ಬಳಕೆಯಾದವುಗಳು.

ಆದ್ಯ ಮರಾಠೀ ನಾಟಕಕಾರ ಮತ್ತು ಯಕ್ಷಗಾನ

ಶ್ರೀನಿವಾಸ ಹಾವನೂರ

"ಕರ್ನಾಟಕದಲ್ಲಿಯೂ ನಾಟಕ ಆಡ್ತಾರೆ. ಪರಂತು ಅದರಲ್ಲಿ ಮನರಂಜನೆ ಏನೂ ಇರುವದಿಲ್ಲ. ಡೊಂಬರಾಟದಂತೆ ಅಲ್ಲಿಯ ಪಾತ್ರಗಳಿರುತ್ತವೆ. ಇಂಥವನ್ನು ನೋಡಿ ಹುಂಬ ಜನರಿಗೆ ಖುಶಿಯಾಗಬಹುದು. ಆದರೆ ಜಾಣರಿಗೆ ಆನಂದವಾಗದು...

"ಈ ರೀತಿಯ ನಾಟಕಗಳನ್ನು ಆಡುತ್ತಿದ್ದ ಕರ್ನಾಟಕದ ಉತ್ತರ ಕಾನಡಾ ಪ್ರಾಂತದಲ್ಲಿಯ ಭಾಗವತ ಎಂಬ ಹೆಸರಿನ ಮಂಡಳಿಯು ಇಸವಿ ಸನ್ ೧೮೪೨ರ ಮಧ್ಯದಲ್ಲಿ ಸಾಂಗಲಿಗೆ ಬಂದಿತ್ತು. ಕೈ. ಚಿಂತಾಮಣರಾವ ಪಟವರ್ಧನರು ಅವರ ೨-೩ ಪ್ರಯೋಗಗಳ ವ್ಯವಸ್ಥೆ ಮಾಡಿದ್ದರು. ನಮ್ಮ ಮಹಾರಾಜರು ರಸಜ್ಞರು. ಗುಣಗ್ರಾಹಿಗಳು. ಆ ಒರಟು ಹಾಗೂ ಬೀಭತ್ಸ ಪ್ರಯೋಗಗಳನ್ನು ನೋಡಿ ಅವರ ಮನಸ್ಸು ಖುಶಿಪಡಲಿಲ್ಲ. ಆದ್ದರಿಂದ ಅವುಗಳಲ್ಲಿ **ಚೆನ್ನಾಗಿ ಸುಧಾರಣಾ ಮಾಡಿ** (ಯಾ ಕೃತ್ಯಾತ್ ಚಾಂಗಲೀ ಸುಧಾರಣಾ ಕರೂನ) ನವೀನ ಮರಾಠೀ ನಾಟಕವನ್ನು ತಯಾರಿಸಲು ನನಗೆ ಆಜ್ಞಾ ಮಾಡಿದರು. ಮತ್ತು ಅದರ ಪ್ರಯೋಗಕ್ಕೆ ಬೇಕಾದ ಸಹಾಯ ಮಾಡುವದಾಗಿ ಹೇಳಿದರು."

–ಹೀಗೆ ಹೇಳಿದವ ಮರಾಠಿಯಲ್ಲಿ ಆದ್ಯ ನಾಟಕಕಾರನೆನಿಸಿದ ವಿಷ್ಣುದಾಸ ಭಾವೆ. ಅವನು ತನ್ನ ನಾಟಕಗಳಿಗಾಗಿ ರಚಿಸಿದ ಹಾಡುಗಳ ಸಂಗ್ರಹವನ್ನು ೧೮೮೫ರಲ್ಲಿ ಹೊರತಂದಿದ್ದು, ಅದರ ಪ್ರಸ್ತಾವನೆಯಲ್ಲಿ ಈ ಮಾತುಗಳನ್ನು ಹೇಳಿದ್ದಾನೆ. ಭಾವೆ ಹೇಳಿದ ಮಾತನ್ನೇ ಅನುಸರಿಸಿ, ಮರಾಠಿಯ 'ರಂಗಭೂಮಿ' ಎಂಬ ಪತ್ರಿಕೆಯಲ್ಲಿ (೧೯೦೩) ಓರ್ವರು ಮತ್ತು Bihar Theatre ಎಂಬ ಪತ್ರಿಕೆಯಲ್ಲಿ ವಿಷ್ಣುದಾಸನ ಮೊಮ್ಮಗ ವಿ. ಜಿ. ಭಾವೆ ಇದೇ ಧರತಿಯಲ್ಲಿ ೧೮೪೨ರ ಯಕ್ಷಗಾನ ಪ್ರಯೋಗಗಳು ಕಳಪೆಯಾಗಿದ್ದುವೆಂಬುದಾಗಿ ಬರೆದಿದ್ದಾರೆ.

ಆದರೆ ನಾವು ತಿಳಿದುಕೊಂಡದ್ದು ಬೇರೆಯೇ! 'ಕರ್ಕಿ ಮಂಡಳಿಯ ಯಕ್ಷಗಾನ ಪ್ರಯೋಗಗಳಿಂದ ಪ್ರೀತನಾಗಿ, ಸಾಂಗಲಿ ಮಹಾರಾಜನು ನಮ್ಮಲ್ಲಿ ಇಂಥವು ಇಲ್ಲ, ಆದ್ದರಿಂದ ಮರಾಠಿಯಲ್ಲಿ ಈ ಬಗೆಯ ಆಟಗಳನ್ನು ರಚಿಸು –ಎಂದು ವಿಷ್ಣುದಾಸ ಭಾವೆಗೆ ಹೇಳಿದನು. ಹೀಗೆ ಕನ್ನಡ ಯಕ್ಷಗಾನವೇ ಮರಾಠೀ ರಂಗಭೂಮಿಗೆ ಪ್ರೇರಕವಾಯಿತು' ಎಂದು ಗ್ರಹಿಸಿಬಿಟ್ಟಿದ್ದೇವೆ. ಯಾವುದು ಸರಿ? ನಮ್ಮದನ್ನು ವೈಭವಿಸಲು ಹಾಗೆ ತಿಳಿದಿದ್ದೇವೆಯೆ?

ವಿಷ್ಣುದಾಸ ಭಾವೆ :

ಈ ವಿಷ್ಣುದಾಸ ಭಾವೆ ೧೮೧೯ರಲ್ಲಿ ಜನ್ಮತಾಳಿದ. ಹದಿವಯದಲ್ಲಿದ್ದಾಗ ಕಟ್ಟಿಗೆ, ಮಣ್ಣುಗಳಿಂದ ಗೊಂಬೆ ಮುಂತಾದ್ದನ್ನು ತಯಾರಿಸುತ್ತಿದ್ದ. ಸಾಂಗಲಿ ಮಹಾರಾಜರು ಬೇರೊಂದು ಪ್ರಸಂಗದಲ್ಲಿ ಅವನ್ನು ವೀಕ್ಷಿಸುವ ಯೋಗ ಒದಗಿತ್ತು. ತಮ್ಮ ಅರಮನೆಯಲ್ಲಿ ಯಾವದಾದರೂ ಕೆಲಸಕ್ಕೆ ಇರಲಿ ಎಂದು ಅವನನ್ನು ಕರೆದೊಯ್ದರು.

ಮಹಾರಾಜರು ಅವನಲ್ಲಿ ಕಂಡ ಇನ್ನೊಂದು ವಿಶೇಷ ಗುಣವೆಂದರೆ ಕೀರ್ತನೆಗಳಿಗೆ ಬೇಕಾದ ಹಾಡುಗಳನ್ನು ರಚಿಸಬಲ್ಲವನಾಗಿದ್ದ. ಈ ಕಾರಣದಿಂದಲೇ ಮಹಾರಾಜರು ಯಕ್ಷಗಾನವನ್ನು ನೋಡಿಯಾದ ಮೇಲೆ ಅವನಿಗೆ 'ನಾಟಕ' ರಚಿಸ ಹೇಳಿದ್ದು. ಹಾಗೆ ಅವನು ಮೊದಲು ರಚಿಸಿದ್ದು 'ಸೀತಾಸ್ವಯಂವರ'ವನ್ನು. ಅದರ ಪ್ರಯೋಗಕ್ಕೆ ನಟರು ಬೇಕಲ್ಲವೆ.

ಹತ್ತಾರು. ಆ ಪ್ರಶ್ನೆಗಳ ಮೇಲಿಂದ ಅವರು ಉಭಯ ರಂಗಪ್ರಯೋಗದಲ್ಲಿ ಎಷ್ಟೊಂದು ಆಸಕ್ತಿ ವಹಿಸಿ ಆಳವಾಗಿ ಯೋಚಿಸಿದ್ದರೆಂಬುದು ವೇದ್ಯವಾಗುತ್ತದೆ. ಇವು ಕೆಲವು ಪ್ರಶ್ನೆಗಳು :

– ಭಾಗವತ, ಸೂತ್ರಧಾರ, ಸಾರಥಿ ಇವುಗಳಲ್ಲಿಯ ಅಂತರವೇನು?
– ಮರಾಠಿಯಲ್ಲಿ ಇದ್ದ ಹಾಗೆ ಗಣೇಶ, ಸರಸ್ವತಿಯರು ರಂಗದ ಮೇಲೆ ಬರುತ್ತಾರೆಯೆ?
– 'ದಶಾವತಾರ' ಎಂದರೆ ಬರಿಯ ಹತ್ತು ಅವತಾರಗಳ ನಾಟಕಗಳೆ?
– ಸ್ತ್ರೀಪಾತ್ರಗಳನ್ನು ಗಂಡಸರು ಅಭಿನಯಿಸುವುದಿದ್ದಾಗ, ನುಣ್ಣಗೆ ಗಡ್ಡ ಬೋಳಿಸದಿದ್ದರೆ ದಟ್ಟವಾದ ಬಣ್ಣ ಹಚ್ಚುವುದು ಕಷ್ಟ ತಾನೆ?

ಈ ಕೊನೆಯ ಪ್ರಶ್ನೆಗೆ ಜಾಗೀರದಾರರು ಕೊಟ್ಟ ಉತ್ತರ ಹೀಗಿದೆ :

"Men acted the part of women, but as a rule it was before they reached an age of hardened moustache and beard. No, they did not usually, have a recourse to clean shaving; i.e. they play female roles till such a necessity arose! (Letter dt. 7-9-1944.)

ಯಕ್ಷಗಾನದಿಂದ ಪಡೆದದ್ದೆಷ್ಟು?

ವಿಷ್ಣುದಾಸ ಭಾವೆ ತನ್ನ ಪ್ರಸ್ತಾವನೆಯಲ್ಲಿ ಏನೇ ಹೇಳಿರಲಿ, ತನ್ನೊಂದು ಆಖ್ಯಾನದಲ್ಲಿ. 'ಕರ ನಾಟಕೀ ನಾಟಕ ಕರೀ ಅಶೀ ಈಶ ಆಜ್ಞಾ ವಾಟೆ ಮಮ ಮನೇ ಗಜಾನನಾ' ಎಂಬುದಾಗಿ ಪರೋಕ್ಷ ರೀತಿಯಲ್ಲಿ ಒಪ್ಪಿಕೊಂಡಿದ್ದಾನೆ.

ವೇಷಭೂಷಣಗಳನ್ನು 'ಖರಾಬ' ಎಂಬುದಾಗಿ ಮೂಷಿಸಿದ್ದನಷ್ಟೇ. ಮೇಲೆ ಹೇಳಿದ ರಂಗಭೂಮಿ ಪತ್ರಿಕೆಯಲ್ಲಿ (೧೯೦೩) ಒಬ್ಬರು ಭಾವೇನ ಬಗ್ಗೆ ಬರೆಯುವಾಗ "ಸ್ತ್ರೀ, ಪುರುಷ, ದೇವತೆ, ರಾಕ್ಷಸ –ಇವು ಸ್ಫುಟವಾಗಿ ಪ್ರತ್ಯೇಕಿಸುವ ರೀತಿಯಲ್ಲಿ ತೋರಿಸುವುದನ್ನು ವಿಷ್ಣುದಾಸನು ಕಂಡುಹಿಡಿದನಂತೆ. ಇಂಥ ಕ್ರಮವು ಈ ಹಿಂದೆ ಇಲ್ಲದಾಗ, ಅದಕ್ಕೆ ಪ್ರತಿಯಾಗಿ ಯಕ್ಷಗಾನದ ಪಾತ್ರಗಳ ವೇಷದಲ್ಲಿ ಹಾಗೇನೆ ಇದ್ದಾಗ, ೧೮೪೨ರಲ್ಲಿ ಅವನು ನೋಡಿದ ಯಕ್ಷಗಾನ ಪಾತ್ರಗಳಿಂದಲೇ ತೆಗೆದುಕೊಂಡಿದ್ದಾನೆಂದು ಹೇಳಬೇಕಲ್ಲವೆ?

ಅವನು ರಚಿಸಿದ ಹಾಡುಗಳಲ್ಲಿಯ ಎರಡು ಲಕ್ಷಣಗಳನ್ನು ಗಮನಿಸಬೇಕು. ಒಂದನೆಯದು ರಂಗದ ಮೇಲೆ ಬರುವ ಪಾತ್ರವನ್ನು ಬರಮಾಡಿಕೊಳ್ಳುವಾಗ ಆ ಪಾತ್ರದ ವಿಶೇಷತೆಯ ಕಲ್ಪನೆ ಬರುವಂತೆ ಹಾಡುಗಳಿರುತ್ತಿದ್ದುವು. ಇದು ಯಕ್ಷಗಾನ ಪ್ರಸಂಗದಲ್ಲಿ ಸರ್ವೇ ಸಾಮಾನ್ಯ.

ಎರಡನೆಯ ಲಕ್ಷಣವಂತೂ ಯಕ್ಷಗಾನ ಪದ್ಯಗಳ ಅನುಕರಣದ ಸ್ಪಷ್ಟ ನಿದರ್ಶನವಾಗಿದೆ. ಅದೆಂದರೆ ಅವನು ರಚಿಸಿದ ಹಾಡುಗಳಲ್ಲಿ ಸಂಭಾಷಣೆಯನ್ನು ತೋರ್ಪಡಿಸುವ ಕ್ರಮ. ಹಾಗೆ ತಂದ ಎಲ್ಲ ಪಾತ್ರಗಳಿಗೂ ಮಾತಾಡುವ ಅವಕಾಶ ಇರುತ್ತಿತ್ತು. ಇದೊಂದು ಉದಾಹರಣೆ :

ಬೋಲೆ ಮುನಿ ರಾಘವಾಲಾ 'ಪಹಾ ಹೇ ಜನಕಾಚೀ ಪುತ್ರೀ ಸ್ವಯಂವರಾಸೀ ಜಾನಕೀಚೆ.'

ಮುನಿ ಬೋಲವಿಲೆ 'ಉಪಯಿಕ ಜಾವೂ ಮಿಥಿಲಾ ನಗರೀ... ಅನಂದೇ ಮನಾ
ಕರೂನಿ ನಿದ್ರಾ ಯೇತಾ ರವಿ ಉದಯಾಸೀ ಅಟೋಪುನೀ
ನಿತ್ಯ ಕರ್ಮೇ ನಿಘತೀ ತೇ ಮಿಥಿಲೇಸೀ.'

ಸಾಂಗಲಿಯ ಮಹಾರಾಜರು ೧೮೫೨ರಲ್ಲಿ ತೀರಿಕೊಂಡ ಮೇಲೆ ತಾತ್ಯಾಸಾಹೇಬ ಪಟವರ್ಧನನು ಪಟ್ಟಕ್ಕೆ ಬಂದನು. ಆದರೆ ಅವನಿಗೆ ರಂಗಭೂಮಿಯಲ್ಲಿ ಆಸಕ್ತಿ ಇರಲಿಲ್ಲ. ತನ್ನ ಆಖ್ಯಾನಗಳನ್ನು ಹಿಡಿದುಕೊಂಡು ಮಿರಜ, ಪುಣೆ ಮುಂತಾದ ಸ್ಥಳಗಳಿಗೆ ಹೋಗಿ ಅಲ್ಲಿಯೇ ಪ್ರಯೋಗಿಸಿ ಬಂದ. ಕ್ರಮೇಣ ಇತರರೂ ಈ ಉದ್ಯಮದಲ್ಲಿ ತೊಡಗಿಕೊಂಡರು. ಅವರು ಉತ್ತರ ಕರ್ನಾಟಕದ ದೊಡ್ಡಾಟ ಮುಂತಾದ್ದನ್ನು ನೋಡಿ ತಮ್ಮ ರಂಗಪ್ರಯೋಗಗಳಲ್ಲಿ ಸುಧಾರಣೆ ಮಾಡಿಕೊಂಡರು –ಎಂಬುದಾಗಿ ವಿಠ್ಠಲ ರಾಮಜಿ ಶಿಂಧೆ ಎಂಬ ಕೊಲ್ಹಾಪುರದ ಲೇಖಕರು ೧೯೧೭ರ 'ಕೇಸರಿ'ಯಲ್ಲಿ ಬರೆದಿದ್ದಾರೆ.

ವಿಷ್ಣುದಾಸ ಭಾವೆನಂತೆ ಇನ್ನೊಬ್ಬ ಮರಾಠೀ ಲೇಖಕ ಯಕ್ಷಗಾನ ಪ್ರಯೋಗಗಳನ್ನು ಟೀಕಿಸಿದ್ದ; ಹೆಸರು, ಕೃಷ್ಣಾಜಿ ಆಬಾಜಿ ಗುರೂಜಿ. ೧೯೧೧ರಲ್ಲಿ ಅವನು ಬರೆದ 'ನಾಟಕಾಚೀ ಸ್ಥಿತ್ಯಂತರೇ' ಎಂಬ ಲೇಖದಲ್ಲಿ "ಯಾವ ಸಂದರ್ಭವೇ ಇರಲಿ ಯಾವ ರಸಾವಿರ್ಭಾವವೇ ಇರಲಿ ಪಾತ್ರಗಳು ಹಾಡುತ್ತವೆ. ಹೀಗೆ ಹಾಡುವಾಗ ಸೀತೆಯು ಭೂಮಿಯ ಮೇಲೆ ಬೀಳುವಳು; ಬಿದ್ದಾಗ ಕೂಡಾ ಹಾಡುತ್ತಲೇ ಇರುತ್ತಾಳೆ" ಎಂಬುದಾಗಿ ಟೀಕಿಸಿದ್ದಾನೆ. ಯಕ್ಷಗಾನ ಪಾತ್ರಗಳದ್ದು ಖರಾಬ ವೇಷ ಎಂದು ಭಾವೇನಂತೆಯೇ ಇವನೂ ಟೀಕಿಸಿದ್ದಾನೆ.

ಈ ಗುರೂಜಿ ಧಾರವಾಡದಲ್ಲಿ ಕೆಲ ಕಾಲ ಇದ್ದ. ಮುದವೀಡು ಕೃಷ್ಣರಾಯರು ಅವನನ್ನು ಬಲ್ಲವರಾಗಿದ್ದರು (೧೯೨೦ರ ದಶಕ). ಪರಸ್ಪರರಲ್ಲಿ ಸಾಹಿತ್ಯಿಕ ಚರ್ಚೆ ನಡೆಯುತ್ತಿದ್ದಿತು. ಅವನು ೧೮೯೬ರ 'ಇಂದುಪ್ರಕಾಶ' ಎಂಬ ಮರಾಠೀ ಪತ್ರಿಕೆಯಲ್ಲಿ ಕನ್ನಡದ ಅವಹೇಳನ ರೀತಿಯ ಲೇಖವೊಂದನ್ನು ಬರೆದನಂತೆ. ಅದಕ್ಕೆ ಮುದವೀಡು ಅವರು ಉತ್ತರ ಕೊಟ್ಟರೆಂಬ ಅಂಶವನ್ನು ಆರ್. ವಿ. ಜಾಗೀರದಾರರು (ಶ್ರೀರಂಗ) ಪ್ರಸ್ತಾಪಿಸಿದ್ದಾರೆ.

ಪ್ರೊ. ಬನಹಟ್ಟಿ :

ಕ್ರಿ.ಶ. ೧೮೪೨ರ ಯಕ್ಷಗಾನ ಪ್ರಯೋಗ ಹಾಗೂ ಅನಂತರದ ವಿದ್ಯಮಾನಗಳನ್ನು ಪ್ರೊ. ಶ್ರೀ. ನಾ. ಬನಹಟ್ಟಿ ಎಂಬ ಮರಾಠೀ ಪ್ರೊಫೆಸರರು ವಿವರವಾಗಿ ಹೇಳಿದ್ದಾರೆ. 'ಮರಾಠೀ ರಂಗಭೂಮಿಯ ಪ್ರಥಮ ಘಟ್ಟ' ಎನ್ನುವುದು ಅವರ ಗ್ರಂಥ. ಅದನ್ನು ಬರೆಯುವುದಕ್ಕೆ ಕಾರಣ, ಈ ಪ್ರಥಮ ಘಟ್ಟದ ಕುರಿತು (೧೮೭೯ರ ವರೆಗಿನದು) ಮಹಾರಾಷ್ಟ್ರದಲ್ಲಿ ಚರ್ಚೆ ನಡೆಯುತ್ತಿತ್ತು. ಆಗ ಸ್ವಾಭಾವಿಕವಾಗಿಯೇ ಕರ್ನಾಟಕದ ಯಕ್ಷಗಾನ ಪ್ರಯೋಗದ ಪ್ರಸ್ತಾಪ ಬರಲೇಬೇಕಲ್ಲವೆ. "ತಮ್ಮದು ಸತ್ಯಾನ್ವೇಷಣೆಯ ದೃಷ್ಟಿ. ಸತ್ಯವನ್ನು ಕಂಡುಹಿಡಿಯಲು ಯತ್ನಿಸಿದ್ದೇನೆ. ನಮ್ಮಲ್ಲಿ ಕೆಲವರಿಗೆ ಅದು ಅಪ್ರಿಯವೆನಿಸಿದರೆ ಉಪಾಯವಿಲ್ಲ" ಎಂಬ ನಿಲುಮೆಯಿಂದ "ಸಾಂಗಲಿ ಮಹಾರಾಜರು ಯಕ್ಷಗಾನವನ್ನು ಮೆಚ್ಚಿಕೊಂಡಿದ್ದರು. ಅದು ಕೀಳು ದರ್ಜೆಯದೆಂದು ತಿಳಿದಿರಲಿಲ್ಲ" ಎಂಬುದನ್ನು ವಿಶದಪಡಿಸಿದ್ದಾರೆ. "ಭಾವೇನ ಹೇಳಿಕೆ ತಪ್ಪು" ಎಂದು ಸ್ಪಷ್ಟವಾಗಿ ಸಾರಿದ್ದಾರೆ.

ಯಕ್ಷಗಾನವು ಹೇಗಿದ್ದಿತು? ಅದಕ್ಕಾಗಿ ಅವರು ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಪ್ರೊಫೆಸರರಾಗಿ ಇದ್ದ ಜಾಗೀರದಾರ(ಶ್ರೀರಂಗ)ರೊಡನೆ ಪತ್ರವ್ಯವಹಾರ ಮಾಡಿದರು (ಫೆಬ್ರುವರಿ-ಮಾರ್ಚ್ ೧೯೪೪). ಜಾಗೀರದಾರರಿಗೆ ಅವರು ಕೇಳಿದ ಪ್ರಶ್ನೆಗಳು ಒಂದೆರಡಲ್ಲ–

ಕಂಡುಬರುತ್ತದೆ. ಡಾ. ಪ್ರಹ್ಲಾದ ಮುದಗಲ್ಲರು ಇಂಥ ೧೫೦ ಕನ್ನಡ ಧಾಟಿಗಳನ್ನು ಎತ್ತಿಕೊಂಡಿರುವ ಮರಾಠೀ ನಾಟಕಗಳಲ್ಲಿಯ ಹಾಡುಗಳ ಪಟ್ಟಿ ಮಾಡಿದ್ದಾರೆ.

ಮಹಾರಾಷ್ಟ್ರದಲ್ಲಿ ಕೃಷ್ಣಪಾರಿಜಾತ ಆಟದ ಪ್ರಭಾವ ಬಲವತ್ತರವಾಗಿರುವುದನ್ನು ಗಮನಿಸಿ ಅದರ ಒಂದು ಆವೃತ್ತಿಗಾಗಿ ಮರಾಠಿಯಲ್ಲಿ ಪ್ರಸ್ತಾವನೆಯನ್ನೂ ಆ ಲಿಪಿಯಲ್ಲಿಯೆ ಇಡೀ ಕೃತಿಯನ್ನೂ ಮುದ್ರಿಸಿದ್ದಾರೆ. ಕಿಟೆಲ್ ಯೇಸುಕ್ರಿಸ್ತನ ಜೀವನವನ್ನು ಷಟ್ಪದಿ ಹಾಗೂ ಕೀರ್ತನೆಗಳ ಸ್ವರೂಪದಲ್ಲಿ ಚಿತ್ರಿಸಿದ್ದಾರಷ್ಟೆ. ಅದಕ್ಕೆ ಅವರು 'ಕೃಷ್ಣಪಾರಿಜಾತ'ದ ಆಟವನ್ನು ಉತ್ತರ ಕರ್ನಾಟಕದಲ್ಲಿ ಇದ್ದಾಗ ನೋಡಿ ಪ್ರೇರಣೆ ಪಡೆದಿರಬೇಕು. (ಮಂಗಳೂರ ಕಡೆಯ ಯಕ್ಷಗಾನದ ಅಭಿಯೋಗವೂ ಇದ್ದಿರಬಹುದು.)

ಶಾಕುಂತಲ ನಾಟಕವನ್ನು ಸಂಗೀತ ಸಹಿತ ಮರಾಠಿಗೆ ಅನುವಾದಿಸಿ, ಮರಾಠೀ ರಂಗಭೂಮಿಗೆ ಭದ್ರ ಬುನಾದಿಯನ್ನು ಹಾಕಿದ ಅಣ್ಣಾಸಾಹೇಬ ಕಿರ್ಲೋಸ್ಕರರು ಕೃಷ್ಣಪಾರಿಜಾತವನ್ನು ಇಡಿಯಾಗಿ ಮರಾಠಿಗೆ ಅನುವಾದಿಸಿ ರಂಗದ ಮೇಲೆ ತರಬೇಕೆಂದು ಪ್ರಯತ್ನಿಸಿದರು. ಅದಕ್ಕಾಗಿ ಬೆಳಗಾಂವಿಯ ಸುಂಠಣಕರ ವಾಡೆ ಎಂಬಲ್ಲಿ ರಂಗತಾಲೀಮನ್ನೂ ಹಮ್ಮಿಕೊಂಡಿದ್ದರು. ಆದರೆ ಆ ಕೆಲಸ ಕೈಗೂಡಲಿಲ್ಲ.

■ ಡಾ. ಶ್ರೀನಿವಾಸ ಹಾವನೂರ : ಕರ್ನಾಟಕ ಥಿಯಾಲಾಜಿಕಲ್ ಕಾಲೇಜ್, ಮಂಗಳೂರು-೧ ■

ಏಳು ಹಿಂದೀ ಕವಿತೆಗಳು — ಜಿ. ಭಾಸ್ಕರ ಮಯ್ಯ

೧. ಕಲೆ : ಕೇದಾರ್‌ನಾಥ್ ಸಿಂಹ್

ಬೆಳಗಿನಿಂದ ಬಿದ್ದುಕೊಂಡಿತ್ತು
ರಸ್ತೆಯ ನಟ್ಟ ನಡುವೆ
ಕೆಂಪು ರಾಚುವ ರಕ್ತದ ಕಲೆ
ಈಗ ಅದು ಒಣಗಿ
ಕೆಂಬಣ್ಣದಿಂದ ಬೂದು
ಬೂದು ಬಣ್ಣದಿಂದ ನಿಧಾನವಾಗಿ ಕಪ್ಪಾಗುತ್ತಾ ಇತ್ತು
    ಯಾರೇ ಆ ಕಡೆ ಬಂದರೂ
    ನೋಡುತ್ತಿದ್ದ ಕಲೆಯನ್ನು
    ಮತ್ತೆ ನೋಟ ತಪ್ಪಿಸಿ ಎಡದಿಂದಲೊ ಬಲದಿಂದಲೊ
    ಹೋಗುತ್ತಿದ್ದರು ಮುಂದೆ
ಇದೇ ರೀತಿ ದಿನವಿಡೀ
ಕೈ ಮೇಲೆತ್ತಿಕೊಂಡು
ರಸ್ತೆಯ ಮೇಲೆ ಬಿದ್ದುಕೊಂಡಿತ್ತು ರಕ್ತದ ಕಲೆ
    ಯಾರೂ ಬರದಿದ್ದಾಗ
    ಇಡೀ ದಿನದ ಬಿಸಿಲಿನ ನಂತರ
    ಗುಡುಗುತ್ತಾ ಸರಸರ ಬಂತು ಮಳೆ
    ಅದು ಕಲೆಯ ಕಡೆ ಬಂತು
ನಿಧಾನವಾಗಿ ಕಲೆಯನ್ನು ಮುಟ್ಟಿತು
ಎತ್ತಿಕೊಂಡಿತು

(ಇವರ ಅನುವಾದ : ವಿಶ್ವಾಮಿತ್ರನು ರಾಮಚಂದ್ರನಿಗೆ ಹೇಳುತ್ತಾನೆ : ಬೆಳಿಗ್ಗೆ ಮಿಥಿಲೆಗೆ ಹೋಗೋಣ. ಈಗ ಆರಾಮವಾಗಿ ನಿದ್ದೆ ಮಾಡು. ನಾಳೆ ಸೂರ್ಯೋದಯಕ್ಕೆ ನಿತ್ಯಕರ್ಮ ಮುಗಿಸು. ಮಿಥಿಲೆಗೆ ಹೋಗೋಣ.)

ಇದೇ ಪ್ರಸಂಗವು ಪಾರ್ತಿಸುಬ್ಬನ 'ಸೀತಾಕಲ್ಯಾಣ'ದಲ್ಲಿ ಹೇಗೆ ಬಂದಿದೆಯೆಂಬುದಕ್ಕೆ ಹೋಲಿಸಬಹುದು.

'[ಜನಕನ] ಓಲೆಯನು ಕಂಡು ಮುನಿಪಾಲ ತಾ ಹರುಷದಲಿ
ಶ್ರೀಲೋಲ ಶ್ರೀರಾಮನಿಗೆ ನುಡಿದನೀ ತೆರದಿ॥ ಇನಕುಲೇಶ ಬಾಲರಾಮ... ಮಿಥಿಲ
ಪುರಕೆ ಪೋಗಬೇಕೆಲ್ಮೆ ಜನಕರಾಯ ತಾನು ಮಾಳ್ಪನೊಂದು ಮದುವೆಯು'

ಮುಂದೆ ಮಿಥಿಲೆಗೆ ವಿಶ್ವಾಮಿತ್ರಾದಿಗಳು ಬಂದ ಮೇಲೆ, ಪಾರ್ತಿಸುಬ್ಬನು ಒಂದು ಪದ್ಯದಲ್ಲಿ, ಜನಕರಾಜ ವಿಶ್ವಾಮಿತ್ರನಿಗೆ– ಕೇಳುವನು :

"ವಂದಿಸುವೆನಯ್ಯ ನಿಮಗೆ ವಿಶ್ವಾಮಿತ್ರ, ಚೆಲುವ ಬಾಲವರ್ಯಾರು"
"ದಶರಥೇಂದ್ರನಣುಗ ರಾಮ. ಅಸಮ ಸದ್ಗುಣ ಧಾಮ"

ಎಂಬ ಸಂಭಾಷಣೆ ಅಲ್ಲಿ ಬಂದಿದೆ.

ಇದೇ ಧರತಿಯ ಸಂಭಾಷಣಾ ಪದ್ಯ ವಿಷ್ಣುದಾಸನಲ್ಲಿಯೂ ಇದೆ :

ಜನಕನ ಪ್ರಶ್ನೆ : "ಕಳೂನಿ ವೃತ್ತ ಮುನಿಗ ಹೇ ಜನಕರಾಜೀ ಸಮೋರಾ. ಸಾಂಗಾ ಕೋಣ ಹೇ ಮಜಲಾ"

"ದಶರಥಸುತ ಹೇ ಸ್ವಯಂವರ ಆಲೇ ಹೇ ತವ ಭಾಗ್ಯ."

ಪಾರ್ತಿಸುಬ್ಬ ಮತ್ತು ವಿಷ್ಣುದಾಸ ಪರಸ್ಪರರನ್ನು ಅನುಸರಿಸಿದ್ದಾರೆಂದು ಅರ್ಥವಲ್ಲ. ಪದ್ಯಗಳಲ್ಲಿ ಸಂಭಾಷಣೆಯನ್ನು ತರುವ ಕ್ರಮ ಯಕ್ಷಗಾನದಲ್ಲಿ ಇತ್ತು. ಅದನ್ನು ವಿಷ್ಣುದಾಸ ಭಾವೆ ಅನುಸರಿಸಿದ್ದಾನೆ. ಹೀಗೆ ಪಾತ್ರಗಳು ಹಾಡಿನ ಮಧ್ಯೆ ತರುವ ಕ್ರಮವನ್ನು ವಿಷ್ಣುದಾಸನು ತಂದದ್ದು ಹೊಸತು ಎಂಬ ಅಂಶವನ್ನು ಮೇಲ್ಕಂಡ 'ರಂಗಭೂಮಿ'ಯ ಲೇಖಕ ಒತ್ತಿ ಹೇಳಿದ್ದಾನೆ.

ತಿಳಿಯಬೇಕಾದ ಮಾತೆಂದರೆ ಯಕ್ಷಗಾನದಿಂದ ಸಾಕಷ್ಟು ಪ್ರಯೋಜನ ಪಡೆದಾಗ್ಯೂ ಅದನ್ನು ತೆಗಳುವುದು ವಿಷ್ಣುದಾಸನಿಗೆ ಅನಿವಾರ್ಯವಾಗಿತ್ತು. ಇಲ್ಲವಾದರೆ ತಾನು ಮಾಡಿದ ಕೆಲಸಕ್ಕೆ ಮಹತ್ವ ಬರುವುದು ಹೇಗೆ?

ಅನುಬಂಧ

ಶ್ರೀಕೃಷ್ಣಪಾರಿಜಾತ

ಆಗಿನ ಮರಾಠೀ ರಂಗಭೂಮಿಯ ಮೇಲೆ ಯಕ್ಷಗಾನ ಪ್ರಯೋಗವೊಂದೇ ಪ್ರಭಾವ ಬೀರಿಲ್ಲ. ಅಪರಾಳ ತಮ್ಮಣ್ಣನ ಸಂಗೀತ ರೂಪಕದ ಹಾಡುಗಳು, ಮತ್ತು ಅವುಗಳ ಧಾಟಿ ೧೯ನೆಯ ಶತಮಾನದಿಡೀ ಮಹಾರಾಷ್ಟ್ರದಲ್ಲಿ ರಾರಾಜಿಸಿದುವು. ಅಲ್ಲಿಯ ಗಜಾನನ ಮತ್ತು ಶಾರದಾ ಸ್ತುತಿಗಳಿಗೆ ಕನ್ನಡ ಹಾಡುಗಳನ್ನೇ ಬಳಸುತ್ತಿದ್ದರಾಗಿ ವಿ. ಪಿ. ವೈದ್ಯ ಎಂಬವರು ಬರೆದಿದ್ದಾರೆ. ಜೊತೆಗೆ ಮರಾಠೀ ನಾಟಕಕಾರರು ತಮ್ಮ ನಾಟಕದ ಹಾಡುಗಳಿಗೆ ಕನ್ನಡ ಧಾಟಿಯನ್ನು ಧಾರಾಳವಾಗಿ ಆಯ್ದುಕೊಳ್ಳುತ್ತಿದ್ದರು. ಶ್ರೀಕೃಷ್ಣಪಾರಿಜಾತದ 'ಬೆಳಗಾಗ ಬಂತು ಬಿಡೆನ್ನ ಹ್ಯಾ ಚಾಲೀವರ' ಎಂಬ ರೀತಿಯ ಉಕ್ತಿ ಅನೇಕ ನಾಟಕಗಳಲ್ಲಿ

೩. ಹಕ್ಕಿ : ರಾಮ್‌ದರಶ್ ಮಿಶ್ರ

ಹಕ್ಕಿ ಹಾರುತ್ತಾ ಎಲ್ಲಿಂದಲೊ ಬಂತು
ಬಹಳ ಹೊತ್ತು ಅತ್ತಿತ್ತ ಅಲೆದಾಡುತ್ತಾ
ತನ್ನ ಗೂಡನ್ನು ಹುಡುಕುತ್ತಾ ಇತ್ತು
ಮತ್ತೆ, ಸುಸ್ತಾಗಿ ಸುಟ್ಟ ಕೊಂಬೆಯ ಮೇಲೆ
ಕುಳಿತು ಯೋಚಿಸತೊಡಗಿತು–
ಇಂದು ಕಾಡಿಗೆ ಯಾವನೋ ಮನುಷ್ಯ ಬಂದಿದ್ದನೆ?

೪. ಪತ್ರಗಳು : ರಾಮ್‌ದರಶ್ ಮಿಶ್ರ

ಲೆಟರ್‌ಬಾಕ್ಸ್‌ನಲ್ಲಿ ಬಿದ್ದುಕೊಂಡಿರುವ ಪತ್ರಗಳು
ಅನಂತ ಸುಖ-ದುಃಖದ ಅನಂತ ಪತ್ರಗಳು
ಆದರೆ ಯಾವುದೂ ಯಾರೊಡನೆಯೂ ಮಾತನಾಡುವುದಿಲ್ಲ
ಎಲ್ಲವೂ ಒಂಟಿ-ಒಂಟಿ
ತಮ್ಮ ಸ್ಥಾನ ಸೇರಲು ಕಾಯುತ್ತಿವೆ.
ಒಟ್ಟಿಗೇ ಇವೆ ಹೇಗೆ ಇವು?
ಪರಸ್ಪರ ನಗುವೂ ಇಲ್ಲ ಅಳುವೂ ಇಲ್ಲ
ನಾವೂ ಕೂಡಾ
ಲೆಟರ್‌ಬಾಕ್ಸಿನ ಪತ್ರಗಳಾಗಿದ್ದೇವೆಯೆ?

೫. ಸಮಯ : ಅರುಣ್ ಕಮಲ್

ಇಂಥಾದ್ದೇ ಸಮಯ ಬಂದಿದೆ
ತಾಯಿ ಮಗುವಿಗೆ ಹಾಲು ಕುಡಿಸುವುದು
ಅಪರಾಧ
        ಅವರು ಕೈಯಲ್ಲಿ ಹಗ್ಗದ ಕುಣಿಕೆ ಹಿಡಿದು
        ತಿರುಗುತ್ತಿದ್ದಾರೆ ನಾಲ್ಕೂ ಕಡೆ
        ಎಲ್ಲಾದರೂ ಕರು ದನದ ಮೊಲೆಗೆ ಬಾಯಿ ಹಾಕಿದರೆ
        ಓಡಿ ಬರುತ್ತಾರೆ ಕುಣಿಕೆ ಹಾಕಿ ಎಳೆದುಕೊಳ್ಳುತ್ತಾರೆ
ಮಾತನಾಡುವುದು ಅಪರಾಧ
ಕೆಮ್ಮುವುದು ಅಪರಾಧ
ಅಂಗಳದಲ್ಲಿ ಹೆಂಗಸರು ನಗುವುದು ಅಪರಾಧ
        ಚೂರಿ ಝಳಪಿಸುತ್ತಾ ಗೂಂಡಾಗಳು ತಿರುಗುತ್ತಿದ್ದಾರೆ
        ತನ್ನದೇ ಮನೆಯ ಬಾಗಿಲಲ್ಲಿ
        ಕುಳಿತ ಮನುಷ್ಯ
        ಕೊಲೆಯಾಗುತ್ತಿದ್ದಾನೆ

ಆಲಿಂಗಿಸಿತು
ಮತ್ತೆ ಕಲೆ ಬಿದ್ದುಕೊಂಡಿದ್ದ ತಳವನ್ನು
ತನ್ನ ಒದ್ದೆ ಕೈಗಳಿಂದ
ತಿಕ್ಕಿ ತಿಕ್ಕಿ ತೊಳೆಯಿತು
ಹೀಗೆ ಮುಗಿಯಿತು ರಕ್ತದ ಕಲೆಯ ಕತೆ
ಈಗ ಮಳೆ ಸಂತುಷ್ಟ,
ತಾನು ಕಲೆಯನ್ನು ತೊಳೆದುಬಿಟ್ಟೆನೆಂದು!
ಕಲೆಯೂ ಬಹಳ ಸಂತುಷ್ಟ
ತಾನು ಎಂದೂ ರಸ್ತೆಯ ಮೇಲೆ
ಇರಲೇ ಇಲ್ಲ ಎಂದು!

೨. ವ್ಯವಸ್ಥೆ : ಕುಂವರ್ ನಾರಾಯಣ್

ನಿನ್ನೆ ಮತ್ತೊಂದು ಕೊಲೆಯಾಯ್ತು
ವಿಲಕ್ಷಣ ಪರಿಸ್ಥಿತಿಗಳಲ್ಲಿ
ನಾನು ಆಸ್ಪತ್ರೆಗೆ ಹೋದೆ
ಆದರೆ ಆ ಸ್ಥಳ ಆಸ್ಪತ್ರೆಯಾಗಿರಲಿಲ್ಲ.
ಅಲ್ಲಿ ವೈದ್ಯರನ್ನು ಭೆಟ್ಟಿಯಾದೆ
ಆ ಮನುಷ್ಯ ವೈದ್ಯನಾಗಿರಲಿಲ್ಲ.
ಆತ ನರ್ಸ್‌ನೊಡನೆ ಏನೋ ಅಂದ
ಆ ಹೆಂಗಸು ನರ್ಸ್ ಆಗಿರಲಿಲ್ಲ.
ಅವರು ಆಪರೇಶನ್ ರೂಮಿಗೆ ಹೋದರು
ಆ ಸ್ಥಳ ಆಪರೇಶನ್ ರೂಮ್ ಆಗಿರಲಿಲ್ಲ.
ಅಲ್ಲಿ ಅನಸ್ತೇಸಿಯಾ ಡಾಕ್ಟರ್
ಮೊದಲೇ ಇದ್ದರು– ಆದರೆ ಅವರೂ
ಸತ್ಯ ಹೇಳಲೆ, ಬೇರೆ ಯಾರೋ ಆಗಿದ್ದರು.
ಅಲ್ಲಿಗೆ ಅರ್ಧ ಸತ್ತ ಮಗುವೊಂದು ತರಲಾಯಿತು
ಅದು ರೋಗಿಯಾಗಿರಲಿಲ್ಲ, ಹಸಿದಿತ್ತು.
ಡಾಕ್ಟರ್ ಮೇಜಿನ ಮೇಲಿಂದ
ಆಪರೇಶನ್ ನೈಫ್‌ನ್ನೆತ್ತಿದ
ಆದರೆ ಅದು ನೈಫ್ ಆಗಿರಲಿಲ್ಲ
ತುಕ್ಕು ಹಿಡಿದ ಭಯಾನಕ ಚೂರಿಯಾಗಿತ್ತು.
ಚೂರಿಯನ್ನು ಮಗುವಿನ ಹೊಟ್ಟೆಗೆ ಇರಿಯುತ್ತಾ
ಆತನೆಂದ
ಈಗ ಈತ ಸಂಪೂರ್ಣ ಗುಣಮುಖನಾಗುತ್ತಾನೆ!

ಬೂದಿಯುಂಡ ನೆಲ
ಖಂಡಿತವಾಗಿಯೂ ಸಾಕಷ್ಟು ಕೊಡುತ್ತದೆ ಅನ್ನ...
ಆದರೆ, ಹಕ್ಕಿಗಳ ಆಕ್ರಮಣ ತಡೆಯುವುದು ಹೇಗೆ?
ಬೂದಿ ಸೇರಿದ ನದಿಯ ನೀರು
ಖಂಡಿತವಾಗಿಯೂ ಅತಿ ಹೆಚ್ಚು ನಿರ್ಮಲವಾಗುವುದು
ಆದರೆ,
ಮೊಸಳೆಗಳು ಎಲ್ಲಿಗೆ ಹೋಗುತ್ತವೆ?

೭. ಹೇಳು ತಾಯಿ, ಈಗ ನಾನೇನು ನೋಡಲಿ? : ಮಹಾದೇವೀ ವರ್ಮಾ

ಹೇಳು ತಾಯಿ ನಾನೇನ ನೋಡಲಿ ಈಗ?
ಅರಳುತ್ತಿರುವ ಮೊಗ್ಗುಗಳ ನೋಡಲೆ?
ಬಾಯಾರಿದ ಒಣಗಿದ ತುಟಿಗಳ ನೋಡಲೆ?
ನಿನ್ನ ಚಿರಯೌವನ, ಸೌಂದರ್ಯ ನೋಡಲೆ?
ಅಥವಾ ಜರ್ಜರ ಬದುಕ ನೋಡಲೆ?
ನೀಲ ಕಮಲಗಳ ಮೇಲೆ ಉಯ್ಯಲಾಡುವ
ನಗುವ ಹಿಮಕಣ ವಜ್ರವ ನೋಡಲೇ?
ಅಥವಾ ಒಣಗಿದ ರೆಪ್ಪೆಗಳಲ್ಲಿ
ಸುರಿವ ಕಣ್ಣೀರ ನೋಡಲೇ?
ಸುಗಂಧವ ಕುಡಿಕುಡಿದು ಹರಿವ
ಮಂದ ಸಮೀರವ ನೋಡಲೇ?
ದುಃಖದ ಗುಟುಕು ಕುಡಿವ
ತಣ್ಣಗಿನ ಶ್ವಾಸವ ನೋಡಲೇ?
ನವ ಕಿಸಲಯದುಯ್ಯಾಲೆಯಲಿ
ನಿನ್ನ ಮರಿದುಂಬಿಗಳ ಕಂಡು ಆನಂದಿಸಲೆ?
ಪಾಷಾಣದ ಮೇಲೆ ಹೊಸಕಲ್ಪಡುತ್ತಿರುವ
ಹೂಗಳ ಶೈಶವ ನೋಡಲೇ?
ನಿನ್ನ ಅಸೀಮ ಅಂಗಳದ
ಜಗಮಗಿಸುವ ದೀಪಾವಳಿಯ ನೋಡಲೇ?
ಅಥವಾ ಈ ನಿರ್ಜನ ಮೂಲೆಯ
ನಂದುವ ದೀಪವ ನೋಡಲೇ?
ಜಲದ ಕಲಕಲದೊಡನೆ ಬೆಸವ
ಹಕ್ಕಿಗಳ ಕಲರವ ಕೇಳಲೇ?
ಸ್ತಬ್ಧವಾಗಿ ಬಿದ್ದ ವೀಣೆಯ ನೋಡಲೇ?
ಚೆಲ್ಲಿ ಹರಡಿದ ಮನವ ನೋಡಲೇ?

ರಸ್ತೆ ದಾಟುತ್ತಾ
ಅಕಸ್ಮಾತ್ ಯಾವುದೊ ಮಾತಿಗೆ ನಗುತ್ತಾ
ಎಲ್ಲಾದರೂ ಯಾರಾದರೂ ಕೊಲೆಯಾಗಬಹುದು
ಇಂಥಾದ್ದೇ ಸಮಯ ಬಂದಿದೆ
ಇಂಥಾದ್ದೇ ಸಮಯ ಬಂದಿದೆ
ಗೂಂಡಾಗಳು ಚೆಂಡು ಹೂವಿನ ಮಾಲೆ ಧರಿಸಿ
ಜಯಜಯಕಾರ ಮಾಡುತ್ತಿದ್ದಾರೆ
ಪ್ರಾಣಘಾತಕ ವಿಷವೃಕ್ಷ ಹೂ ಹಣ್ಣು ಬಿಡುತ್ತಿವೆ
ಮಡಿಗಳಲ್ಲಿ ನೆಟ್ಟ ಹೂಗಿಡಗಳಿಗೆ ನೀರಿಲ್ಲ...

೬. ನೀನು ಹೇಳಿದ್ದಿ... : ನಾಗಾರ್ಜುನ್

ನೀನು ಹೇಳಿದ್ದಿ:
ಸತ್ತ ಮೇಲೆ
ನನ್ನ ಬೂದಿ ನೆಲದ ಮೇಲೆಲ್ಲಾ ಚೆಲ್ಲಲ್ಪಡಲಿ.
ನೀನು ಹೇಳಿದ್ದಿ:
ಸತ್ತ ಮೇಲೆ
ನನ್ನ ಬೂದಿ ಗಂಗಾ ನದಿಗೆ ಎಸೆಯಲ್ಪಡಲಿ...
ಸರಿ
ನೆಲದ ಮೇಲೆ ಬೂದಿ ಚೆಲ್ಲಲ್ಪಟ್ಟಿದೆ
ದೂರದ ಆಕಾಶದಲ್ಲಿ ವಿಮಾನಗಳಲ್ಲಿ ಹಾರಾಡುತ್ತಾ
ಬುದ್ಧಿವಂತ ಕೈಗಳು ಮಾಡಿವೆ ಈ ಕೆಲಸ
ಚಿಂತೆ ಮಾಡಬೇಡ ಪಂಡಿತ್ ನೆಹ್ರೂ!
ಹಾಕಲಾಗಿದೆ ನಿನ್ನ ಬೂದಿ ಗಂಗಾ ನದಿಗೂ
ಅಂತೆಯೆ, ಬೇರೆ ನದಿಗಳಿಗೂ ಕೂಡಾ.
ಧನ್ಯವಾಯಿತು ನಿನ್ನ ಬೂದಿ
ಚಿಂತೆ ಮಾಡಬೇಡ ಪಂಡಿತ್ ನೆಹ್ರೂ!
ನಾವು ನಿನ್ನ ಕೊನೆಯ ಆಸೆಯಂತೆ
ವಿಸರ್ಜಿಸಿದ್ದೇವೆ ಭಸ್ಮಕಲಶಗಳನ್ನು.
ಆದರೆ, ಈಗ
ಮನಸಿನೊಳಗೊಂದು ಪ್ರಶ್ನೆ
ಯಾರೊಡನೆ ಹೇಳಲಿ?
ಯಾರು ಉತ್ತರ ಕೊಡುತ್ತಾರೆ?

ದ್ರಾವಿಡ ಸಂಬಂಧ-೩ : ಕಡಲು ಕುಡಿದ ಭೂಮಿಯ ಕತೆ

ಒಂದು ಅನುಬಂಧ* ಷ. ಶೆಟ್ಟರ್

ಕಟಲ್ಕೋಳ್ ಸ್ವರೂಪ :

ಇಲೆಮೂರಿಯಾ ಖಂಡವನ್ನು ಹೆಚ್ಚು ಪ್ರಸ್ತುತಗೊಳಿಸಿಕೊಳ್ಳಲು, ೨೦ನೇಯ ಶತಮಾನದ ತಮಿಳರು ಆರಂಭ ಕಾಲದ ಶಂಗಂ ಸಾಹಿತ್ಯವನ್ನು, ಮಧ್ಯಕಾಲೀನ ಟೀಕಾಗ್ರಂಥಗಳನ್ನು, ಅಲ್ಲದೇ ಕೆಲವು ಐತಿಹಾಸಿಕ ಆಕರ-ಐತಿಹ್ಯಗಳನ್ನು ಸಮರ್ಥವಾಗಿ ಬಳಸಿಕೊಂಡರು. ಟೀಕಾಕಾರರಿಂದ ಪಡೆದ 'ಕಟಲ್ಕೋಳ್' ಪದದಿಂದ ಮಾತ್ರ ತೃಪ್ತಿಗೊಳ್ಳದೆ 'ಕುಮಾರಿಕ್ಕಂಟಂ' ಎಂಬ ಹೊಸ ಪದವನ್ನು ಅವರು ಸೃಷ್ಟಿಸಿಕೊಂಡರು. ಸಂಸ್ಕೃತ ಪುರಾಣಗಳಲ್ಲಿ ಬರುವ 'ಕುಮಾರಿಖಂಡ' ಮತ್ತು 'ಕುಮಾರಿದ್ವೀಪ' ಎಂಬ ಪದಗಳಿಂದ ಇದನ್ನವರು ಪಡೆದುಕೊಂಡರೆಂಬುವರಲ್ಲಿ ಅನುಮಾನವಿಲ್ಲ. ಮಧ್ಯಕಾಲೀನ ಟೀಕಾಕಾರರು ಬಳಸಿದ್ದ 'ಕಟಲ್ಕೋಳ್' ಪದವು ಕಡಲುಪಾಲಾಗಿದ್ದ ಶಂಗಂ ಸಾಹಿತ್ಯವನ್ನು ಸೂಚಿಸಿತ್ತಲ್ಲದೆ ಪುರಾತನ ತಮಿಳರ ಭೂಪ್ರದೇಶವನ್ನಲ್ಲ; ಆದರೆ, ಅವರು ಉಲ್ಲೇಖಿಸಿದ ಪಹ್ರುಳಿ ಮತ್ತು ದಕ್ಷಿಣ ಕುಮಾರಿ ನದಿಗಳ ಭೂಭಾಗವೂ ಇವರಲ್ಲಿ ಮುಳುಗಡೆಯಾಯಿತೆಂದು ವಾದಿಸಲು ತಮಿಳರಿಗೆ ಸುಲಭಸಾಧ್ಯವಾಯಿತು.

ಪಾಂಡ್ಯರಾಜನು ಆಚರಿಸಿದ ಸಾಗರೋತ್ಸವದ ಸಂದರ್ಭದಲ್ಲಿ ನೆಡಿಯೋನ್-ಕುಮಾರಿ ನದಿಗಳ ಪ್ರಸ್ತಾಪವನ್ನು ಪುಱನಾನೂರಿನಲ್ಲಿ ಮಾಡಲಾಗಿದೆ.[೨೬] ಈ ನದಿಗಳ ನಡುವಿನ ಫಲವತ್ತಾದ ಭೂಪ್ರದೇಶವೇ ಆದಿಕಾಲದ ತಮಿಟಕಂ ಆಗಿತ್ತಲ್ಲದೆ ಮೊದಲ ಶಂಗಂವನ್ನು ಪೋಷಿಸಿದ ದಕ್ಷಿಣ ಮದುರೈ ಇದ್ದದ್ದೂ ಇಲ್ಲಿಯೇ. ಆದರೆ ಈ ಗ್ರಂಥದಲ್ಲಿ 'ಕಟಲ್ಕೋಳ್'ದ ಪ್ರಸ್ತಾಪವಾಗಲೀ ಮೊದಲ ಶಂಗಂನ ಪ್ರಸ್ತಾಪವಾಗಲೀ ಬರುವುದಿಲ್ಲ– ಇವು ಮೊದಲು ಕಾಣಸಿಕೊಳ್ಳುವುದು ನಕ್ಕೀರರ್‌ನ ಟೀಕಾಗ್ರಂಥದಲ್ಲಿ.[೨೭]

ಕಳೆದುಕೊಂಡ ಭೂಪ್ರಮಾಣ :

ಶಿಲಪ್ಪದಿಕಾರಂ ಕವಿ ಇಳಂಕೋವಟಿಗಳ್ (ಇಳಂಗೋ ಅಡಿಗಳ್) ಸಮುದ್ರಪಾಲಾದ ಭೂಮಿಗೆ ಸಂಬಂಧಿಸಿದ ಇನ್ನೊಂದು ಘಟನೆಯನ್ನು ಹೀಗೆ ಸ್ಮರಿಸಿರುವನು : ಮಹಾಶೂರನಾದ ತೆನ್ನವನ್ ಪಾಂಡ್ಯನು ಶತ್ರುರಾಜರೆದುರು ತನ್ನ ಅಗ್ಗಳಿಕೆಯನ್ನು ಮೆರೆಯಲು ಸಮುದ್ರ ದಡದ ಮೇಲೆ ನಿಂತು ತನ್ನ ಆಯುಧವನ್ನು ಜಲರಾಶಿಯೆಡೆಗೆ ತೂರಿ ಎಸೆಯುವನು. ಇದರಿಂದ ಅವಮಾನಿತಗೊಂಡ ಸಮುದ್ರರಾಜನು ಪಹ್ರುಳಿ-ಕುಮಾರಿ ನದಿಗಳನ್ನೂ ಅವುಗಳ ಸುತ್ತಮುತ್ತಲ ಗಿರಿಪ್ರದೇಶವನ್ನೂ ತನ್ನ ಒಡಲಿನೊಳಕ್ಕೆ ಸೆಳೆದುಕೊಂಡು ಸೇಡು ತೀರಿಸಿಕೊಳ್ಳುವನು.[೨೮] ಈ ಗ್ರಂಥಕ್ಕೆ ಮುಂದೊಮ್ಮೆ ಟೀಕೆಯನ್ನು ಒದಗಿಸಿದ ಅಡಿಯಾರ್ ಕುನಲ್ಲಾರ್ ಜಲಾಂತರ್ಗತವಾದ ಭೂಮಿಯ ಅಂದಾಜು ಕಟ್ಟಿ, ಅದು ನಲ್ವತ್ತೊಂಬತ್ತು

* ಸಂಕಲನ-೨೨ ರಿಂದ ಮುಂದುವರಿದ ಲೇಖನ.

ನಿದ್ರೆಯ ರೆಕ್ಕೆಗಳಲ್ಲಿ ಸಿಕ್ಕಿಕೊಂಡಿರುವ
ಮೃದು ರಜತರಶ್ಮಿಗಳ ನೋಡಲೇ?
ಅಥವಾ ಎವೆಯಿಕ್ಕದ ರೆಪ್ಪೆಗಳ
ಚಿಂತೆಯ ನೋಡಲೇ?
ನಿನ್ನಲಿದೆ ಎಂದೂ ಬಾಡದ ನಗು
ಇಲ್ಲಿದೆ ಎಂದೂ ನಿಲ್ಲದ ಕಣ್ಣೀರು
ನಿನ್ನ ವೈಭವ ನೋಡಲೇ ಅಥವಾ
ಜೀವನದೀ ಕ್ರಂದನ ನೋಡಲೇ?

■ ಡಾ. ಜಿ. ಭಾಸ್ಕರ ಮಯ್ಯ : ಪ್ರಸಾದ, ಗುಂಡ್ಮಿ-೫೭೬ ೨೨೬ ತಾ. ಜಿ. ಉಡುಪಿ ■

ಐದು ಚಿತ್ರಗಳು

ಜಂಬಣ್ಣ ಅಮರಚಿಂತ

೧.

ಮಂಜಿನ ಹನಿ ಕೂಡ ಮದಿರೆಯಾಗುವುದು
ನಿನ್ನ ದೃಷ್ಟಿಯನು ಮಂಜಿನ ಕಡೆಗೆ ಹರಿಸು
ಮುಳ್ಳು ಕೂಡ ಹೂವಾಗಿ ಅರಳಿ ನಗುವುದು
ನಿನ್ನ ತುಟಿಗಳಿಂದ ಮುಳ್ಳನ್ನು ಚುಂಬಿಸು

೨.

ನಿಮಗೆ ನೋವು ನಲಿವು ಬೇಕೆಂದರೆ
ಒಮ್ಮೆ ಪ್ರೀತಿ ಮಾಡಿ ನೋಡಿ
ಸೋಲಲ್ಲಿ ಗೆಲುವು ಕಾಣಬೇಕೆಂದರೆ
ಒಮ್ಮೆ ಹೃದಯ ಸೋತು ನೋಡಿ

೩.

ಅಪ್ಪ ಹಲ್ಲೆಲ್ಲಾ ಬಿದ್ದು ಹೋದವು
ನನಗಿನ್ನೂ ಬುದ್ಧಿ ಹಲ್ಲು ಬಂದಿಲ್ಲ
ಕಣ್ಣಿನ ದೃಷ್ಟಿ ಮಂದವಾಯಿತು
ನಿಮ್ಮ ಕಣ್ಣನ್ನು ತೆರೆದುಕೊಂಡಿಲ್ಲ

೪.

ಕಾಲಿಗೆ ಬಿದ್ದಿವೆ ಬೇಡಿಗಳು
ಪಯಣದ ಮಾತು ಕನಸಿನದು
ಕೃತಕ ಹೂ ಅರಳಿ ನಗುತಿವೆ
ಕೇಳದಿರು ಸುಗಂಧ, ಕೃತಕ ಮನಸಿನದು

೫.

ಬಾಧೆಯನು ಬೋಧೆ ಎಂದುಕೊಂಡರೆ
ಯಾರಿಗೆ ಯಾವ ಬಾಧೆ ಕಾಣದು
ಅವಮಾನವನು ಮಾನವೆಂದುಕೊಂಡರೆ
ಮನಸು ಯಾವ ಸನ್ಮಾನ ಬೇಡದು

■ ಜಂಬಣ್ಣ ಅಮರಚಿಂತ :
೬-೧೧-೧೬೧/೭೯೬. ಅಮರಚಿಂತ ನಿಲಯ, ವಿದ್ಯಾನಗರ, ರಾಯಚೂರು-೫೮೪ ೧೦೩ ■

(ಕೆಳಗಿನ ಪಾಳುಭೂಮಿ), ೭ ಕುಣ್ರು (ಗಿರಿಗ್ರಾಮಗಳು), ೭ ಕುಣಕಾರೈ (ಪೂರ್ವಕರಾವಳಿ), ೭ ಕುಱುಂಪಣೈ (ಕುಬ್ಜ ತಾಳೆಮರಗಳ) ಪ್ರದೇಶಗಳನ್ನೊಳಗೊಂಡಿದ್ದವು. ಮತ್ತೊಂದು ಪರಿಭಾಷೆಯಲ್ಲಿ ಇವನ್ನು ನಾವೆಲ್‌ವೃಕ್ಷ, ಅಶ್ವತ್ಥವೃಕ್ಷ, ನೀರ್ಪಂಟು (ರೀಫ್ಸ್) ಪ್ರದೇಶ, ಅಂದಿವ್ ಪಕ್ಷಿಧಾಮ, ಗಜಕ್ಷೇತ್ರ, ತೆಂಗುತೋಟ ಮತ್ತು ಅಡಕೆತೋಟಗಳ ಪ್ರದೇಶಗಳೆಂದು ಗುರುತಿಸಲಾಯಿತು. ಇನ್ನೂ ಮತ್ತೊಂದೆಡೆ ಪೆರುವಳನಾಟ(ಫಲವತ್ತಾದ ವಿಶಾಲ ಭೂಮಿ)ನ್ನು ಪಣ್ಣೈನಾಟ್ಟು (ತಾಳೆಮರಗಳ ನಾಡು), ಓಳಿನಾಟ್ಟು (ಬಯಲುನಾಡು), ಪಣ್ಮಲೈನಾಟ್ಟು (ಗಿರಿಸಮೂಹದ ನಾಡು) ಎಂಬವುಗಳಿಗೆ ಸಮೀಕರಿಸಲಾಯಿತು. ಕನ್ಯಾಕುಮಾರಿಯನ್ನು ಮೂರು ಸಾಗರಗಳು ಬಳಸಿರುವಂತೆ, ಅಂದಿನ ತಮಿೞಹಂವನ್ನು ಕುಮಾರಿಕ್ಕಡಲ್, ಕುಣಕ್ಕಡಲ್ ಮತ್ತು ತೆಣ್‌ಕಡಲ್ ಸುತ್ತುವರಿದಿದ್ದವೆಂದೂ ಈಗ ಪಶ್ಚಿಮದಲ್ಲಿ ಉಗಮಗೊಂಡು ಪೂರ್ವದೆಡೆ ಹರಿಯುವ ದಕ್ಷಿಣ ಭಾರತದ ನದಿಗಳಂತೆ ಅಂದಿನ ದಕ್ಷಿಣಕುಮಾರಿ ಮತ್ತು ಪಹ್‌ಱುಳಿ ನದಿಗಳೂ ಪಶ್ಚಿಮದಲ್ಲಿ ಉಗಮಗೊಂಡು ಪೂರ್ವದೆಡೆ ಹರಿಯುತ್ತಿದ್ದವೆಂದು ವಾದಿಸಲಾಗಿದೆ.[೨೪] ಈ ನದೀ ನಡುವಣ ಪ್ರದೇಶವನ್ನು ಸುತ್ತುವರಿದಿದ್ದ ಕುಮಾರಿಕ್ಕೋಟು, ಕುಮಾರಿಮಲೈ, ಕುಮಾರಿಕಣ್ಣು, ಕೊಲ್ಲಂ ಮೊದಲಾದ ಪರ್ವತಗಳು ಪ್ರಮಾಣದಲ್ಲಿ ಮತ್ತು ಪಾವಿತ್ರ್ಯತೆಯಲ್ಲಿ ಹಿಮಗಿರಿಗಳಿಗೆ ಸಮೀಕರಿಸಲಾಯಿತು.

ಐತಿಹಾಸಿಕ ಕುರುಹುಗಳ ಬಳಕೆ :

ಕಡಲುಪಾಲಾದ 'ತಮಿೞಹಂ'ನ ವಾಸ್ತವತೆಯನ್ನು ಪರಿಚಯಿಸಿಕೊಳ್ಳಲು, ೧೯೬೦ರ ದಶಕದಲ್ಲಿ ಕೆಲವು ಐತಿಹಾಸಿಕ ಕುರುಹುಗಳನ್ನು ಬಳಸಿಕೊಳ್ಳುವ ಪ್ರಯತ್ನಗಳು ನಡೆದವು. ಈ ಪ್ರದೇಶವನ್ನು ಆಳಿದ ಪಾಂಡ್ಯ, ಚೋಳ, ಚೇರರಲ್ಲದೆ ಇವರ ಸಾಮಂತರು ಮತ್ತು ಇವರ ಅಧೀನಕ್ಕೊಳಪಡದ ಕೆಲವು ಸ್ವತಂತ್ರ ಅರಸರು ಪ್ರಸಿದ್ಧ ಬಂದರು-ನಗರಗಳನ್ನು ಕಟ್ಟಿ ಬೆಳೆಸಿದುದನ್ನು ಐತಿಹಾಸಿಕ ಆಕರಗಳಿಂದ ತಿಳಿದುಕೊಳ್ಳಲಾಯಿತು. ಇವುಗಳಲ್ಲಿ ಪಾಂಡ್ಯರ ಕೊರ್ಕೈ (ಗ್ರೀಕರ ಕೊಬೈ?), ಚೋಳರ ಪುಹಾರ್ (ಪೂಂಪುಹಾರ್ ಅಥವಾ ಕಾವೇರಿ ಪಟ್ಟಿಣಂ), ಚೇರರ ಮುಶಿರಿ ಮತ್ತು ತೊಂಡೈಮಾನರ್‌ನ ನೀರ್ಪೆಯಜ್ಞ್‌ಗಳು ಅಂದಿನ ಅತ್ಯಂತ ಪ್ರಸಿದ್ಧ ಕೇಂದ್ರಗಳಾಗಿದ್ದವೆಂಬುದನ್ನು ಐತಿಹಾಸಿಕ ಆಕರಗಳು ಬೆಂಬಲಿಸಿದುವು. ಹೆಸರೇ ಸೂಚಿಸುವಂತೆ ಇವುಗಳಲ್ಲಿ 'ನೀರ್ಪೆಯಜ್ಞ್' ಎಂಬುದು ಸಮುದ್ರದಲೆಗಳ ತುಂತುರು ಹನಿಗಳಿಂದ ತೊಯ್ದ ನಗರ; ಕಾರಣ, 'ಕಟಿನ್‌ಮಳ್ಳೈ' ಎಂಬ ವಿಶೇಷಣದಿಂದ ಗುರುತಿಸಲ್ಪಟ್ಟ ಈ ಬಂದರು ಮತ್ತಿನ್ನಾವುದೂ ಆಗಿರದೆ ಇಂದಿನ ಮಾಮಲ್ಲಪುರಂ (ಮಹಾಬಲಿಪುರಂ) ಆಗಿತ್ತು. ಮಾಮಲ್ಲಪುರಂವನ್ನು ಒಂದು ಕಾಲಘಟಕದಲ್ಲಿ ಸಮುದ್ರವು ಕಬಳಿಸಿತ್ತೆನ್ನಲು ಕೆಲವು ಐತಿಹ್ಯಗಳನ್ನೂ ಕೆಲವು ಐತಿಹಾಸಿಕ ಅವಶೇಷಗಳನ್ನೂ ದೊರಕಿಸಿಕೊಳ್ಳಲಾಯಿತು. ಇದನ್ನು ಗಟ್ಟಿಗೊಳಿಸಲು ಇತ್ತೀಚೆಗೆ (೨೬, ಡಿಸೆಂಬರ್ ೨೦೦೪) ಸಂಬಂಧಿಸಿದ ಸುನಾಮಿಯು ತೆರೆದಿಟ್ಟಿರುವ ಸಾಕ್ಷ್ಯಾಧಾರಗಳು ಈಗ ಇನ್ನಷ್ಟು ಸಹಕಾರಿಯಾಗಿವೆ. ಸಮುದ್ರ ತೀರವನ್ನು ಅಪ್ಪಳಿಸಿ ಹಿಂದಕ್ಕೆ ಸರಿಯುವಾಗ ಈ ಸುನಾಮಿಯ ದೈತ್ಯ ಅಲೆಗಳು ತನ್ನೊಡನೆ ಅಪಾರ ಮರಳದಿನ್ನೆಯನ್ನು ಅಪಹರಿಸಿ ಒಯ್ದುದರಿಂದ ತೀರದೇವಾಲಯ (ಷೋರ್ ಟೆಂಪಲ್)ದ ಬಳಿಯಲ್ಲಿಯ ಬಂಡೆಗಲ್ಲುಗಳನ್ನು,

‘ನಾಟ್ಟು’ಗಳನ್ನೊಳಗೊಂಡ, ಏಳುನೂರು ‘ಕಪಾತಂ’ ಪ್ರಮಾಣದ ಪ್ರದೇಶವಾಗಿತ್ತೆಂಬ ನಿರ್ಣಯಕ್ಕೆ ಬಂದನು. ಈ ‘ನಾಟ್ಟು’ ಮತ್ತು ‘ಕಪಾತಂ’ಗಳನ್ನು ಆಧುನಿಕ ಪರಿಭಾಷೆಗೆ ತಂದುಕೊಂಡು ಮುಳುಗಡೆಯಾದ ಭೂಮಿಯ ನಿಜಪ್ರಮಾಣವನ್ನು ಅರಿತುಕೊಳ್ಳುವ ಜಿಜ್ಞಾಸೆಯು ೨೦ನೆಯ ಶತಮಾನದ ತಮಿಳರನ್ನು ಕಾಡುವ ಅಗ್ರಪ್ರಶ್ನೆಯಾಯಿತು. ಊಹಾಪ್ರಮಾಣವನ್ನು ಬಿಟ್ಟರೆ ಬೇರಾವ ಅಳತೆಗೋಲೂ ಇಲ್ಲವಾದುದರಿಂದ ಅದನ್ನೇ ಬಳಸಿಕೊಂಡು ಕಡಲುಪಾಲಾದ ಭೂಮಿಯು ೬,೦೦೦-೭,೦೦೦ ಚದರು ಮೈಲಾಗಿತ್ತೆಂದು ಕೆಲವರು, ೧,೪೦೦-೨,೦೦೦ ಚ. ಮೈ. ಪ್ರದೇಶವಾಗಿತ್ತೆಂದು ಇನ್ನು ಕೆಲವರು ವಾದಿಸಿದರು. ಐತಿಹಾಸಿಕ ಕೇಂದ್ರಗಳಲ್ಲಿ ಮತ್ತು ಹೆಸರಾಂತ ಬಂದರು-ನಗರಗಳಲ್ಲಿ ದೊರೆತ ಕೆಲವು ಕುರುಹುಗಳನ್ನು ಆಧರಿಸಿ ಇನ್ನೂ ಕೆಲವರು ಮುಳುಗಡೆಯಾದ ಪ್ರದೇಶವು ಕೇವಲ ಕೆಲವು ಹಳ್ಳಿಗಳನ್ನು ಮಾತ್ರ ಒಳಗೊಂಡದ್ದಾಗಿದ್ದು, ಬಹುಶಃ ಎರಡು ‘ಕೂಱ್ರಂ’ಗಿಂತ ಮೀರದ, ಪ್ರದೇಶವಾಗಿತ್ತೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.[೧೯] ಸ್ವಾತಂತ್ರ್ಯಾಂದೋಲನ ಮತ್ತು ಭಾಷಾ ಹೋರಾಟವು ತೀಕ್ಷ್ಣಗೊಳ್ಳುತ್ತಿದ್ದ ಆ ಕಾಲದಲ್ಲಿ ಇಂತಹ ಚರ್ಚೆಗಳು ಭಾವಾವೇಶಕ್ಕೊಳಗಾದವರಿಂದಲೇ ಹೆಚ್ಚು ನಿರ್ಣಯ ಪಡೆದುಕೊಳ್ಳುತ್ತಿದ್ದವೆಂಬುದು ನಮಗೆಲ್ಲ ತಿಳಿದ ವಿಷಯವಾಗಿದೆ. ೧೯೩೫ರಲ್ಲಿ ಕೆ. ಅನ್ನಪೂರ್ಣಿ ಎಂಬ ಭಾಷಾ ಆರಾಧಕಳೊಬ್ಬಳು ಕಡಲುಪಾಲಾದ ಭೂವಲಯದ ಭವ್ಯ ಚಿತ್ರವನ್ನು ಒದಗಿಸಿಕೊಟ್ಟು ಜನಸಾಮಾನ್ಯರ ಕಣ್ಮಣಿಯಾದಳು. ಅವಳ ಪ್ರಕಾರ ಏಳುನೂರು ‘ಕಪಾತಂ’ ಭೂಪ್ರದೇಶವು ಪಣ್ಮೈನಾಡು, ಕುಮಾರಿಕ್ಕೋಟು, ಮಣಿಮಲೈ ಗಿರಿಸಾಲು, ಮತ್ತೂರು ಮತ್ತು ಕಪಾಟಪುರಂ ಮುಂತಾದ ನಗರಗಳನ್ನೂ ಕುಮಾರಿ ಮತ್ತು ಪಹ್‌ಱುಳಿ ನದಿಗಳನ್ನೂ ಒಳಗೊಂಡಿದ್ದಾಗಿದ್ದು ವಿಜ್ಞಾನಿಗಳು ಸೂಚಿಸಿದ್ದ ‘ಲೆಮೂರಿಯಾ’ ಭೂವಲಯಕ್ಕೆ ಸರಿಸುಮಾರು ಸಮನಾಗಿತ್ತು.[೨೦] ಇದೇ ಬಗೆಯ ಚರ್ಚೆ ಮತ್ತು ನಿರ್ಣಯಗಳು ನಲ್ವತ್ತೊಂಬತ್ತು ‘ನಾಟ್ಟು’ಗಳ ಬಗ್ಗೆಯೂ ಆದವು.

‘ನಾಟ್ಟು’ ಎಂದರೇನು? ಅವು ಯಾವುವು? :

‘ನಾಟ್ಟು’(ನಾಡು) ಘಟಕದ ಪ್ರಪ್ರಥಮ ಉಲ್ಲೇಖ ಬರುವುದು ಶಂಗಂ ಸಾಹಿತ್ಯದಲ್ಲಿ. ಕಾತ್ತು, ಕೊಂಕು, ಕರಿ, ಪೆಣ್ಣೈ, ಮಲೈ, ಮುಕ್ಕಾವಳ್, ವೇಂಕಟ, ಕೋ ಮೊದಲಾದ ನಾಡುಗಳನ್ನು ಪುಱನಾನೂಱಿನಲ್ಲಿ ಹೆಸರಿಸಲಾಗಿದೆ.[೨೧] ಇದರ ಶಾಸನಿತ ಪ್ರಸ್ತಾಪ ಮೊಟ್ಟಮೊದಲ ಬಾರಿಗೆ ಬರುವುದು ಕ್ರಿ.ಪೂ. ೧ನೆಯ ಶತಮಾನದ ಸಿತ್ತನ್‌ವಾಸಲ್ (ಪುದುಕೊಟ್ಟೈ ಜಿಲ್ಲೆ) ಏಳಟಿಪಟ್ಟಮ್ ಗಿರಿಗುಹೆಯ ಜೈನಶಾಸನದಲ್ಲಿ– ಅದು ಸಂಕೇತಿಸಿದ ಪ್ರದೇಶವು ಪಶ್ಚಿಮ ಘಟ್ಟದ ಇಂದಿನ ಕನ್ನಡ-ತುಳುನಾಡ ಭಾಗ.[೨೨] ಕುಮಾರಿ ಐತಿಹ್ಯಕ್ಕೆ ನೇರವಾಗಿ ಸಂಬಂಧಿಸಿದ ಮೊಟ್ಟಮೊದಲ ಉಲ್ಲೇಖ ಬರುವುದು ಶೆಂಗೋನ್ ಪಾಂಡ್ಯನು ಆಳಿದ ಪೆರುವಳ‘ನಾಟ್ಟಿ’ಗೆ. ಇದು ದಕ್ಷಿಣಕಾವೇರಿ ಮತ್ತು ಪಹ್‌ಱುಳಿ ನದಿಗಳ ನಡುವಣ ಪ್ರದೇಶವೆಂದು ಐತಿಹ್ಯಗಳು ತಿಳಿಸುವವು.[೨೩]

ಇಲ್ಲಿ ಪ್ರಸ್ತಾಪಿಸಿರುವ ನಲ್ವತ್ತೊಂಬತ್ತು ನಾಟ್ಟುಗಳ ಚರ್ಚೆಗೆ ಮೊದಲು ಕೈಹಾಕಿದವನು ಅಡಿಯಾರ್ಕ್ಕುನಲ್ಲಾರ್– ಇವನ ಅಭಿಮತದಂತೆ ಅವು ೭ ತೆಂಕು (ತೆಂಗು)ನಾಡು, ೭ ಮತುರೈ (ದಕ್ಷಿಣ ಮದುರೈ ಸುತ್ತಮುತ್ತಲ)ನಾಡು, ೭ ಮೇಣ್ಪಾಲೈ (ಮೇಲಿನ ಮರುಭೂಮಿ), ೭ ಪಿಣ್ಪಾಲೈ

ಇದು ೧೮೬೬ರಲ್ಲಿ ಸ್ಕಾಟ್ ಇಲಿಯಟ್‌ನಿಂದ ಪ್ರಾರಂಭಗೊಂಡು, ೧೯೩೫ರಲ್ಲಿ ಥಿಯೋಸಾಫಿಸ್ಟರ ಕೈಯಲ್ಲಿ ರೂಪಾಂತರ ಹೊಂದುತ್ತಾ, ೧೯೬೦ರ ವರೆಗೂ ಮುಂದುವರಿಯಿತು. ಸುದೀರ್ಘವೂ ಜಟಿಲವೂ ಆದ ಅಟ್ಲಾಂಟಿಕ್-ಪ್ಯಾಸಿಫಿಕ್ ನಕಾಶೆಯ ಇತಿಹಾಸವನ್ನು ಬದಿಗಿತ್ತು, ನಮಗೆ ಇಲ್ಲಿ ಹೆಚ್ಚು ಪ್ರಸ್ತುತವಾದ ತಮಿೞಹಂ ನಕಾಶೆವೆಡೆ ಗಮನ ಕೇಂದ್ರೀಕರಿಸಲು ನಾನು ಇಚ್ಛಿಪವುವೆ.[29]

ಕಡಲಡಿ ಸೇರಿದ ನಲ್ವತ್ತೊಂಬತ್ತು ನಾಡುಗಳ ಮೊಟ್ಟಮೊದಲ ಪಟನಕಾಶೆಯನ್ನು ಸಿದ್ಧಪಡಿಸಿದ ತಮಿಳರಲ್ಲಿ ಎಸ್. ಸುಬ್ರಮಣಿಶಾಸ್ತ್ರಿಗೆ ಒಂದು ವಿಶಿಷ್ಟ ಸ್ಥಾನವಿದೆ. ಈತನು ೧೯೧೫-೧೬ರ ಕಾಲಾವಧಿಯಲ್ಲಿ 'ತಮಿೞ್‌ನಾಟುಕಟ್' (ತಮಿಳುನಾಡುಗಳು) ಎಂಬ ಲೇಖನವನ್ನು ಪ್ರಕಟಿಸಿ, ಕಡಲಡಿ ಸೇರಿದ ಭೂಮಿಯ ಸಚಿತ್ರ ಸಿದ್ಧಾಂತವನ್ನು ಮೊಟ್ಟಮೊದಲ ಬಾರಿಗೆ ಮಂಡಿಸಿದನು. ಇವರ ಪ್ರಕಾರ ಮುಳುಗಡೆಯಾದ ಭೂಮಿಯ ಪ್ರಮಾಣವು ತಮಿಳು ಭಾವುಕರು ಭಾವಿಸಿದಂತೆ ಸಾವಿರಾರು ಚ.ಮೈ. ಪ್ರದೇಶವಾಗಿರಲಿಲ್ಲ; ಅದು ಅಂದಾಜು ಒಂದು ತಾಲೂಕು ವಿಸ್ತಾರದ ಭೂಮಿಯನ್ನು ಹೋಲುವಷ್ಟಾಗಿತ್ತು. ಶಾಸ್ತ್ರಿ ರಚಿಸಿದ ನಕಾಶೆಯ ವಿನ್ಯಾಸವು ಇಂದಿನ ಪೆನಿನ್ಸುಲರ್ ಭೂಪಟವನ್ನು ಮಾದರಿಯನ್ನಾಗಿಸಿಕೊಂಡಿತ್ತು, ಆದರೆ ಅದರಲ್ಲಿ ಅದಿಯರ್‌ಕ್ಕುನಲ್ಲರ್ ಸೂಚಿಸಿದ್ದ, ಕನ್ಯಾಕುಮಾರಿಯ ದಕ್ಷಿಣಕ್ಕಿತ್ತೆನ್ನಲಾದ, ಭೂಮಿಗೆ– ಅದರಲ್ಲೂ ಕುಮಾರಿ ಮತ್ತು ಪಹ್‌ಱುಳಿ ನದಿ ಪ್ರದೇಶಕ್ಕೆ– ಸ್ಪಷ್ಟತರವಲ್ಲಿ ಅನುವು ಮಾಡಿಕೊಡಲಾಗಿತ್ತು.

ಸುಬ್ರಮಣಿಶಾಸ್ತ್ರಿಯಿಂದ ಪ್ರಾರಂಭಗೊಂಡ ತಮಿೞಹಂ ನಕಾಶೆಯ ನಿರ್ಮಾಣ ಕೃಷಿಯು ೨೦ನೆಯ ಶತಮಾನದುದ್ದಕ್ಕೂ ಮುಂದುವರಿಯಿತು. ಹೀಗೆ ಸಿದ್ಧಪಡಿಸಿದ ನಕಾಶೆಗಳಿಗೆ ಕೊಟ್ಟ ಶೀರ್ಷಿಕೆಗಳಿಂದಲೇ ಅವುಗಳ ನಿರ್ಮಾತೃಗಳ ಪ್ರಧಾನ ಗೊತ್ತುಗುರಿಯನ್ನು ಊಹಿಸಲು ಸಾಧ್ಯವಾಗುವುದರಿಂದ, ಅವುಗಳಲ್ಲಿ ಕೆಲವನ್ನಿಲ್ಲಿ ನಿದರ್ಶಿಸುವುದು ಉಚಿತವೆನಿಸುವುದು. 'ಪುರಾಣಿಕ್ ಇಂಡಿಯ ಬಿಫೋರ್ ದಿ ಡೆಲ್ಯೂಜ್' (ಪ್ರಳಯಪೂರ್ವದ ಪೌರಾಣಿಕ ಭಾರತ), 'ಪುರಾಣಿಕ್ ಇಂಡಿಯ ಆಫ್ಟರ್ ದಿ ಡೆಲ್ಯೂಜ್' (ಪ್ರಳಯೋತ್ತರ ಕಾಲದ ಪೌರಾಣಿಕ ಭಾರತ), 'ಪಳೈಯ ತಮಿೞಹಂ' (ಪುರಾತನ ತಮಿಳರ ತವರುಮನೆ), 'ಬಿ.ಸಿ. ೩೦,೦೦೦ ಇಂಡಿಯಾ: ತಮಿೞ್‌ನಾಡು' (ಕ್ರಿ.ಪೂ. ೩೦,೦೦೦ದ ಭಾರತ: ತಮಿಳುನಾಡು), 'ಕಟಲ್ಕೊಂಟ ಕುಮಾರಿಕ್ಕಂಟಂ' (ಕಡಲು ಕೊಂಡೊಯ್ದ ಕುಮಾರಿ ಭೂಖಂಡ), 'ಕಟಲ್‌ಕೊಂಟ ಕುಮಾರಿನಾಟು' (ಕಡಲು ಕೊಂಡೊಯ್ದ ಕುಮಾರಿನಾಡು), 'ವ್ಯಾನಿಷ್ಡ್ ಲುಮೂರಿಯಾ ಕಾಂಟಿನೆಂಟ್' (ಅದೃಶ್ಯವಾದ ಲೆಮೂರಿಯಾ ಭೂಖಂಡ), 'ದಿ ಲುಮೂರಿಯಾ ಕಾಂಟಿನೆಂಟ್ ವಿಚ್ ವಾಜ್ ಡೆಸ್ಟ್ರಾಯ್ಡ್ ಬೈ ದಿ ಸೀ' (ಕಡಲು ನಾಶಗೊಳಿಸಿದ ಲೆಮೂರಿಯಾ ಭೂಖಂಡ), 'ಲೂಮೂರಿಯಾ ಆರ್ ದಿ ಲಾಸ್ಟ್ ಕುಮಾರಿ ಕಾಂಟಿನೆಂಟ್ ಆರ್ ನವಲಂ ಐಲ್ಯಾಂಡ್' (ಲೆಮೂರಿಯಾ ಅಥವಾ ಕಣ್ಮರೆಯಾದ ಕುಮಾರಿ ಭೂಖಂಡ ಅಥವಾ ಜಂಬೂದ್ವೀಪ), 'ಕುಮಾರಿಕಂಟಂ ಅಲ್ಲತು ಕಟಲ್ಕೊಂಟ ತೆನ್ನಾಟು' (ಕುಮಾರಿ ಭೂಖಂಡ ಅಥವಾ ಕಡಲುಕೊಂಡ ದಕ್ಷಿಣ ನಾಡು) ಎಂಬವು ಇವುಗಳಲ್ಲಿ ಪ್ರಧಾನವಾದವುಗಳು.[30]

ಅವುಗಳ ಹೊರವಲ್ಯದಲ್ಲಿ ಬಿಡಿಸಿದ ಪಲ್ಲವ ಕಾಲದ ಉಬ್ಬುಶಿಲ್ಪಗಳನ್ನು ಮತ್ತು ಬೃಹತ್ ಪ್ರಮಾಣದ ಶಿವದೇವಾಲಯದ ಅವಶೇಷಗಳನ್ನು ಈಗ ತೆರೆದಿಟ್ಟಿರುವವು.[೨೫] ಇವರಂತೆ ಪಾಂಡ್ಯ ರಾಜ್ಯದ ಕೊರ್ಕೈಯ ಪ್ರಸ್ತಾಪವೂ ಅಹನಾನೂರು, ಸಜ್ಜಿನೈ, ಮಣಿಮೇಕಲೈಗಳಲ್ಲಿ ಬರುವುದಲ್ಲದೆ ಅದನ್ನು ತಿನ್ನವೆಲ್ಲಿ ಜಿಲ್ಲೆ ಶ್ರೀವೈಕುಂಟಮ್ ತಾಲೂಕಿನ ಇದೇ ಹೆಸರಿನ ಗ್ರಾಮವೆಂದು ಗುರುತಿಸಲಾಗಿದೆ. ಈಗಿನ ಕೋರ್ಕೈ ಗ್ರಾಮವು ಸಮುದ್ರದಿಂದ ಸುಮಾರು ಏಳು ಕಿ.ಮೀ. ದೂರದಲ್ಲಿರುವುದರಿಂದ ಮೂಲ ಪಟ್ಟಣವನ್ನು ಸಮುದ್ರವು ವಶಪಡಿಸಿಕೊಂಡ ನಂತರ ಉಳಿದ ಅಥವಾ ಪುನಃ ಕಟ್ಟಿದ ಗ್ರಾಮವಿದೆಂದು ಇಂದು ವಾದಿಸಲಾಗುತ್ತಿದೆ. 'ಕೊರ್ಕೈ' ಎಂಬ ತಮಿಳು ಪದವನ್ನು ಸಂಸ್ಕೃತೀಕರಿಸಿದ ಪರಿಣಾಮವಾಗಿ ಅದು 'ಕಪಾಟಪುರ' ಎಂದು ಕರೆಸಿಕೊಂಡಿತೆಂಬ ಅಭಿಮತವಿದೆ. ಇದು ಎರಡನೆಯ ಸಂಗಂನ ಕೇಂದ್ರಸ್ಥಾನವಾಗಿತ್ತೆಂದು ತಮಿಳು ಐತಿಹ್ಯವು ಪ್ರತಿಪಾದಿಸಿದರೆ, ಇದು ಹೆಸರಾಂತ ಮುತ್ತುಮತ್ಸ್ಯದ ಕೇಂದ್ರವಾಗಿತ್ತೆಂದು ಗ್ರೀಕ್ ಕೃತಿ ಪೆರಿಪ್ಲಸ್ ಸಾಕ್ಷಿ ಕೊಡುವುದು. ಕ್ರಿ.ಶ. ೩೦೬ರಲ್ಲಿ ಸಿಲೋನಿನ ಸುತ್ತ ಒಂದು ಸುನಾಮಿ ಸಂಭವಿಸಿತೆಂಬ ಜೇಮ್ಸ್ ಎಮರ್‌ಸನ್ ಟೆನ್ನೆಂಟ್‌ನ ವಾದವು ಕಡಲುಪಾಲಾದ ಕೊರ್ಕೈಯ ಬಗ್ಗೆ ಸಿದ್ಧಾಂತ ರೂಪಿಸಲು ಕೆಲವು ತಮಿಳರಿಗೆ ಪ್ರಬಲ ಆಧಾರವನ್ನೊದಗಿಸಿ ಕೊಟ್ಟಿತು.[೨೬] ಪ್ಲಿನಿ ಮತ್ತು ಪೆರಿಪ್ಲಸ್ ಕರ್ತೃವಿನ ಅಭಿಮತದಂತೆ ದಕ್ಷಿಣಭಾರತದ ಭೂಅಂಚು ಕನ್ಯಾಕುಮಾರಿಯಾಗಿರದೆ ಕೊರ್ಕೈಯಾಗಿತ್ತು; ಇಲ್ಲಿಂದ ನೇರ ದಕ್ಷಿಣಕ್ಕೆ ಒಂದು ದಿನ ಪ್ರಯಾಣ ಮಾಡಿದರೆ ತಪ್ರೋಬನೆ (ತಾಮ್ರಪರ್ಣಿ=ಶ್ರೀಲಂಕೆ) ಸಿಗುತ್ತಿತ್ತು. ಕೊರ್ಕೈಯ ಪಶ್ಚಿಮಕ್ಕೆ ಮತ್ತು ಆಫ್ರಿಕಾ ಖಂಡದ ದಿಕ್ಕಿನೆಡೆಗೆ ಹಲವಾರು ಕಿ.ಮೀ. ವಿಸ್ತಾರದ ಭೂಮಿಯೂ ಇತ್ತೆಂದೂ ಅದರಲ್ಲಿ ಮಾಲ್ಡೀವ್ಸ್, ಲಕ್ಷದ್ವೀಪ ಮೊದಲಾದವು ಸೇರಿದ್ದವೆಂದೂ ವಾದಿಸಲು ಕೆಲವರು ಈ ಆಧಾರಗಳನ್ನು ತಮ್ಮದೇ ಬಗೆಯಲ್ಲಿ ಬಳಸಿಕೊಂಡರು.[೨೭]

ಕ್ರಿ.ಶ. ಆರಂಭದಿಂದ ಪದಬಂಧದಲ್ಲಿಯೇ ಮುಂದುವರಿದ ಕಡಲುಪಾಲಾದ 'ತಮಿಳಹಂ' ನಕಾಶೆಯು ೨೦ನೆಯ ಶತಮಾನದಲ್ಲಿ ಪಟರೂಪ ಪಡೆದುಕೊಂಡಿತು ಮಾತ್ರವಲ್ಲ ಪಾಶ್ಚಾತ್ಯ ವಿಜ್ಞಾನಿಗಳು ಮೂಡಿಸಿದ್ದ ಲೆಮೂರಿಯಾ-ಗೊಂಡ್ವಾನ ಭೂನಕ್ಷೆಯೊಡನೆ ಪ್ರತಿಸ್ಪರ್ಧಿಸ ತೊಡಗಿತು. ಈ ಪಟನಕಾಶೆಯ ಇತಿಹಾಸವೂ ಇಷ್ಟೇ ಕುತೂಹಲಕರವೂ ಸ್ವಾರಸ್ಯಕರವೂ ಆಗಿದೆ.

ರೇಖಾನಕಾಶೆಯ ಪ್ರಾರಂಭ ಮತ್ತು ಪ್ರಗತಿ :

ಸ್ವಭಾಷಾಭಿಮಾನಿ ತಮಿಳರು ರೇಖಾನಕಾಶೆಯನ್ನು ಸಜ್ಜುಗೊಳಿಸುವುದಕ್ಕಿಂತ ಮುಂಚೆ, ಭಾರತೀಯ ಭೂಸರ್ವೇಕ್ಷಣದ ರಿಚರ್ಡ್ ಡಿ. ಓಲ್ಡ್ಹ್ಯಾಮ್ ಅದರ ರೂಪರೇಷೆಯನ್ನು ಸಿದ್ಧಪಡಿಸಿ ಕೊಟ್ಟಿದ್ದನು. ಈ ಮೊಟ್ಟಮೊದಲ ನಕಾಶೆಯನ್ನು ೧೮೯೦ರ ಜಿಯೋಗ್ರಾಫಿಕಲ್ ಜರ್ನಲ್‌ನಲ್ಲಿ ಪ್ರಕಟಿಸಲಾಗಿತ್ತು.[೨೮] ಆಲ್‌ಫ್ರೆಡ್ ವೆಗೆನರ್ ಎಂಬ ಜರ್ಮನೀಯನು ೧೯೨೨-೨೪ರ ಕಾಲಾವಧಿಯಲ್ಲಿ ಮೂರು ನಕಾಶೆಗಳನ್ನು ಪ್ರಕಟಿಸಿ, ಭೂಖಂಡದ ಸ್ವರೂಪವು ಹೇಗೆ ಕಾಲಕಾಲಕ್ಕೆ ಮಾರ್ಪಾಟುಗೊಂಡಿತೆಂಬುದನ್ನು ಚಿತ್ರಿಸಿ ತೋರಿಸಿದ್ದನು. ಇವೆರಡೂ ನಕ್ಷೆಗಳು ಹಿಂದೂಮಹಾ ಸಾಗರದ ಭೂವಲಯಕ್ಕೆ ನೇರವಾಗಿ ಸಂಬಂಧಪಟ್ಟವುಗಳಾಗಿದ್ದರೆ ಮತ್ತೊಂದೆಡೆ ಅಟ್ಲಾಂಟಿಕ್-ಪ್ಯಾಸಿಫಿಕ್ ಭೂವಲಯದ ನಕಾಶೆಯ ರಚನಾಕಾರ್ಯವೂ ಇದೇ ಬಗೆಯಲ್ಲಿ ಮುಂದುವರಿದಿತ್ತು.

ಅವುಗಳ ಹೊರಮೈಯಲ್ಲಿ ಬಡಿಸಿದ ಹಲವ ಕಾಲದ ಉಬ್ಬುಶಿಲ್ಪಗಳನ್ನು ಮತ್ತು ಬೃಹತ್ ಪ್ರಮಾಣದ ಶಿವದೇವಾಲಯದ ಅವಶೇಷಗಳನ್ನು ಈಗ ತೆರೆದಿಟ್ಟಿರುವುವು.[೨೫] ಇವರಂತೆ ಪಾಂಡ್ಯ ರಾಜ್ಯದ ಕೊರ್ಕೈಯ ಪ್ರಸ್ತಾಪವು ಅಹನಾನೂಋ, ಸಜ್ರಿನೈ, ಮಣಿಮೇಕಲೈಗಳಲ್ಲಿ ಬರುವುದಲ್ಲದೆ ಅದನ್ನು ತಿನ್ನವೆಲ್ಲಿ ಜಿಲ್ಲೆ ಶ್ರೀವೈಕುಂಟಮ್ ತಾಲೂಕಿನ ಇದೇ ಹೆಸರಿನ ಗ್ರಾಮವೆಂದು ಗುರುತಿಸಲಾಗಿದೆ. ಈಗಿನ ಕೊರ್ಕೈ ಗ್ರಾಮವು ಸಮುದ್ರದಿಂದ ಸುಮಾರು ಏಳು ಕಿ.ಮೀ. ದೂರದಲ್ಲಿರುವುದರಿಂದ ಮೂಲ ಪಟ್ಟಣವನ್ನು ಸಮುದ್ರವು ವಶಪಡಿಸಿಕೊಂಡ ನಂತರ ಉಳಿದ ಅಥವಾ ಪುನಃ ಕಟ್ಟಿದ ಗ್ರಾಮವಿದೆಂದು ಇಂದು ವಾದಿಸಲಾಗುತ್ತಿದೆ. 'ಕೊರ್ಕೈ' ಎಂಬ ತಮಿಳು ಪದವನ್ನು ಸಂಸ್ಕೃತೀಕರಿಸಿದ ಪರಿಣಾಮವಾಗಿ ಅದು 'ಕಪಾಟಪುರ' ಎಂದು ಕರೆಸಿಕೊಂಡಿತೆಂಬ ಅಭಿಮತವಿದೆ. ಇದು ಎರಡನೆಯ ಸಂಗಂನ ಕೇಂದ್ರಸ್ಥಾನವಾಗಿತ್ತೆಂದು ತಮಿಳು ಐತಿಹ್ಯವು ಪ್ರತಿಪಾದಿಸಿದರೆ, ಇದು ಹೆಸರಾಂತ ಮುತ್ತುಮತ್ಸ್ಯದ ಕೇಂದ್ರವಾಗಿತ್ತೆಂದು ಗ್ರೀಕ್ ಕೃತಿ ಪೆರಿಪ್ಲಸ್ ಸಾಕ್ಷಿ ಕೊಡುವುದು. ಕ್ರಿ.ಶ. ೩೦೬ರಲ್ಲಿ ಸಿಲೋನಿನ ಸುತ್ತ ಒಂದು ಸುನಾಮಿ ಸಂಭವಿಸಿತೆಂಬ ಜೇಮ್ಸ್ ಎಮರ್‌ಸನ್ ಟೆನ್ನೆಂಟ್‌ನ ವಾದವು ಕಡಲುಪಾಲಾದ ಕೊರ್ಕೈಯ ಬಗ್ಗೆ ಸಿದ್ಧಾಂತ ರೂಪಿಸಲು ಕೆಲವು ತಮಿಳರಿಗೆ ಪ್ರಬಲ ಆಧಾರವನ್ನೊದಗಿಸಿ ಕೊಟ್ಟಿತು.[೨೬] ಪ್ಲಿನಿ ಮತ್ತು ಪೆರಿಪ್ಲಸ್ ಕರ್ತೃವಿನ ಅಭಿಮತದಂತೆ ದಕ್ಷಿಣಭಾರತದ ಭೂಭಾಗವು ಕನ್ಯಾಕುಮಾರಿಯಾಗಿರದೆ ಕೊರ್ಕೈಯಾಗಿತ್ತು; ಇಲ್ಲಿಂದ ನೇರ ದಕ್ಷಿಣಕ್ಕೆ ಒಂದು ದಿನ ಪ್ರಯಾಣ ಮಾಡಿದರೆ ತಪ್ರೋಬನೆ (ತಾಮ್ರಪರ್ಣಿ=ಶ್ರೀಲಂಕೆ) ಸಿಗುತ್ತಿತ್ತು. ಕೊರ್ಕೈಯ ಪಶ್ಚಿಮಕ್ಕೆ ಮತ್ತು ಆಫ್ರಿಕಾ ಖಂಡದ ದಿಕ್ಕಿನೆಡೆಗೆ ಹಲವಾರು ಕಿ.ಮೀ. ವಿಸ್ತಾರದ ಭೂಮಿಯೂ ಇತ್ತೆಂದೂ ಅದರಲ್ಲಿ ಮಾಲ್ದೀವ್ಸ್, ಲಕ್ಷದ್ವೀಪ ಮೊದಲಾದವು ಸೇರಿದ್ದವೆಂದೂ ವಾದಿಸಲು ಕೆಲವರು ಈ ಆಧಾರಗಳನ್ನು ತಮ್ಮದೇ ಬಗೆಯಲ್ಲಿ ಬಳಸಿಕೊಂಡರು.[೨೭]

ಕ್ರಿ.ಶ. ಆರಂಭದಿಂದ ಪದಬಂಧದಲ್ಲಿಯೇ ಮುಂದುವರಿದ ಕಡಲುಪಾಲಾದ 'ತಮಿಳಹಂ' ನಕಾಶೆಯು ೨೦ನೆಯ ಶತಮಾನದಲ್ಲಿ ಪಟರೂಪ ಪಡೆದುಕೊಂಡಿತು ಮಾತ್ರವಲ್ಲ ಪಾಶ್ಚಾತ್ಯ ವಿಜ್ಞಾನಿಗಳು ಮೂಡಿಸಿದ್ದ ಲೆಮೂರಿಯಾ-ಗೊಂಡ್ವಾನ ಭೂನಕ್ಷೆಯೊಡನೆ ಪ್ರತಿಸ್ಪರ್ಧಿಸ ತೊಡಗಿತು. ಈ ಪಟನಕಾಶೆಯ ಇತಿಹಾಸವೂ ಇಷ್ಟೇ ಕುತೂಹಲಕರವೂ ಸ್ವಾರಸ್ಯಕರವೂ ಆಗಿದೆ.

ರೇಖಾನಕಾಶೆಯ ಪ್ರಾರಂಭ ಮತ್ತು ಪ್ರಗತಿ :

ಸ್ಥಳೀಯ ತಮಿಳರು ರೇಖಾನಕಾಶೆಯನ್ನು ಸಜ್ಜುಗೊಳಿಸುವುದಕ್ಕಿಂತ ಮುಂಚೆ, ಭಾರತೀಯ ಭೂಸರ್ವೇಕ್ಷಣದ ರಿಚರ್ಡ್ ಡಿ. ಓಲ್ಡ್ಹ್ಯಾಮ್ ಅವರ ರೂಪರೇಷೆಯನ್ನು ಸಿದ್ಧಪಡಿಸಿ ಕೊಟ್ಟಿದ್ದನು. ಈ ಮೊಟ್ಟಮೊದಲ ನಕಾಶೆಯನ್ನು ೧೮೮೦ರ ಜಿಯೋಗ್ರಾಫಿಕಲ್ ಜರ್ನಲ್‌ನಲ್ಲಿ ಪ್ರಕಟಿಸಲಾಗಿತ್ತು.[೨೮] ಆಲ್‌ಫ್ರೆಡ್ ವೆಜೆನರ್ ಎಂಬ ಜರ್ಮನೀಯನು ೧೯೨೨-೨೪ರ ಕಾಲಾವಧಿಯಲ್ಲಿ ಮೂರು ನಕಾಶೆಗಳನ್ನು ಪ್ರಕಟಿಸಿ, ಭೂಖಂಡದ ಸ್ವರೂಪವು ಹೇಗೆ ಕಾಲಕಾಲಕ್ಕೆ ಮಾರ್ಪಾಟುಗೊಂಡಿತೆಂಬುದನ್ನು ಚಿತ್ರಿಸಿ ತೋರಿಸಿದ್ದನು. ಇವೆರಡೂ ನಕ್ಷೆಗಳು ಹಿಂದೂಮಹಾ ಸಾಗರದ ಭೂವಲಯಕ್ಕೆ ನೇರವಾಗಿ ಸಂಬಂಧಪಟ್ಟವುಗಳಾಗಿದ್ದರೆ ಮತ್ತೊಂದೆಡೆ ಅಟ್ಲಾಂಟಿಕ್-ಪ್ಯಾಸಿಫಿಕ್ ಭೂವಲಯದ ನಕಾಶೆಯ ರಚನಾಕಾರ್ಯವೂ ಇದೇ ಬಗೆಯಲ್ಲಿ ಮುಂದುವರಿದಿತ್ತು.

ಇದು ೧೮೯೬ರಲ್ಲಿ ಸ್ಕಾಟ್ ಇಲಿಯಟ್‌ನಿಂದ ಪ್ರಾರಂಭಗೊಂಡು, ೧೯೨೫ರಲ್ಲಿ ಥಿಯೋಸಾಫಿಸ್ಟರ ಕೈಯಲ್ಲಿ ರೂಪಾಂತರ ಹೊಂದುತ್ತಾ, ೧೯೩೦ರ ವರೆಗೂ ಮುಂದುವರಿಯಿತು. ಸುದೀರ್ಘವೂ ಜಟಿಲವೂ ಆದ ಅಟ್ಲಾಂಟಿಕ್-ಪ್ಯಾಸಿಫಿಕ್ ನಕಾಶೆಯ ಇತಿಹಾಸವನ್ನು ಬದಿಗಿಟ್ಟು, ನಮಗೆ ಇಲ್ಲಿ ಹೆಚ್ಚು ಪ್ರಸ್ತುತವಾದ ತಮಿೞಹಂ ನಕಾಶೆವರೆಗೆ ಗಮನ ಕೇಂದ್ರೀಕರಿಸಲು ನಾವು ಇಚ್ಛೆಪಡುವೆ.[೨೯]

ಕಡಲಡಿ ಸೇರಿದ ನಲ್ವತ್ತೊಂಬತ್ತು ನಾಡುಗಳ ಮೊಟ್ಟಮೊದಲ ಪಟನಕಾಶೆಯನ್ನು ಸಿದ್ಧಪಡಿಸಿದ ತಮಿಳರಲ್ಲಿ ಎಸ್. ಸುಬ್ರಮಣಿಶಾಸ್ತ್ರಿಗೆ ಒಂದು ವಿಶಿಷ್ಟ ಸ್ಥಾನವಿದೆ. ಈತನು ೧೯೧೪-೧೬ರ ಕಾಲಾವಧಿಯಲ್ಲಿ 'ತಮಿೞ್‌ನಾಟುಕಟ್' (ತಮಿಳುನಾಡುಗಳು) ಎಂಬ ಲೇಖನವನ್ನು ಪ್ರಕಟಿಸಿ, ಕಡಲಡಿ ಸೇರಿದ ಭೂಮಿಯ ಸಚಿತ್ರ ಸಿದ್ಧಾಂತವನ್ನು ಮೊಟ್ಟಮೊದಲ ಬಾರಿಗೆ ಮಂಡಿಸಿದನು. ಇದರ ಪ್ರಕಾರ ಮುಳುಗಡೆಯಾದ ಭೂಮಿಯ ಪ್ರಮಾಣವು ತಮಿಳು ಭಾವುಕರು ಭಾವಿಸಿದಂತೆ ಸಾವಿರಾರು ಚ.ಮೈ. ಪ್ರದೇಶವಾಗಿರಲಿಲ್ಲ; ಅದು ಅಂದಾಜು ಒಂದು ತಾಲೂಕು ವಿಸ್ತಾರದ ಭೂಮಿಯನ್ನು ಹೋಲುವಷ್ಟಾಗಿತ್ತು. ಶಾಸ್ತ್ರಿ ರಚಿಸಿದ ನಕಾಶೆಯ ವಿನ್ಯಾಸವು ಇಂದಿನ ಪೆನಿನ್ಸುಲರ್ ಭೂಪಟವನ್ನು ಮಾದರಿಯನ್ನಾಗಿಸಿಕೊಂಡಿತ್ತು. ಆದರೆ ಅದರಲ್ಲಿ ಅದಿಯರ್‌ಕ್ಕುನಲ್ಲಾರ್ ಸೂಚಿಸಿದ್ದ, ಕನ್ಯಾಕುಮಾರಿಯ ದಕ್ಷಿಣಕ್ಕಿತ್ತೆನ್ನಲಾದ ಭೂಮಿಗೆ– ಅದರಲ್ಲೂ ಕುಮಾರಿ ಮತ್ತು ಪಹ್‌ಱುಳಿ ನದಿ ಪ್ರದೇಶಕ್ಕೆ– ಸ್ಪಷ್ಟತರವಲ್ಲಿ ಅನುವು ಮಾಡಿಕೊಡಲಾಗಿತ್ತು.

ಸುಬ್ರಮಣಿಶಾಸ್ತ್ರಿಯಿಂದ ಪ್ರಾರಂಭಗೊಂಡ ತಮಿೞಹಂ ನಕಾಶೆಯ ನಿರ್ಮಾಣ ಕೃತಿಯು ೨೦ನೆಯ ಶತಮಾನದುದ್ದಕ್ಕೂ ಮುಂದುವರಿಯಿತು. ಹೀಗೆ ಸಿದ್ಧಪಡಿಸಿದ ನಕಾಶೆಗಳಿಗೆ ಕೊಟ್ಟ ಶೀರ್ಷಿಕೆಗಳಿಂದಲೇ ಅವುಗಳ ನಿರ್ಮಾತೃಗಳ ಪ್ರಧಾನ ಗೊತ್ತುಗುರಿಯನ್ನು ಊಹಿಸಲು ಸಾಧ್ಯವಾಗುವುದರಿಂದ, ಅವುಗಳಲ್ಲಿ ಕೆಲವನ್ನಿಲ್ಲಿ ನಿದರ್ಶಿಸುವುದು ಉಚಿತವೆನಿಸುವುದು. 'ಪುರಾಣಿಕ್ ಇಂಡಿಯ ಬಿಫೋರ್ ದಿ ಡೆಲ್ಯೂಜ್' (ಪ್ರಳಯಪೂರ್ವದ ಪೌರಾಣಿಕ ಭಾರತ), 'ಪುರಾಣಿಕ್ ಇಂಡಿಯ ಆಫ್ಟರ್ ದಿ ಡೆಲ್ಯೂಜ್' (ಪ್ರಳಯೋತ್ತರ ಕಾಲದ ಪೌರಾಣಿಕ ಭಾರತ). 'ಪಳೈಯ ತಮಿೞಹಂ' (ಪುರಾತನ ತಮಿಳರ ತವರುಮನೆ), 'ಬಿ.ಸಿ. ೩೦,೦೦೦ ಇಂಡಿಯಾ ತಮಿೞ್‌ನಾಡು' (ಕ್ರಿ.ಪೂ. ೩೦,೦೦೦ದ ಭಾರತ: ತಮಿಳುನಾಡು), 'ಕಟಲ್ಕೊಂಟ ಕುಮಾರಿಕ್ಕಂಟಂ' (ಕಡಲು ಕೊಂಡೊಯ್ದ ಕುಮಾರಿ ಭೂಖಂಡ), 'ಕಟಲ್‌ಕೊಂಟ ಕುಮಾರಿನಾಟು' (ಕಡಲು ಕೊಂಡೊಯ್ದ ಕುಮಾರಿನಾಡು), 'ವ್ಯಾನಿಷ್ಡ್ ಲುಮೂರಿಯಾ ಕಾಂಟಿನೆಂಟ್' (ಅದೃಶ್ಯವಾದ ಲೆಮೂರಿಯಾ ಭೂಖಂಡ), 'ದಿ ಲುಮೂರಿಯಾ ಕಾಂಟಿನೆಂಟ್ ವಿಚ್ ವಾಜ್ ಡೆಸ್ಟ್ರಾಯ್ಡ್ ಬೈ ದಿ ಸೀ' (ಕಡಲು ನಾಶಗೊಳಿಸಿದ ಲೆಮೂರಿಯಾ ಭೂಖಂಡ), 'ಲೂಮೂರಿಯಾ ಆರ್ ದಿ ಲಾಸ್ಟ್ ಕುಮಾರಿ ಕಾಂಟಿನೆಂಟ್ ಆರ್ ನವಲಂ ಐಲ್ಯಾಂಡ್' (ಲೆಮೂರಿಯಾ ಅಥವಾ ಕಣ್ಮರೆಯಾದ ಕುಮಾರಿ ಭೂಖಂಡ ಅಥವಾ ಜಂಬೂದ್ವೀಪ), 'ಕುಮಾರಿಕಂಟಂ ಅಲ್ಲತು ಕಟಲ್ಕೊಂಟ ತೆನ್ನಾಟು' (ಕುಮಾರಿ ಭೂಖಂಡ ಅಥವಾ ಕಡಲುಕೊಂಡ ದಕ್ಷಿಣ ನಾಡು) ಎಂಬವು ಇವುಗಳಲ್ಲಿ ಪ್ರಧಾನವಾದವುಗಳು.[೩೦]

ಸಾಗರದಾಳದ ಅನ್ವೇಷಣೆ ಮತ್ತು ಕುಮಾರಿಕ್ಕಂಟಂ ಅವಶೇಷಗಳು (?) :

'ಇಲೆಮೂರಿಯಾ' ಎಂಬುದು ಒಂದು ಭ್ರಮಾಲೋಕವಲ್ಲ, ತಮಿಳರು ಶಾಶ್ವತವಾಗಿ ಕಳೆದುಕೊಂಡ ಭೂಪ್ರದೇಶವೆಂಬುದನ್ನು ಸಾಧಿಸಿ ತೋರಿಸುವುದೇ ನಕಾಶೆ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಂಡ ತಮಿಳರ ಪರಮೋದ್ದೇಶವಾಗಿತ್ತೆಂಬುದನ್ನು ಇಲ್ಲಿ ಮತ್ತೊಮ್ಮೆ ನೆನೆಯಬಹುದು. 'ಲೆಮೂರಿಯಾ' ಪದವನ್ನು ಆಗೊಮ್ಮೆ-ಈಗೊಮ್ಮೆ ಬಳಸಲು ಹಿಂಜರಿಯದಿದ್ದರೂ 'ಕಟಲ್ಕೊಂಟ' ಭೂಮಿಯನ್ನು ತಮಗೆ ಹೆಚ್ಚು ಪ್ರಸ್ತುತಗೊಳಿಸಿಕೊಳ್ಳಲು ದೇಸಿ ಪದಗಳಾದ 'ಕುಮಾರಿನಾಟು', 'ಕುಮಾರಿಕ್ಕಂಟಂ', 'ತಮಿಳ್‌ನಾಟು', 'ತಮಿಟಹಂ' ಎಂಬ ಪದಗಳನ್ನು ಬಳಸಲು ಅವರು ಹೆಚ್ಚು ಇಚ್ಛೆಪಟ್ಟರು. ಮುಳುಗಡೆಯಾಗುವ ಕಾಲದಲ್ಲಿ ಆ ಭೂಪ್ರದೇಶವು ಪಾಂಡ್ಯರಾಜ್ಯದ ವಿಭಾಗವಾಗಿದ್ದುದನ್ನು ಗಮನಿಸಿದ ಕೆಲವರು ಅದನ್ನು 'ಕಟಲ್ಕೊಂಟ ಪಾಂಡ್ಯರಾಜ್ಯ'ವೆಂಬ ಹೆಸರಿನಿಂದ ಗುರುತಿಸಿದರು. ಕಡಲು ಕೊಂಡೊಯ್ದ ಭೂವಲಯದ ಬಗ್ಗೆ ಅಡಚಣೆಯಿದ್ದುದರಿಂದ, ವಿಜ್ಞಾನಿಗಳು 'ಲೆಮೂರಿಯಾ' ಭೂಖಂಡದಲ್ಲಿ ಕಂಡ ವಿಶೇಷತೆಗಳನ್ನೆಲ್ಲ ಅಳವಡಿಸಿಕೊಳ್ಳಲು ಕೆಲವು ತಮಿಳರು ಹಿಂಜರಿಯಲಿಲ್ಲ. ಇದರಿಂದಾಗಿ 'ಇಲೆಮೂರಿಯಾ ನಿಲ್ಯೆ' (ಲೆಮೂರಿಯಾ: ಒಂದು ಪುರಾತನ ನೆಲೆ), 'ಇಲೆಮೂರಿಯಾ: ಕುಜ್ಜುಂಯ ನಿಲ್ಯೆ' (ಲೆಮೂರಿಯಾ: ಸಂಕುಚಿತಗೊಂಡ ನೆಲೆ) ಎಂಬ ಹೆಸರುಗಳೂ ಹುಟ್ಟಿಕೊಂಡವು.

೧೯ ನೆಯ ಶತಮಾನದ ಉತ್ತರಾರ್ಧದಲ್ಲಿ ಸಮುದ್ರವಾಳದಲ್ಲಿ ತಂತಿಸಂಪರ್ಕವನ್ನೇರ್ಪಡಿಸಲು (ಸಬ್‌ಮರೈನ್ ಟೆಲಿಗ್ರಾಫಿಕ್ ಕೇಬಲ್ಸ್) ಮಾಡಿದ ಸಾಗರದಾಳದ ಅನ್ವೇಷಣೆಯು ೨೦ ನೆಯ ಶತಮಾನದಲ್ಲಿ ಹೆಚ್ಚು ತೀವ್ರತೆಯನ್ನು ಪಡೆದುಕೊಂಡಿತಲ್ಲದೇ ಸಾಗರ ಗರ್ಭದಲ್ಲಿ ಹುದುಗಿದ್ದ ಅನೇಕ ಅದ್ಭುತಗಳನ್ನು ಹೊರಗೆಡವಿತು. ಹೀಗೆ ಪಡೆದುಕೊಂಡ ಸಾಗರದಾಳದ ವಿವರಗಳಲ್ಲಿ ತಮ್ಮ ಸಿದ್ಧಾಂತಕ್ಕೆ ಒಗ್ಗುವ ಕೆಲವನ್ನು ತಮಿಳರು ಬಳಸಿಕೊಳ್ಳತೊಡಗಿದರು. ೧೯೩೩-೩೪ರ ಆಂಗ್ಲೋ-ಈಜಿಪ್ಷಿಯನ್ 'ಜಾನ್ ಮರ್ರೀ' ಅನ್ವೇಷಣೆಯಲ್ಲಿ ಶೋಧಿಸಿದ ೧೦,೦೦೦ ಅಡಿ ಎತ್ತರದ ಒಂದು ಪರ್ವತ ಪಂಕ್ತಿ(ರಿಜ್)ಯು ಅರಾವಳೀ ಪರ್ವತದ ಬಡಾವಣೆಯೆಂದೂ ಅಲ್ಲಿ ಕಾಣಲಾದ ಆಳವಾದ ಕಣಿವೆಯೊಂದನ್ನು ಸಿಂಧೂಕೊಳ್ಳದ ಬಡಾವಣೆಯೆಂದೂ ಪ್ರೊಫೆಸರ್ ಜೆ. ಎಸ್. ಗಾರ್ಡನರ್ ಲಂಡನ್ನಿನ ಡೇಲಿ ಮೇಲ್‌ಗೆ ಹೇಳಿಕೆ ಕೊಟ್ಟಿದ್ದನ್ನು ೨೯ ಮೇ ೧೯೫೪ ರ ಮುಂಬಯಿಯ ಇಲ್ಲಸ್ಟ್ರೇಟೆಡ್ ವೀಕ್ಲಿ ಮರುಪ್ರಕಟಿಸಿದಾಗ ಅದೊಂದು ಭಾರತದಾದ್ಯಂತ ಕುತೂಹಲ ಕೆರಳಿಸಿದ ವಾರ್ತೆಯಾಯಿತು.[೩೧] ಇದರಂತೆ ೧೯೬೭ರ ನ್ಯಾಷನಲ್ ಜಿಯೋಗ್ರಫಿ ಪತ್ರಿಕೆಯಲ್ಲಿ ಪ್ರಕಟಗೊಂಡ ಹಿಂದೂಮಹಾಸಾಗರದ ಪರ್ವತಪಂಕ್ತಿಗಳ, ಚಿಕ್ಕ-ಪುಟ್ಟ ದಿನ್ನೆಗಳಿಂದ ವಿಭಜಿಸಲ್ಪಟ್ಟ ನದೀಕಣಿವೆಗಳ, ಅಲ್ಲಲ್ಲಿ ವಿಸ್ತರಿಸಿಕೊಂಡಿದ್ದ ಸಮತಟ್ಟಾದ ಭೂಪ್ರದೇಶಗಳ, ಕರಗಸದಂಚಿನ ಗಿರಿಸಾಲುಗಳ ಮತ್ತು ಬೆರಗುಗೊಳಿಸುವ ಪ್ರಪಾತಗಳ ವಿವರಗಳು, ವಿಜ್ಞಾನಿಗಳಿಗೆ ಒಂದು ಬಗೆಯ ಆಧಾರಗಳನ್ನು ಒದಗಿಸಿದರೆ ತಮಿಳು ಭಾಷಾಭಕ್ತರಿಗೆ ಮತ್ತೊಂದು ಬಗೆಯ ಆಧಾರಗಳನ್ನು ಒದಗಿಸಿದವು. ಇವೆಲ್ಲವೂ ಭೂಹೊರಪದರಿನ ಹೊಯ್ದಾಟ (ಪ್ಲೇಟ್ ಮೂವ್‌ಮೆಂಟ್) ಮತ್ತು ಭೂಖಂಡಗಳ ಕವಲಾಟ(ಕಾಂಟಿನೆಂಟಲ್ ಡ್ರಿಫ್ಟ್)ಗಳನ್ನು ಸೂಚಿಸುವುವೆಂದು ಪ್ರತಿಪಾದಿಸಿ, ಭೂಖಂಡಗಳು ಕಡಲಡಿ ಸೇರುವ ಸಾಧ್ಯತೆಯೇ ಇಲ್ಲವೆಂಬ ವಾದವನ್ನು ವಿಜ್ಞಾನಿಗಳು ಮುಂದಿಟ್ಟರೆ, ಕಡಲಡಿ

ಕಂಡುಬರುವ ಈ ಕುರುಹುಗಳೆಲ್ಲವೂ ಮುಳುಗಡೆಯಾದ ತಮ್ಮ ಪುರಾತನ ಭೂಮಿಯ ಅವಶೇಷಗಳೆಂದು ವಾದಿಸಲು ತಮಿಳು ಭಾಷಾ ಆರಾಧಕರಿಗೆ ಅಸ್ತ್ರಗಳಾದವು. ಇದಕ್ಕೆ 'ಕುಮಾರಿಕ್ಕಂಟತ್ತುಟರ್' ಅಥವ ಕುಮಾರಿಖಂಡದ ಪರ್ವತಾವಳಿ ಎಂಬ ಹೆಸರನ್ನು ಕೊಟ್ಟು ಈ ಪರ್ವತಪಂಕ್ತಿಗಳು ಅಂದಿನ 'ತಮಿಟಹಂ'ವನ್ನು ಸುತ್ತುವರಿದಿದ್ದವೆಂದು (ವಿಶೇಷವಾಗಿ ಕನ್ಯಾಕುಮಾರಿಯ ದಕ್ಷಿಣಕ್ಕೆ ಹರಡಿದ್ದ) ಅವರು ಸಮರ್ಥಿಸಿಕೊಂಡರು. ತಮಿಳರು ಸಿದ್ಧಗೊಳಿಸಿದ ಈ ಕಾಲದ 'ಕುಮಾರಿಕ್ಕಂಟುಂ' ನಕಾಶೆಯಲ್ಲಿ, 'ಕುಮಾರಿ'. 'ಪಹ್‌ಜೂಳಿ', 'ಕಣ್ಣಿ', 'ಪೇರಾಳಿ' ನದಿಗಳೂ 'ತೆಣ್‌ಕಟಲ್'(ದಕ್ಷಿಣ ಸಾಗರ) 'ತೊಣ್ಣುಮುತಿಲ್‌ಕಟಲ್' (ಆದಿಸಾಗರ), 'ತೋಟ್ಟುಕಟಲ್'(ಅಕ್ಕಪಕ್ಕದ ಸಾಗರಗಳು) ಮಹತ್ವದ ಸ್ಥಾನ ಪಡೆದುಕೊಂಡವು.[೩೨]

ಕಟಲ್ಕೋಳ್ ಐತಿಹ್ಯ ಮತ್ತು ಕ್ಷೇತ್ರ ಚರಿತ್ರೆಗಳು :

ಪುರಾತನ ಕಾಲದ 'ತಮಿಟಿಹಂ'ನ ಒಂದು ಭಾಗ ಕಡಲಡಿ ಸೇರಿತೋ ಇಲ್ಲವೋ ಅದರ ಐತಿಹ್ಯ ಮಾತ್ರ ತಮಿಳರ ಅಂತರಾಳಕ್ಕಿಳಿದು ಅಲ್ಲಿ ಭದ್ರವಾಗಿ ಮನೆಮಾಡಿಕೊಂಡಿತೆನ್ನುವುದರಲ್ಲಿ ಎಳ್ಳಷ್ಟೂ ಅನುಮಾನವಿಲ್ಲ. ತಮಿಳುನಾಡಿನ ಅನೇಕ ಕ್ಷೇತ್ರಪುರಾಣಗಳು (ಕ್ಷೇತ್ತಿರ ಪುರಾಣಂ) ಇದನ್ನು ಸಮರ್ಥಿಸುವುವಲ್ಲದೇ ಇವು ಸಂಸ್ಕೃತಪುರಾಣಕಾರರ ಮೇಲೆ ಒಂದಿಲ್ಲೊಂದು ಬಗೆಯಲ್ಲಿ ಪ್ರಭಾವವನ್ನು ಬೀರಿದಂತೆಯೂ ಕಂಡುಬಂದಿರುವುದು. ಭಾಗವತಪುರಾಣದಲ್ಲಿ ಮನುವಿನ ಪಾತ್ರವನ್ನು 'ದ್ರಾವಿಡಾಧಿಪತಿ'ಯಾದ ಸತ್ಯವ್ರತನು ಪಡೆದುಕೊಂಡದ್ದನ್ನೂ ಮತ್ಸ್ಯಪುರಾಣದಲ್ಲಿ ತಪಸ್ಸನ್ನಾಚರಿಸಲು ಮಲಯ ಪರ್ವತವನ್ನು ಮನು ಆಯ್ಕೆ ಮಾಡಿ ಕೊಂಡದ್ದನ್ನು ಇಲ್ಲಿ ನಿದರ್ಶಿಸಬಹುದು.[೩೩]

ಪ್ರವಾಹ (ಸಂ), ಕಟಲ್ಕೋಳ್ (ತ), ಊಜಿ (ತ) ಮುಂತಾದವನ್ನು ಉಲ್ಲೇಖಿಸುವ ಆಕರಗಳನ್ನು ಸ್ಥೂಲವಾಗಿ ಎರಡು ಗುಂಪುಗಳಡಿ ತರಬಹುದೆಂದು ತೋರುವುದು : ಒಂದು, ಕನ್ಯಾಕುಮಾರಿಯಾಚೆಯ ಭೂಮಿಯು ಕಡಲುಪಾಲಾದುದನ್ನು ಪ್ರತ್ಯಕ್ಷ ಇಲ್ಲವೇ ಪರೋಕ್ಷವಾಗಿ ಸಮರ್ಥಿಸುವ ಶಂಗಂ ಮತ್ತು ಶಂಗಮೋತ್ತರ ತಮಿಳುಸಾಹಿತ್ಯ; ಮತ್ತೊಂದು, ಮೌಖಿಕವಾಗಿ ಪ್ರಸಾರಗೊಳ್ಳುತ್ತಾ ಒಂದು ಕಾಲಘಟಕದಲ್ಲಿ ಲಿಖಿತ ಸ್ವರೂಪ ಪಡೆದುಕೊಂಡ ಸ್ಥಳಮಹಾತ್ಮೆ ಗಳು. ಮೊದಲನೆಯ ವರ್ಗದಲ್ಲಿ ಗಮನಾರ್ಹವಾದವುಗಳು ಕಲಿತ್ತೊಕೈ, ಶಿಲಪ್ಪದಿಕಾರಂ ಮತ್ತು ಮಣಿಮೇಕಲೈ; ಎರಡನೆಯದಕ್ಕೆ ಉತ್ತಮ ಮಾದರಿಗಳು, ಶೀಕಾಳಿ, ಕಾಂಚೀಪುರಂ, ಕನ್ಯಾಕುಮಾರಿ, ಮಹಾಬಲಿಪುರಂ, ತಿರುವರ್ರಿಯೂರ್, ಕುಂಭಕೋಣಂ, ಕಾವೇರಿಪಟ್ಟಿಣಂ (ಪುಹಾರ್), ಮದುರೈಯ ಸ್ಥಳಪುರಾಣಗಳು.

ತನ್ನ ರಾಜ್ಯಾಂಗವನ್ನು ಕಡಲು ಕಬಳಿಸಿದಾಗ ಚೋಳ ಮತ್ತು ಚೇರರ ಭೂಮಿಯನ್ನು ವಶಪಡಿಸಿಕೊಂಡು ತನಗಾದ ಹಾನಿಯನ್ನು ಪಾಂಡ್ಯರಾಜನು ತುಂಬಿಕೊಂಡನೆಂದು ಕಲಿತ್ತೊಕೈ ತಿಳಿಸುವುದು. ತನ್ನ ಶಕ್ತಿ ಪ್ರದರ್ಶಿಸಲು ಸಮುದ್ರದೆಡೆಗೆ 'ಯಾಲ್' ಎಸೆದು ಕೆಣಕಿದ ಕಾರಣ ಸಿಟ್ಟಿಗೆದ್ದ ಸಾಗರದೊಡೆಯನು 'ಕುಮಾರಿಕ್ಕೋಟ'ನ್ನು ಕುಡಿದುಬಿಟ್ಟಾಗ ತನಗಾದ ಹಾನಿಯನ್ನು ತುಂಬಿಕೊಳ್ಳಲು ಪಾಂಡ್ಯ ತೆಣ್ಣವನ್ ಗಂಗಾ ಮತ್ತು ಹಿಮಾಲಯ ಪ್ರದೇಶಗಳನ್ನು ವಶಪಡಿಸಿಕೊಂಡನೆಂದು ಶಿಲಪ್ಪದಿಕಾರಂ ತಿಳಿಸುವುದು.[೩೪] ಈ ಮಹಾಕಾವ್ಯದಲ್ಲಿ ಬರುವ ಕಾವೇರಿಯ ಆರ್ಭಟಕ್ಕೆ ಸಂಬಂಧಿಸಿದ ಮತ್ತೊಂದು ಪ್ರಸಂಗವನ್ನೂ ಇಲ್ಲಿ ಗಮನಿಸಬಹುದು.[೩೫]

ತನ್ನ ಪತಿಯ ಪ್ರತಿಮೆಯನ್ನು ಮರಳಿನಿಂದ ಮಾಡಿ ಅದನ್ನು ಪೂಜಿಸುತ್ತಿರುವಾಗ ಉಕ್ಕೇರಿ ಬಂದ ಕಾವೇರಿಯಿಂದ ರಕ್ಷಿಸಲು ಸತಿಯೊಬ್ಬಳು ಗಾಢವಾಗಿ ಅಪ್ಪಿಕೊಂಡು ಅದನ್ನು ರಕ್ಷಿಸುವಲ್ಲಿ ಸಫಲಳಾಗುವುದೇ ಆ ಪ್ರಸಂಗ. ಇದು ಆನುಷಂಗಿಕವಾಗಿ ಬರುವ ಘಟನೆಯಾಗಿರದೇ ತಮಿಳು ಗರತಿಯರ ಅಂತರಾಳಕ್ಕಿಳಿದ ಒಂದು ಆಚರಣೆಯಾಗಿ ಇಂದಿಗೂ ಉಳಿದುಕೊಂಡಿರುವುದು ಕುತೂಹಲಕಾರಕ. ವರ್ಷದ ಒಂದು ಶುಭ ದಿನದಂದು ಕುಲಸ್ಥ ಗರತಿಯರು ಕಾವೇರಿ ದಡದಲ್ಲಿ ಸೇರಿ, ಮರಳಿನ (ಪತಿಯ ಅಥವಾ ಸಮುದ್ರರಾಜನ) ಪ್ರತಿಮೆಯನ್ನು ಮಾಡಿ ಆರಾಧಿಸಿ, ಉಟ್ಟ ಬಟ್ಟೆಯನ್ನು ಕಳಚಿ (ಆ ಮೂಲಕ ಪತಿಯೊಡನೆ ಸಾಂಕೇತಿಕವಾಗಿ ಐಕ್ಯಗೊಂಡು) ಹೊಸ ಬಟ್ಟೆ ಧರಿಸುವುದು ಇಂದಿಗೂ ರೂಢಿಯಲ್ಲಿದೆ.[೩೬] ಪ್ರೇಯಸಿಯಿಂದ ಅಗಲಿ ವಿರಹತಾಪದಲ್ಲಿದ್ದ ನೆಟುಮುಟಕ್ಕಿಳಿಯು ಪುಹಾರ್ ತೀರದಲ್ಲಿ ಆಚರಿಸಬೇಕಾಗಿದ್ದ ಇಂದ್ರಪೂಜೆಯನ್ನು ಮರೆತಾಗ, ಕೋಪಗೊಂಡ ಮಣಿಮೇಕಲೈದೇವಿಯು ಉಗ್ರಗೊಂಡು ಪುಹಾರ್ ನಗರವನ್ನು ಜಲಾಂತರ್ಗತಗೊಳಿಸುವ ಮಣಿಮೇಕಲೈ ಪ್ರಸಂಗವನ್ನು ಇದು ನೆನಪಿಗೆ ತಂದುಕೊಡುವುದು.[೩೭]

ಈ ಎಲ್ಲ ಸ್ಥಳಮಹಾತ್ಮೆಗಳಲ್ಲಿ ಕಾಣುವ ಒಂದೆರಡು ಸಾಮಾನ್ಯ ಅಂಶಗಳೆಂದರೆ– ಪ್ರವಾಹಕ್ಕೆ ಕಾರಣವಾಗಿ ಬರುವ ಸಾಮಾನ್ಯ ಖಳನಾಯಕ ದೈವ ವರುಣ, ಇಲ್ಲವೇ ಇಂದ್ರ; ಪ್ರವಾಹ ಸಂದರ್ಭಗಳಲ್ಲೆಲ್ಲಾ ಲೋಕರಕ್ಷಣೆಗಾಗಿ ಬರುವ ದೈವ ಶಿವ, ಇಲ್ಲವೇ ಶಕ್ತಿ. ಈ ನಿಯಮಕ್ಕೆ ಅಪವಾದವೆನ್ನುವಂತೆ ಶಿವನು ಪ್ರಳಯಕಾರಕನೂ ಪ್ರಜಾರಕ್ಷಕನೂ ಆಗಿ ಇಬ್ಬಗೆಯ ಪಾತ್ರಗಳನ್ನಾಡುವ ಪ್ರಸಂಗಗಳೂ ಉಂಟು.

ಮಹಾಬಲಿಪುರದ ಅದ್ಭುತ ಸೊಬಗನ್ನು ಕಂಡು ಮತ್ಸರಗೊಂಡ ಇಂದ್ರನು ಅದನ್ನು ನಾಶ ಮಾಡದಿದ್ದರೆ ಇಂದ್ರಲೋಕದ ಅಂತಸ್ತಿಗೆ ಧಕ್ಕೆ ಬರುವುದೆಂದು ಭಾವಿಸಿ, ಸಮುದ್ರರಾಜನನ್ನು ಅಲ್ಲಿಗೆ ಅಟ್ಟಿ ಅದನ್ನು ಕಡಲುಪಾಲು ಮಾಡಲು ಆದೇಶವಿತ್ತನೆಂದು ಒಂದು ಐತಿಹ್ಯ ತಿಳಿಸುವುದು. ಇದರಂತೆ, ಪಾಂಡ್ಯ ರಾಜನು ತೊಂಬತ್ತಾರು ಅಶ್ವಮೇಧ ಯಜ್ಞಗಳನ್ನು ಪೂರೈಸಿ ತನ್ನ ಪ್ರತಾಪವನ್ನು ಮೆರೆದಾಗ, ಮತ್ಸರಗೊಂಡ ಇಂದ್ರನು ಅವನ ರಾಜಧಾನಿ ಪಟ್ಟಣವಾದ (ದಕ್ಷಿಣ) ಮದುರೈಯನ್ನು ಜಲಾವೃತಗೊಳಿಸಲು ಸಮುದ್ರರಾಜನಿಗೆ ಆದೇಶವನ್ನೀಯುವನೆಂದು ಮತ್ತೊಂದು ಐತಿಹ್ಯ ತಿಳಿಸುವುದು.[೩೮] ಶಿವನೊಡನೆ ನೇರವಾಗಿ ಘರ್ಷಣೆಗಿಳಿದ ವರುಣನು ಕೊನೆಗೆ ಅವನಿಗೆ ಶರಣಾಗುವ ಕೆಲವು ಐತಿಹ್ಯಗಳೂ ಉಂಟು. ಇವುಗಳಲ್ಲಿ ಒಂದು ಮದುರೈ ಸ್ಥಳ ಮಾಹಾತ್ಮ್ಯಗಳಲ್ಲಿ ಸೇರಿಕೊಂಡಿದ್ದು, ಅದರ ವಿವರ ಇಂತಿದೆ : ಶಿವನ ಸಾಮರ್ಥ್ಯವನ್ನು ಪರೀಕ್ಷಿಸಲೆಂದು ಅವನ ನೆಲೆಯಾದ ಮದುರೈಯನ್ನು ಮುತ್ತಲು ವರುಣನು ಸಮುದ್ರರಾಜನಿಗೆ ಆದೇಶವನ್ನೀಯುವನು; ಇದರಂತೆ ಕಾರ್ಮೋಡಗಳು ಅದನ್ನು ಸುತ್ತುವರಿದಾಗ, ಭಯಭೀತರಾದ ದೇವತೆಗಳೆಲ್ಲರೂ ಮದುರೆಯ ಅಧಿಪತಿಯಾದ ಅಲವಾಯ್(ಶಿವ)ನಲ್ಲಿ ಮೊರೆಹೋಗುವರು; ಆಗ ಶಿವನು ನಾಲ್ಕು ಘನ ಮೇಘಗಳನ್ನಟ್ಟಿ, ಏರಿಬರುತ್ತಿರುವ ಕಾರ್ಮೋಡಗಳನ್ನು ಕುಡಿದುಬಿಡಲು ಆದೇಶವೀಯುವನು; ಇದರಿಂದ ಮತ್ತಷ್ಟು ಕೋಪಗೊಂಡ ವರುಣನು ಮಹಾಮೇಘಗಳಿಗೆ ಮತ್ತೊಂದು ಆದೇಶವನ್ನಿತ್ತು ಹುಚ್ಚು ಮಳೆಗರೆಯಲು ಹಚ್ಚುವನು.

ಆಗ ಶಿವನು ತನ್ನ ಘನ ಮೇಘಗಳನ್ನು ನಾಲ್ಕು ಗೋಪುರಗಳನ್ನಾಗಿ ಪರಿವರ್ತಿಸಿ, ಮದುರೆಯ ನಾಲ್ಕು ದಿಕ್ಕಿನಲ್ಲಿ ನಿಲ್ಲಿಸಿ, ನಗರವನ್ನು ರಕ್ಷಿಸುವನು; ಈ ನಾಲ್ಕು ಮೇಘಗಳು ಮಾಟಮ್ (ಮಂದಿರ)ಗಳಾದುದರಿಂದ ಮದುರೆಗೆ 'ನಾನ್ ಮಾಟಕೂಟಲ್' (ನಾಲ್ಕು ಮಂದಿರಗಳ ಸಂಗಮಸ್ಥಾನ) ಎಂಬ ಹೆಸರು ಬರುವುದು. ಕವಿಗಳಾದ ಪೆರುಂಪಜ್ರಪ್ಪುಲಿಯೂರ್ನಂಬಿ ಮತ್ತು ಪರಂಜ್ಯೋಟಿಮುಣಿವರಂ ಈ ಪ್ರಸಂಗವನ್ನು ಸಮಗ್ರವಾಗಿ ಬಣ್ಣಿಸಿರುವರು.[೩೯]

ಶಿವನೇ ಮೊದಲು ಪ್ರಳಯಕಾರಕನಾಗಿ ಕಾಣಿಸಿಕೊಂಡು ನಂತರ ಪ್ರಜಾರಕ್ಷಕನಾಗುವುದನ್ನು ಕಾಂಜ್ಚೀಪುರಾಣಂದಲ್ಲಿ ಕಾಣುವೆವು. ವಿಶ್ವದ ಸಕಲ ಜಲರಾಶಿಯನ್ನು ಕಂಪೆ ನದಿಯಲ್ಲಿ ಸಂಗಮಗೊಳಿಸಿದಾಗ ಅದ್ಭುತ ಜಲಪ್ರವಾಹ ಉಂಟಾಗಿ ಕಾಂಚೀಪಟ್ಟಣವು ಕೊಚ್ಚಿ ಹೋಗತೊಡಗುವುದು. ಆಗ ತಾನು ಆರಾಧಿಸುತ್ತಿದ್ದ ಕಾಂಚೀಲಿಂಗವನ್ನು ತನ್ನ ಬಾಹುಗಳಲ್ಲಿ ಬಂಧಿಸಿ, ತನ್ನನ್ನೇ ಪ್ರವಾಹಕ್ಕೆ ಒಡ್ಡಿಕೊಂಡು ಅದನ್ನು ರಕ್ಷಿಸುತ್ತಿದ್ದ ಉಮೆಯನ್ನು ಮೆಚ್ಚುತ್ತಾ ಆ ಜಲರಾಶಿಯ ಆರ್ಭಟವನ್ನು ಶಿವನು ಶಮನಗೊಳಿಸಿದನೆಂದು ಕವಿ ಶಕ್ಕಿಲ್ಲಾರ್ ಪೆರಿಯಪುರಾಣಂದಲ್ಲಿ ವರ್ಣಿಸಿರುವನು.[೪೦] ಶಿವ ಮತ್ತು ಉಮಾ ಒಡಗೂಡಿ ಪ್ರಳಯಕ್ಕೊಳಗಾದ ಜೀವರಾಶಿಯನ್ನು ಪಾರುಮಾಡುವುದನ್ನು ಶೀಕಾಳಿಪುರಾಣದಲ್ಲಿ ಉಲ್ಲೇಖಿಸಲಾಗಿದೆ. ಜೀವರಾಶಿಯೆಲ್ಲ ಅಪಾಯಕ್ಕೀಡಾದ ಈ ಸಂದರ್ಭದಲ್ಲಿ ತನ್ನ ಎಲ್ಲ ಅಲಂಕಾರ(ನಾಗ, ಅರ್ಧಚಂದ್ರ, ಕೊನ್ರೈ ಪೂಮಾಲೆ, ವ್ಯಾಘ್ರಚರ್ಮ ಮುಂ.)ಗಳನ್ನು ತ್ಯಜಿಸಿ, ಅರವತ್ತುನಾಲ್ಕು ಕಲೆಗಳನ್ನು ಮಾತ್ರ ತೊಟ್ಟು, ವೇದಗಳನ್ನು ಘೋಷಿಸುತ್ತಾ ಪ್ರಣವ'ತೋಣಿ'(ದೋಣಿ)ಯನ್ನು ನಿರ್ಮಿಸಿ ಉಮೆಯೊಡನೆ ಅದನ್ನೇರಿ, ಭೋರ್ಗರೆವ ಸಾಗರ ದಾಟಿ, ಶೀಕಾಳಿಯನ್ನು ಶಿವನು ಸೇರುವನು. ಆಗ ತನ್ನ ಮೂರನೆಯ ಕಣ್ಣನ್ನು ತೆರೆದು, ಜಲರಾಶಿಯನ್ನು ಸುಟ್ಟು ಅದನ್ನೆಲ್ಲ ಒಣಗಿಸಿ, ಜೀವರಾಶಿಯನ್ನೆಲ್ಲಾ ರಕ್ಷಿಸಿದುದರಿಂದ ಶೀಕಾಳಿಗೆ ತೋಣಿಪುರ(ದೋಣಿಪುರ)ವೆಂಬ ಮತ್ತೊಂದು ಹೆಸರು ಬಂತೆಂದು ಶೀಕಾಟಿತ್ತಳ ಪುರಾಣಂ ತಿಳಿಸುವುದು.[೪೧] ಮದುರೆಯ ಮತ್ತೊಂದು ಐತಿಹ್ಯವು ತಮಿಳ್‌ಚೊಕ್ಕನ್ (ಶಿವ) ಪಾಂಡ್ಯರಸನಾದ ಉಕ್ಕೀರನ್‌ನನ್ನು ಕಡಲಿನ ದವಡೆಯಿಂದ ಹೇಗೆ ಪಾರು ಮಾಡಿದನೆಂಬ ವಿವರ ಕೊಡುವುದು.[೪೨] ಅವನ ತಂದೆ ಶುಂತರಪಾಂಡ್ಯನು ಆ ಮೊದಲು ಮಾಡಿದಂತೆ ಶಿವನ ಸಲಹೆಯ ಮೇರೆಗೆ ಉಕ್ಕೀರನ್ ಕೂಡ ತನ್ನ 'ಯಾಲ್' ಆಯುಧವನ್ನು ಸಮುದ್ರದೆಡೆಗೆ ಬೀಸಿ ಎಸೆದಾಗ, ಸಮುದ್ರರಾಜನು ಹೆದರಿ ಅವನ ಪಾದಕ್ಕೆ ಬೀಳುವನು. ಆಗ ಶಿವನೇ ಸ್ವತಃ ಅಲ್ಲಿಗೆ ಬಂದು ಒಂದು ಮಂಟಪವನ್ನು ಕಟ್ಟಿ 'ಇದು ಮೊದಲ ಮತ್ತು ಎರಡನೆಯ ಶಂಗಂಗಳ ನೆಲೆ; ಮೂರನೆಯ ಶಂಗಂ ಗಂಗಾ ತಟದ ಮೇಲೆ ನಿರ್ಮಾಣಗೊಳ್ಳುವುದು' ಎಂದು ಹೇಳಿಕೆಯನ್ನಿತ್ತು ಹೋಗುವನು. ಇಲ್ಲಿ ಉಲ್ಲೇಖಗೊಂಡಿರುವ ಗಂಗಾ ತಟವು ಉತ್ತರ ಭಾರತದ ಗಂಗಾ ನದಿಯನ್ನುದ್ದೇಶಿಸಿ ಮಾಡಿದ್ದಲ್ಲ, ಮದುರೈ ನಗರದಲ್ಲಿರುವ 'ಪೊಜ್ರಾಮರೈ ಕಲ್ಯಾಣಿ'ಯನ್ನುದ್ದೇಶಿಸಿದ್ದು. ಶಂಗಂ ಕವಿಗಳ ಗೋಷ್ಠಿಯು ಪಟ್ಟಿಮಂಟಪದಲ್ಲಿ ಸೇರುತ್ತಿತ್ತೆಂಬುದನ್ನು ಇದು ನೆನಪಿಗೆ ತಂದುಕೊಡುವುದು.[೪೩]

ಮಹಾಕಾಳಿ ಅಥವಾ ದುರ್ಗೆಯ ಅವತಾರದಲ್ಲಿ ಶಕ್ತಿಯು ಕಡಲಿನ ಆರ್ಭಟವನ್ನು ಶಮನಗೊಳಿಸಿದ ಕೆಲವು ಐತಿಹ್ಯಗಳೂ ಉಂಟು. ಕಾಂಚೀಪುರದ ಮೇಲೇರಿ ಬರುತ್ತಿದ್ದ ಅಪಾರ

ಜಲರಾಶಿಯನ್ನು ದುರ್ಗೆಯು ತನ್ನ ಕೈಯಲ್ಲಿ ಹಿಡಿದಿದ್ದ ಕಪಾಲದಲ್ಲಿ ಬಂಧಿಸಿದುದರಿಂದ ಅವಳಿಗೆ 'ಪ್ರಳಯಬಂಧಿನಿ' ಎಂಬ ಹೆಸರು ಬಂತೆಂದು ಕಾಮಾಕ್ಷಿವಿಳಾಸ ತಿಳಿಸುವುದು.[೪೪] ದೇವಿಯು ಸ್ವತಃ ಪ್ರವಾಹವನ್ನುಂಟುಮಾಡಿ ಅದನ್ನು ಶಮನಗೊಳಿಸಿದ ಒಂದು ಪ್ರಸಂಗವನ್ನು ಕನ್ಯಾಕುಮಾರಿ ಮಾಹಾತ್ಮ್ಯದಲ್ಲಿ ಕಾಣುವೆವು. ಬಾಣಾಸುರನನ್ನು ಸಂಹರಿಸಿ ದೇವಿಯು ಅಲ್ಲಿಯೇ ನೆಲೆನಿಂತಾಗ, ದೇವತೆಗಳೆಲ್ಲರೂ ಬಂದು ತಮಗೆ ಸಮುದ್ರನೀರಿನ ಬದಲು ಸಿಹಿನೀರಿನ ಅನುಕೂಲತೆಯನ್ನು ಮಾಡಿಕೊಡಬೇಕೆಂದು ಅವಳನ್ನು ಪ್ರಾರ್ಥಿಸುವರು; ಆಗ ದುರ್ಗೆಯು ತನ್ನ ಖಡ್ಗವನ್ನು ಭೂಮಿಯೊಳಗೆ ಒತ್ತಲು, ಸಿಹಿನೀರಿನ ಬುಗ್ಗೆ ಕಾಣಿಸಿಕೊಂಡು ಕ್ರಮೇಣ ಅದು ಮಹಾಪ್ರವಾಹದ ಸ್ವರೂಪ ಪಡೆದುಕೊಳ್ಳುವುದು; ಪಾತಾಳದ ಒಡಲಿನಿಂದ ಉಕ್ಕೇರಿ ಬರುತ್ತಿದ್ದ ಜಲರಾಶಿಯನ್ನು ಕಂಡು ಭಯಭೀತರಾದ ದೇವತೆಗಳು ಅದರಿಂದ ರಕ್ಷಿಸಬೇಕೆಂದು ಕೇಳಿದಾಗ, ದೇವಿಯು ಆ ಜಲರಾಶಿಯನ್ನು ಪಾತಾಳದ ಪದರಿನಲ್ಲಿಯೇ ಬಂಧಿಸಿ ಕನ್ಯಾಕುಮಾರಿಯಲ್ಲಿ 'ಮೂಲಗಂಗಾ' ಕ್ಷೇತ್ರವನ್ನು ನಿರ್ಮಾಣಗೊಳಿಸುವಳು.[೪೫] ಜಲರಾಶಿಯನ್ನು ನಿಗ್ರಹಿಸುವ, ಉಕ್ಕೇರಿ ಬರುವ ಕಡಲನ್ನು ಶಮನಗೊಳಿಸುವ, ಕಬಳಿಸಲ್ಪಟ್ಟ ನೆಲವನ್ನು ಕಡಲ ಹಿಡಿತದಿಂದ ಬಿಡಿಸಿ ಅದನ್ನು ವಸತಿಯೋಗ್ಯ ವಲಯವನ್ನಾಗಿ ಪರಿವರ್ತಿಸುವ, ಪ್ರಸಂಗಗಳು ಹಲವಾರು ಪುರಾಣಗಳಲ್ಲಿ ಬರುವುವು. ಅಗಸ್ತ್ಯನು ಸಾಗರವನ್ನು ಸ್ವಾಹಾ ಮಾಡುವುದು, ಕಾರ್ತವೀರ್ಯನು ಕಡಲಿನೆಡೆ ಬಾಣ ಸಿಡಿಸಿ ಅದನ್ನು ಜಯಿಸುವುದು, ಭೀಷ್ಮನು ಬಾಣದ ಮಳೆಗರೆದು ಜಲವನ್ನು ಬತ್ತಿಸುವುದು, ಪರಶುರಾಮನು ಕೊಡಲಿಯನ್ನು ತೂರೆಸೆದು ಕಡಲನ್ನು ಹಿಮ್ಮೆಟ್ಟಿಸುವುದು, ಕೃಷ್ಣನು ಸಮುದ್ರರಾಜನೊಡನೆ ಹೋರಾಡಿ ಭೂಮಿಯನ್ನು ಪಡೆದುಕೊಂಡು ದ್ವಾರಕೆಯನ್ನು ಕಟ್ಟುವುದು, ಇವುಗಳಲ್ಲಿ ಕೆಲವು.[೪೬] ಸಮುದ್ರತೀರದ ಜನಾಂಗಗಳ ಹಾಡು, ನಾಣ್ನುಡಿ, ಹಬ್ಬದಾಚರಣೆಗಳಲ್ಲಿ ಅಡಕವಾಗಿರುವ ಇಂತಹ ಸಮುದ್ರ-ಸಂಘರ್ಷದ ವಿವರಗಳಿಗೆ ಲೆಕ್ಕ ಕಟ್ಟುವುದೇ ಕಷ್ಟ.[೪೭]

ಸ್ಥಳಮಹಾತ್ಮೆ, ಪುರಾಣ, ಐತಿಹ್ಯ, ದಂತಕತೆಗಳನ್ನು ಅಕ್ಷರಶಃ ನಂಬುವುದು ಎಷ್ಟು ಅಪಾಯಕಾರಿಯೋ ಅಷ್ಟೇ ದುರದೃಷ್ಟಕರವಾದುದು ಅವನ್ನು ಸಂಪೂರ್ಣವಾಗಿ ಉಪೇಕ್ಷಿಸುವುದು. ಇವುಗಳನ್ನು ಸಮರ್ಥವಾಗಿ ದುಡಿಸಿಕೊಳ್ಳುವ ಸಾಮರ್ಥ್ಯದ ಮೇಲೆ ಇತಿಹಾಸಕಾರನ ನೈಪುಣ್ಯ ನಿರ್ಧಾರವಾಗುವುದರಿಂದ ಅವನ್ನು ಇತಿಹಾಸಕಾರನು ಬಹಳ ಎಚ್ಚರಿಕೆಯಿಂದ ಬಳಸಿಕೊಳ್ಳಬೇಕಾಗುವುದು. ಇದು ಏನೇ ಇರಲಿ, ಐತಿಹ್ಯಗಳೂ ಇತಿಹಾಸ ರಚನೆಯ ಒಂದು ಬಗೆಯ ಅಮೂಲ್ಯ ಆಕರಗಳು ಎಂಬುದನ್ನು ಮಾತ್ರ ಅಲ್ಲಗಳೆಯುವಂತಿಲ್ಲ. ಇದನ್ನು ವಿಜ್ಞಾನಿಗಳು ಒಪ್ಪಬಹುದು ಇಲ್ಲವೇ ಒಪ್ಪದಿರಬಹುದು.

ಆಕರ ಟಿಪ್ಪಣಿ :

೧೬. ಇರೈಯನಾರ್‌ನ ಅಹಪ್ಪೊರುಳ್, ಸೂ. ೧ ಕ್ಕೆ ಬರೆದ, ನಕ್ಕೀರರ್ ಶಿಲಪ್ಪದಿಕಾರಕ್ಕೆ ಬರೆದ, ಅಡಿಯರ್ ಕುನಲ್ಲಾರ್ ಟೀಕೆಗಳಲ್ಲಿ ಈ ವಿವರ ದೊರೆಯುವುದು. ದಿ ಲೈಟ್ ಆಫ್ ಟ್ರುತ್ ಆರ್ ಸಿದ್ಧಾಂತ ದೀಪಿಕಾ ೧೯೧೦-೧೧, ಪು. ೧೧. ೮೮; ಅರವಮುತನ್, ಟಿ. ಜಿ. "ದಿ ಪಿಲ್ಗ್ರಿಮ್ಸ್ ಅಕೌಂಟ್ ಆಫ್ ದಿ ತಮಿಳ್ ಅಕಡೆಮೀಸ್". ಜರ್ನಲ್ ಆಫ್ ಓರಿಯಂಟಲ್ ರೀಸರ್ಚ್-೪. ಪು. ೧೮೬-೨೦೧; ೨೭೯-೩೧೭; ಜ್ವೆಲಬಿಲ್. ಕೆ., "ದಿ ಅರ್ಲಿಯಸ್ಟ್ ಅಕೌಂಟ್ ಆಫ್ ದಿ ತಮಿಳ ಅಕಡೆಮೀಸ್". ಇಂಡೋ-ಇರಾನಿಯನ್ ಜರ್ನಲ್-೧೫-11.

ಪು. ೧೮೯-೬೫. ಹೂಲ್‌ಮನ್, ಡಿ., "ದಿ ತಮಿಳ್ ಫ್ಲಡ್ ಮಿತ್ಸ್ ಅಂಡ್ ದಿ ಲಂಕಾ ಲೆಜೆಂಡ್", ಡುಂಡೆಸ್, ಎ.(ಸಂ.). ದಿ ಫ್ಲಡ್ ಮಿತ್ - ತಮಿಳ್. (ಕ್ಯಾಲಿಫೋರ್ನಿಯಾ ಯುನಿವರ್ಸಿಟಿ ಪ್ರೆಸ್, ೧೯೮೮). ಕೊನೆಯ ಲೇಖನವು ಜರ್ನಲ್ ಆಫ್ ತಮಿಳ್ ಸ್ಟಡೀಸ್ ೧೪(೧೯೭೮) ಪು. ೧೦-೬೧ ರಲ್ಲಿ ಮರುಪ್ರಕಟವಾಗಿದ್ದು ಅದನ್ನೇ ಈ ಲೇಖನದಲ್ಲಿ ನಾನು ಬಳಸಿಕೊಂಡಿರುವೆ. ಅಲ್ಲದೆ ಡೇವಿಡ್ ಹೂಲ್‌ಮನ್ ಅವರು ಜರೂಸಲೆಮ್‌ನಿಂದ ನನ್ನೊಡನೆ ಈಮೇಲ್ ಮೂಲಕ ಈ ಬಗ್ಗೆ ಚರ್ಚಿಸಿ, ನನ್ನ ತಿಳಿವಳಿಕೆಯನ್ನು ವಿಸ್ತರಿಸಿಕೊಳ್ಳಲು ಸಹಾಯ ಮಾಡಿರುವರು.

೧೭. **ಪುಱನಾನೂರು ೬:೧-೨; ೧೭-೧, ೬೭-೬೮; ಅಹಪ್ಪೊರುಳ್ ಸೂ. ೧; ಕಲಿತ್ತೊಕೈ ೧೦೪:೧-೪. ಅಲ್ಲದೇ ನೋಡಿ, ಅ.ಟಿ. ೧೬**

೧೮. **ಶಿಲಪ್ಪದಿಕಾರಂ ೨-ಸಾ. ೧೭-೨೨; ೭-೧-೨; ೯-೧೮-೨೦**

೧೯. ಈ ಬಗ್ಗೆ ಪೂರ್ಣಲಿಂಗಂ ಪಿಳ್ಳೈ, ಸೂರ್ಯನಾರಾಯಣಶಾಸ್ತ್ರಿ, ಅಬ್ರಾಹಿಮ್ ಪಂಡಿತರ್, ಐಯರ್ ಅರಿತಮ್, ದೇವನೇಯನ್, ರಾಘವ ಐಯ್ಯಂಗಾರ್ ಮುಂತಾದವರ ಚರ್ಚೆಗೆ ನೋ. ರಾಮಸ್ವಾಮಿ, ಅದೇ., ಪು. ೧೩೨-೧೩೪

೨೦. ಅನ್ನಪೂರ್ಣೆ. ಕೆ., "ತಮಿಳ್‌ನಾಟುಮ್ ಪಣ್ಟೈತ್ ತಮಿೞರ್ಕಳುಂ" (ತಮಿಳುನಾಡು ಮತ್ತು ಪುರಾತನ **ತಮಿಳರು), ಅಣಂತಪೋತಿನಿ, XXI, ೪, ಪು. ೨೫೭-೬೨**

೨೧. **ಪುಱನಾನೂರು ೧೫೦, ೩೭೩, ೧೨೨, ೧೨೮, ೧೬೦, ೮೦, ೬೧ ಸಕ್ರಮವಾಗಿ.**

೨೨. ಎರುಮೈನಾಡಿಗೆ ಬರುವ ಸಾಹಿತ್ಯಿಕ ಉಲ್ಲೇಖಗಳಲ್ಲಿ ಕೆಲವನ್ನು ಈಗಾಗಲೇ ಗಮನಿಸಲಾಗಿದ್ದರೂ ಶಾಸನ ಪ್ರಸ್ತಾಪವನ್ನು ಸಮಗ್ರವಾಗಿ ಚರ್ಚಿಸಿದ್ದು ನನ್ನ ಗಮನಕ್ಕೆ ಬಂದಿಲ್ಲ. ಬಹುಶಃ ಅಕಡೆ ನಮ್ಮ ಗಮನವಿನ್ನೂ ಹರಿದಿಲ್ಲವೆಂದು ನನಗನಿಸುವುದು. ಎರುಮೈನಾಡಿನ ಚರ್ಚೆಯನ್ನು ಮುಂದಿನ ಲೇಖನದಲ್ಲಿ ನಾನು ಕೈಗೊಳ್ಳುವೆನಾದರೂ ಕನ್ನಡಕ್ಕೆ ಸಂಬಂಧಿಸಿದ ಕೆಲವು ಪ್ರಮುಖ ವಿಷಯಗಳನ್ನು ಇಲ್ಲಿ ಸಂಗ್ರಹಿಸಿ ಹೇಳುವುದು ಪ್ರಸ್ತುತವೆನಿಸುವುದು.

೧೯೧೪ ರಲ್ಲಿ ಮೊದಲು ವರದಿಯಾದ ಈ ಶಾಸನದ ಬಗ್ಗೆ ಹತ್ತಾರು ನಿಯತಕಾಲಿಕೆಗಳಲ್ಲಿ ಚರ್ಚೆಯಾಗಿದೆ. ಆದರೆ ಕನ್ನಡ ನಾಡಿಗೆ ನೇರ ಪ್ರಸ್ತುತವಾದ ಕೆಲವು ಅಂಶಗಳನ್ನು ಕನ್ನಡಿಗರಾಗಲೀ ತಮಿಳರಾಗಲೀ ಕೂಲಂಕಷವಾಗಿ ಚರ್ಚಿಸಿಲ್ಲವೆಂಬ ಭಾವನೆ ನನ್ನದಾಗಿದೆ. ಈ ಶಾಸನದ ಸಂಪೂರ್ಣ ಪಾಠ ಮತ್ತು ಕೂಲಂಕಷ ಚರ್ಚೆಗೆ ಇತ್ತೀಚೆಗೆ ಪ್ರಕಟಗೊಂಡಿರುವ ಇರಾವತಿ ಮಹದೇವನ್ ಅವರ ಅರ್ಲಿ ತಮಿಳ್ ಎಪಿಗ್ರಫಿ (ಫ್ರಮ್ ದಿ ಅರ್ಲಿಯಸ್ಟ್ ಟೈಮ್ಸ್ ಟು ದಿ ಸಿಕ್ಸ್ತ್ ಸೆಂಚುರಿ ಎ.ಡಿ. (ಚೆನ್ನೈ-ಹಾರ್ವರ್ಡ್ ಯುನಿವರ್ಸಿಟಿ, ಯು.ಎಸ್.ಎ., ೨೦೦೩), ಪು. ೩೮೪-೩೮೬, ಪು. ೧೫೨ ಮತ್ತು ಪು. ೫೭೭-೫೮೦ನ್ನು ನೋಡಿ. ಈ ಶಾಸನದಲ್ಲಿ ಬರುವ ಎರುಮಿ (ತ. ಎರುಮೈ), ನಾಟು>ನಾಡು (ತ. ನಾಟ್ಟು), ಪೊಸಿಲ್ (ಹೊಸಲು>ಹೊಸ್ತಿಲು), (ಪೊಷ್=ಪ್ರವೇಶ; ಪೊಷ್-ಅಜ್ : ದ್ವಾರಬಾಗಿಲು; ತ. ವಾಸಲ್, ವಾಯಿಲ್), ಇಳೆಯಾರ್(ತುಳು ಯೋಧ), ಅತಿಟ್-ಅಣ>ಅತಿಟಾಣ(/ತ) ಅಧಿಟ್ಠಾಣ(ಪಾಲೀ)=ಅಧಿಷ್ಠಾನ(ಸಂ.) ಎಂಬ ಪದಗಳಲ್ಲಿ ಅತ್ಯಂತ ಪ್ರಾಚೀನ ಕಾಲದ ಕನ್ನಡ ಪದಗಳನ್ನು ಗುರುತಿಸಬಹುದು. ಇಲ್ಲಿ ಬರುವ 'ಇಳೆಯಾರ್'ನ ಪ್ರಸ್ತಾಪವು ಅಹನಾನೂರಿನಲ್ಲಿ(೮೬:೯-೧೦)ಯೂ ಬಂದಿದ್ದು ಅಲ್ಲಿ ಅವನನ್ನು 'ಅನಕ್ಷರಸ್ಥ' ಎಂದು ಗುರುತಿಸಲಾಗಿದೆ. ಇದು ತಮಿಳು ಭಾಷೆ ತಿಳಿಯದ ತುಳುಗನ್ನಡಿಗನನ್ನು ನಿರ್ದೇಶಿಸುವುದು. ಎಂಬುದು ನನ್ನ ಅನಿಸಿಕೆ. ಇದು ಹಾಗೇ ಇರಲಿ, ಈ ಶಾಸನದಲ್ಲಿ ಬರುವ ಪದಗಳು 'ಅತಿಪೂರ್ವದ ಕನ್ನಡವು ಅತಿಪೂರ್ವದ ತಮಿಳಿನ ಮೇಲೆ ಆರಂಭಕಾಲದಲ್ಲಿ ಬೀರಿದ ಪ್ರಭಾವವನ್ನು ಸಾಬೀತುಪಡಿಸುವುದು' ಎಂಬ ಮಹಾದೇವನ್ ಅವರ ಮಾತು (ಅದೇ., ಪು. ೫೮೦) ತುಂಬಾ ಗಮನಾರ್ಹವಾದುದು.

೨೩. ಸ್ವಾಮಿನಾಥ ಐಯರ್, ಇಳಂಕಾವಟಿ ಕಳರುಳಿಚ್ಚೆಯ್ದ ಶಿಲಪ್ಪದಿಕಾರ ಮೂಲಮುಮ್ ಅರುಂಪತಯುರೈಯುಮ್ ಅಟಿಯಾರ್ಕ್ಕುನಲ್ಲಾರುರೈಯುಮ್ (ಇಳಂಗೋ ಅಡಿಗಳ ಶಿಲಪ್ಪದಿಕಾರಂ ಮತ್ತು ಅಡಿಯಾರ್ಕ್ಕುನಲ್ಲಾರ್ ಟೀಕೆ), ಮದ್ರಾಸು, ೧೯೫೦, ಪು. ೨೨೮; ಪೂರ್ಣಲಿಂಗ ಪಿಳ್ಳೈ, ಪಳಂತಮಿಳ್ (ಪುರಾತನ ತಮಿಳು) ತಿರುಚಿರಪ್ಪಲ್ಲಿ, ೧೯೫೫, ಪು. ೩; ಅಬ್ರಹಮ್ ಪಂಡಿತರ್, ಕರುಣಾಮೃತಸಾಗರಂ, ದೆಹಲಿ, ೧೯೮೪, ಪು.ಮು., ಪು. ೯೦. ಅಲ್ಲದೆ ನೋ. ರಾಮಸ್ವಾಮಿ, ಅದೇ. ಪು. ೧೬೯-೧೭೧, ೨೦೫

೨೪. ಚಿದಂಬರನಾರ್, ಟಿ., ತಮಿಳ್ ಶಂಕಂ ಕಾಳಿನ್ ವರಲಾಱು (ತಮಿಳ ಸಂಗಂಗಳ ಇತಿಹಾಸ) ಮದ್ರಾಸು, ೧೯೪೮, ಪು. ೧೫೦; ಕಂದಯ್ಯ ಪಿಳ್ಳೆ, ಎನ್. ಎಸ್., ತಮಿಳಹಂ (ತಮಿಳರ ತವರುಮನೆ), ಮದ್ರಾಸು, ೧೯೩೪, ಪು. ೨, ನೋ. ರಾಮಸ್ವಾಮಿ, ಅದೇ., ಪು. ೧೭೦-೧೭೧

೨೫. ಮಾಮಲ್ಲಪುರಂನಲ್ಲಿ ದೊರೆತ ಅವಶೇಷಗಳಲ್ಲದೆ ಕಡಲತೀರದ ದೇವಾಲಯ (ಷೋರ್ ಟೆಂಪಲ್) ಬಳಿ ಮರಳಿನಲ್ಲಿ ಮುಳುಗಿದ್ದ ಪಲ್ಲವ ಕಾಲದ ಶಿವದೇವಾಲಯವನ್ನು ಶೋಧಿಸಿ ಉತ್ಖನನ ಮಾಡಲಾಗಿದೆ. ಇದರ ಪ್ರಥಮ ವರದಿಗೆ ನೋ. ೨೯-೪-೨೦೦೫ ರ ಹಿಂದೂ ದಿನಪತ್ರಿಕೆ (ಬೆಂಗಳೂರು) ಮತ್ತು ಫ್ರಂಟ್ ಲೈನ್ (ಅರ್ಧಮಾಸಿಕ), ಚೆನ್ನೈ, ೨೫ ಮಾರ್ಚ್ ೨೦೦೫, ಪು. ೧೨೯-೩೪

೨೬. ವೆಂಕಟಸುಬ್ರಮಣಿಯನ್, ಟಿ. ಕೆ., ಎನ್ವಿರೋನ್‌ಮೆಂಟ್ ಅಂಡ್ ಅರ್ಬನೈಜೇಷನ್ ಇನ್ ಅರ್ಲೀ ತಮಿಲಕಂ (ತಂಜಾವೂರ್, ೧೯೮೮), ಪು. ೫೦-೫೬

೨೭. ರಾಮಸ್ವಾಮಿ, ಎಸ್., "ಹಿಸ್ಟರಿ ಆಟ್ ಲ್ಯಾಂಡ್ಸ್ ಎಂಡ್ : ಲೆಮೂರಿಯಾ ಇನ್ ತಮಿಳ್ ಸ್ಪೇಸ್ ಫ್ಯಾಬಲ್ಸ್" ಜರ್ನಲ್ ಆಫ್ ಎಸ್ಸಿಯಾಟಿಕ್ ಸ್ಟಡೀಸ್, ೫೯, ೩, ಪು. ೫೨೫-೬೦೨

೨೮. ಅಹಪ್ಪೊರುಳ್ ಸೂ.-೧; ಕಲಿತ್ತೊಕ್ಕೈ ೧೦೪:೧-೪; ಪುಱನಾನೂರು ೬:೧-೨; ೧೭:೧; ೬೭-೬೮. ಇವು ಕ್ರಮವಾಗಿ ೧೮೮೩, ೧೮೮೭, ೧೮೯೪ ರಲ್ಲಿ ಮತ್ತು ಶಿಲಪ್ಪದಿಕಾರಂ ೧೮೯೨ ರಲ್ಲಿ ಬೆಳಕಿಗೆ ಬಂದವು.

೨೯. ರಾಮಸ್ವಾಮಿ, ಅದೇ., ೬- ಪು. ೧೮೨-೨೨೨

೩೦. ಅದೇ., ಪು. ೨೦೬-೨೦೭

೩೧. ಅದೇ., ಪು. ೨೧೦-೨೧೨

೩೨. ಅದೇ., ಪು. ೨೧೩

೩೩. ಭಾಗವತಪುರಾಣ (ಬಾಂಬೆ, ೧೯೦೫), ೮, ೨೪, ೧೩; ಮತ್ಸ್ಯಪುರಾಣ (ಆನಂದಾಶ್ರಮ ಸಾನ್ಸ್‌ಕ್ರಿಟ್ ಸೀರೀಸ್-೫೪, (ಪೂನಾ, ೧೯೦೯), ೧೦. ೧೧-೧೨

೩೪. ಕಲಿತ್ತೊಕ್ಕೈ ೧೦೪, ೧-೪; ಶಿಲಪ್ಪದಿಕಾರಂ ೧೧. ೧೭-೨೨

೩೫. ಶಿಲಪ್ಪದಿಕಾರಂ ೨೧. ೬-೧೦

೩೬. ದೀಕ್ಷಿತ್, ವಿ. ಆರ್. ಆರ್., ಅದೇ., ಪು. ೨೫೧, ಅ.ಟಿ. ೪

೩೭. ಮಣಿಮೇಕಲೈ ೨೪. ೨೭-೭೪; ೨೫. ೧೭೮-೨೦೦

೩೮. ವೆಂಡಿ ಡೋನಿಗರ್ ಓ ಫ್ಲಹರ್ಟಿ, ಹಿಂದೂ ಮಿತ್ಸ್ (ಹರ್ಮಂಡ್ಸ್‌ವರ್ತ್, ೧೯೭೫), ಪು. ೨೭೦-೭೧

೩೯. ಪೆರುಂ. ೧೨; ಪರು. ೧೮. ೧-೯; ೧೯. ೧-೨೬. ಅಲ್ಲದೆ ನೋ. ಪೆರುಂ. ೮, ೨೦, ೩೦, ೪೦, ೪೪, ೪೭, ೬೧, ೬೪; ಪರಂ ೯. ೧೪-೧೬, ೩೧, ೪೯, ೫೬, ೬೧ ಮುಂ.

೪೦. ಪೆರಿಯಪುರಾಣಂ (ಮದ್ರಾಸು, ೧೯೧೬, ೪.೫. ೬೨-೭೦; ಕಾಂಜೀಪುರಾಣಂ ೬೩. ೩೬೪-೪೦೧

೪೧. ಅರುಣಾಚಲಕ್ಕ ವಿರಾಯರ್, ಶೀಕಾಳಿತ್ತಳ ಪುರಾಣಂ, (ಮದ್ರಾಸು, ೧೮೮೭), ೨. ೧೫-೪೧

೪೨. ಪರಂಜ್ಯೋತಿ ೨೧. ೧-೯

೪೩. ಅದೇ.

೪೪. ಕಾಮಾಕ್ಷಿ ವಿಳಾಸ (ಬೆಂಗಳೂರು, ೧೯೯೮), ೮. ೫೫-೭೦

೪೫. ಬಾರ್ನೆಲ್ ಹಸ್ತಪ್ರತಿ (ಐಓಎಲ್, ಲಂಡನ್), ೧೦ ಬಿ. ೪೬೮. ೬

೪೬. ಅರವಮುತನ್, ಟಿ. ಜಿ., "ದಿ ಮತುರೈ ಕ್ಲಾಸಿಕ್ಸ್ ಅಂಡ್ ದಿ ತಮಿಳ ಅಕಾಡಮೀಸ್" ಜರ್ನಲ್ ಆಫ್ ದಿ ಓರಿಯಂಟಲ್ ರೀಸರ್ಚ್, (ಮದ್ರಾಸು, ೧೯೩೨), ಪು. ೨೯೧-೨೯೨; ನೀಲಕಂಠಶಾಸ್ತ್ರಿ, ಕೆ. ಎ., ಹಿಸ್ಟರಿ ಆಫ್ ಸೌತ್ ಇಂಡಿಯಾ (ಮೂರನೆಯ ಪು. ಮು. ಮುಂಬೈ, ೧೯೯೯), ಪು. ೭೧-೭೪; ಸಾಲೆತೊರೆ, ಬಿ. ಎ., ಏನ್ಸಿಯಂಟ್ ಕರ್ನಾಟಕ-೧ : ಹಿಸ್ಟರಿ ಆಫ್ ತುಳವ (ಪೂನಾ, ೧೯೩೬), ಪು. ೯-೩೮

■ ಡಾ. ಷ. ಶೆಟ್ಟರ್ : ಡಾ. ಎಸ್. ರಾಧಾಕೃಷ್ಣನ್ ಸಂದರ್ಶಕ ಪ್ರಾಧ್ಯಾಪಕ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್, ಐಐಎಸ್‌ಸಿ ಕ್ಯಾಂಪಸ್, ಬೆಂಗಳೂರು - ೫೬೦ ೦೧೨ ■

ಜನಾನುರಾಗವೂ ರಂಗಭೂಮಿಯೂ

'ಪುಗಳೇಂದಿ' ಮುನ್ನುಡಿ

ಪ್ರಸನ್ನ

ಕನ್ನಡದಲ್ಲೀಗ ನಾಟಕಗಳಿಲ್ಲ, ಇರಬೇಕಾದಷ್ಟು ಇಲ್ಲ. ಅದೇ ರವೀಂದ್ರ ಕಲಾಕ್ಷೇತ್ರ, ಅದೇ ಗಿರೀಶ್ ಕಾರ್ನಾಡ್, ಅದೇ ಕಂಬಾರರು ಎಂದು ನಾವು ಎಣಿಸೆಣಿಸಿ ಸೋತಿದ್ದೇವೆ. ಆದರೆ ಗಮನಿಸಿ. ಶಾಲಾ ಕಾಲೇಜುಗಳಿಂದ ನಾಟಕ ಮಾಯವಾಗಿದೆ, ಕಾರ್ಖಾನೆಗಳ ಕನ್ನಡ ಸಂಘಗಳಿಂದ ಮಾಯವಾಗಿದೆ, ಗದಗ ಬೆಟಗೇರಿ ಸಾಗರ ಶಿವಮೊಗ್ಗ ಧಾರವಾಡ ಗುಲ್ಬರ್ಗ ತುಮಕೂರುಗಳಿಂದ ಹೆಚ್ಚೂಕಡಿಮೆ ಮಾಯವಾಗಿದೆ. ಒಳ್ಳೆಯ ನಾಟಕಗಳು ಅತ್ತಟ್ಟಿಗಿರಲಿ, ಕೆಟ್ಟ ಕಮರ್ಶಿಯಲ್ ನಾಟಕಗಳು ಸಹಿತ ಈಗೀಗ ಕಂಡುಬರುತ್ತಿಲ್ಲ. ದ್ವಂದ್ವಾರ್ಥದ ಮಾತುಗಳು, ಪೋಲಿ ದೃಶ್ಯಗಳು, ವ್ಯರ್ಥ ಕ್ರೌರ್ಯ, ಹಾಗೂ ಮೂಢನಂಬಿಕೆಗಳನ್ನು ಬಿಂಬಿಸುತ್ತವೆ ಎಂಬ ಆರೋಪ ಹೊತ್ತಿದ್ದ ನಾಟಕ ಕಂಪನಿಗಳು ಯಾವುದೇ ದ್ವಂದ್ವಕ್ಕೆ ಆಸ್ಪದವಿಲ್ಲದ ರೀತಿಯಲ್ಲಿ ಮರೆಯಾಗಿ ಹೋದವು. ಹಾಗೆಂದು ದ್ವಂದ್ವಾರ್ಥದ ಮಾತುಗಳು ಹಾಗೂ ವ್ಯರ್ಥ ಕ್ರೌರ್ಯದ ಚಿತ್ರಣ ಸಮಾಜದಿಂದ ಮರೆಯಾಯಿತೇ? ಇಲ್ಲ. ಅವುಗಳನ್ನೀಗ ಹೆಚ್ಚು ಗೌರವಯುತವಾದ ಟೈಂಸ್ ಆಫ್ ಇಂಡಿಯಾ, ಟಿವಿ, ಸಿನಮಾಗಳು ಗೌರವಯುತವಾಗಿಯೇ ಪ್ರಸಾರ ಮಾಡುತ್ತಿವೆ.

ಹವ್ಯಾಸಿ ರಂಗಭೂಮಿ ಕುಂಟುತ್ತ ಸಾಗಿದೆ. ಬುದ್ಧಿಜೀವಿಗಳು ನಾಟಕದ ಹವ್ಯಾಸ ತೊರೆದು ಟೀವಿಯ ಹವ್ಯಾಸಕ್ಕಿಳಿದಿದ್ದಾರೆ, ಇಲ್ಲವೇ ಸರಕಾರಿ ಪ್ರಗತಿಪರ ಕಾರ್ಯಕ್ರಮಗಳಿಗೆ ಹಾಡು ಹಸೆ ಬರೆಯುತ್ತಿದ್ದಾರೆ. ಜನತಾದಳ ಮತ್ತೆ ಅಧಿಕಾರಕ್ಕೆ ಬಂದಿದೆ. ಹಿಂದಿನ ಜನತಾದಳ ಸರಕಾರಗಳಲ್ಲಿ ಹೆಗ್ಡೆ, ಪಟೇಲ್, ಪ್ರಕಾಶ್ ಇತ್ಯಾದಿಗಳು ಸಾಹಿತಿ ಕಲಾವಿದರನ್ನು ನಗುಮುಖದಿಂದ ಮಾತನಾಡಿಸುವ ಹವ್ಯಾಸ ಬೆಳೆಸಿದ್ದರು. ಹಾಗಾಗಿ ರಂಗಕರ್ಮಿಗಳೆಲ್ಲರೂ ಮತ್ತೊಮ್ಮೆ ಹೊಸ ಹುರುಪಿನಿಂದ ಮಂತ್ರಿಗಳ ಮನೆಯನ್ನು ಎಡತಾಕುತ್ತಿದ್ದಾರೆ. ನಾಟಕಗಳಿಲ್ಲದಿದ್ದರೇನಾಯಿತು, ನಾಟಕ ಅಕಾಡೆಮಿಗಳಿವೆಯಲ್ಲ ಸೇವೆ ಮಾಡಲಿಕ್ಕೆ!

ಇತ್ತೀಚಿನ ದಿನಗಳಲ್ಲಿ ರಂಗಭೂಮಿಯಲ್ಲಿ ರಂಗಪ್ರದರ್ಶನಕ್ಕಿಂತಲೂ ಮಿಗಿಲಾಗಿ ಸನ್ಮಾನ ಸಮಾರಂಭಗಳು, ಷಷ್ಟ್ಯಬ್ದಿ ಸಮಾರಂಭಗಳು, ಸ್ನೇಹಮಯ ಕ್ರಿಕೆಟ್ ಮ್ಯಾಚುಗಳು ಹೆಚ್ಚಾಗಿವೆ. ಒಟ್ಟಾರೆಯಾಗಿ ರಂಗಕರ್ಮಿಗಳಿಗೆ ತುರುಬು ನೆನೆಸಿಕೊಳ್ಳುವ ತುಡಿತ ಜಾಸ್ತಿಯಾಗಿದೆ. ಮಾಜಿ ಸೈನಿಕರು, ಮಾಜಿ ಸ್ವಾತಂತ್ರ್ಯ ಹೋರಾಟಗಾರರು, ಪಿಂಚಣಿದಾರರುಗಳ ತರಹ ರಂಗಕರ್ಮಿಗಳೂ ಸಹಿತ, 'ಅಂದಕಾಲತ್ತಿಲ್' ರಂಗಭೂಮಿಯನ್ನು ನೆನೆನೆನೆದು ಕಣ್ಣೀರು ಮಿಡಿಯುತ್ತಿದ್ದಾರೆ.

ಕೊಂಚ ಯೋಚಿಸಿ! ರಂಗಭೂಮಿಗೆ ಯಾವತ್ತೂ ಇದ್ದ, ಈಗಲೂ ಇರುವ ಏಕೈಕ ಮಾನದಂಡವೆಂದರೆ ಪ್ರೇಕ್ಷಕರು, ಎಂ. ಪಿ. ಪ್ರಕಾಶ್ ಅಥವಾ ರಾಣಿ ಸತೀಶ ಅಥವಾ ಅಕಾಡೆಮಿಗಳಲ್ಲ. ಪ್ರೇಕ್ಷಕರನ್ನು ಆಕರ್ಷಿಸಲು ಸೋಲುವ ರಂಗಭೂಮಿ ತನ್ನೆಲ್ಲ ಪ್ರಾಮಾಣಿಕತೆ, ಸಾಹಿತ್ಯಿಕ ಗಾಂಭೀರ್ಯ ಹಾಗೂ ಸಾಮಾಜಿಕ ಕಳಕಳಿಯ ನಂತರವೂ ವ್ಯರ್ಥ ಕಸರತ್ತೇ ಸರಿ. ಸಮಕಾಲೀನ ಕನ್ನಡ ರಂಗಭೂಮಿ ಪ್ರೇಕ್ಷಕರನ್ನು ಆಕರ್ಷಿಸಲು ಸೋತಿದೆ. ಕೆಲವು

ದಶಕಗಳಿಂದೀಚೆಗೆ ಅದು ಅತಿ ಗಾಂಭೀರ್ಯವೆಂಬ ಶ್ರೀಮಂತ ರೋಗಕ್ಕೆ– ಮಧುಮೇಹ, ರಕ್ತದೊತ್ತಡ, ಬೊಜ್ಜು ಇತ್ಯಾದಿ ಇದ್ದ ಹಾಗೆ– ಪಕ್ಕಾಗಿದೆ.

ನಾವು ರಂಗಕರ್ಮಿಗಳು, ಇಲ್ಲವೇ ಮಹಾನ್ ಕ್ರಾಂತಿಕಾರಿಗಳ ತರಹ ಇಲ್ಲವೇ ಧೀಮಂತ ದಾರ್ಶನಿಕರುಗಳ ತರಹ, ಇಲ್ಲವೇ ಪೂಜ್ಯ ಸಂತರುಗಳ ತರಹ ಪೋಜು ಕೊಡುತ್ತ ಕಾಲ ಕಳೆಯುತ್ತಿದ್ದೇವೆ. ದೊಂಬರು, ಕಣ್ಕಟ್ಟು ಮಾಡುವವರು ಸರ್ಕಸ್ಸಿನ ಬಫೂನರುಗಳಿಗಿರುವ ಶಿಸ್ತು ಕೂಡಾ ನಮಗಿಲ್ಲವಾಗಿದೆ. ದೊಂಬರು, ಕಣ್ಕಟ್ಟು ಮಾಡುವವರು ಬಫೂನರು ತಮ್ಮ ಅನ್ನವನ್ನು ಬಫೂನಿಕೆಯಿಂದಲೇ ಗಳಿಸುತ್ತಾರೆ, ನಾವು ಮಾಜಿ ಸೈನಿಕರ ತರಹ ಮಾಸಾಶನದ ಅನ್ನ ತಿನ್ನುತ್ತಿದ್ದೇವೆ.

ಇದು ಕನ್ನಡ ರಂಗಭೂಮಿಯ ಈಪತ್ತಿನ ಸಂದರ್ಭವಾಗಿದೆ. ರಾಮನಾಥರ 'ಪುಗಳೇಂದಿ ಪ್ರಹಸನ' ನಾಟಕವು ಪುಸ್ತಕರೂಪದಲ್ಲಿ ಪ್ರಕಟವಾಗುತ್ತಿದೆಯಂತೆ. ಪುಸ್ತಕಕ್ಕೊಂದು ಮುನ್ನುಡಿ ಬರೆದುಕೊಡಿ ಎಂದು ರಾಮನಾಥರು ಕೇಳಿಕೊಂಡರು. ಇಷ್ಟೆಲ್ಲ ಹತಾಶೆ ತೋಡಿಕೊಂಡದ್ದು ರಾಮನಾಥರ ಕಾರಣಕ್ಕಾಗಿ. 'ಪುಗಳೇಂದಿ ಪ್ರಹಸನ' ನಾಟಕ ಪ್ರಕಟವಾಗುತ್ತಿರುವುದು ಸಂತೋಷದ ಸಂಗತಿ. ಈ ನಾಟಕದ ರಂಗಕೃತಿಯನ್ನು ನಾನೇ ಕೆಲವು ವರ್ಷಗಳ ಹಿಂದೆ ರಂಗಾಯಣ ತಂಡಕ್ಕೆಂದು ನಿರ್ದೇಶಿಸಿದ್ದೆ. ಇದೊಂದು ಸರಳ ಮನರಂಜನೆಯ ನಾಟಕ, ಪ್ರೇಕ್ಷಕರನ್ನು ತಲುಪುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಾರೆ ರಾಮನಾಥ್ ಈ ನಾಟಕದಲ್ಲಿ.

'ಪುಗಳೇಂದಿ ಪ್ರಹಸನ'ವು ಕಾರ್ಲೊ ಗೋಲ್ಡೋನಿಯ ಇಟಾಲಿಯನ್ ನಾಟಕ Servant of two Masters ನ ಕನ್ನಡ ರೂಪಾಂತರ. ಎ.ಎನ್. ಮೂರ್ತಿರಾಯರ 'ಆಷಾಢಭೂತಿ'ಯೂ ಒಂದು ರೂಪಾಂತರವೇ ತಾನೆ? ಅಚ್ಚ ಕನ್ನಡದ ನಾಲ್ಕೈದು ನಾಟಕಗಳನ್ನು ನಾನು ನೆನಪಿಸಿಕೊಳ್ಳಲು ಯತ್ನಿಸಿದರೆ 'ಆಷಾಢಭೂತಿ', 'ಸಾಯೋ ಆಟ', 'ಕದಡಿದ ನೀರು', 'ವಿಗಡ ವಿಕ್ರಮರಾಯ' ನನ್ನ ಮನಸ್ಸಿಗೆ ಬರುತ್ತವೆ. 'ಆಷಾಢಭೂತಿ' ಮೋಲಿಯರ್‌ನ 'ತಾರ್ತೂಫ್' ನಾಟಕದ ರೂಪಾಂತರವಾದರೆ ಬೇಂದ್ರೆಯವರ 'ಸಾಯೋ ಆಟ' ಭಾರತೇಂದು ಹರಿಶ್ಚಂದ್ರರ 'ಅಂಧೇರ್ ನಗರೀ' ನಾಟಕದ ರೂಪಾಂತರ. ಇನ್ನು ಜಿ.ಬಿ.ಯವರ 'ಕದಡಿದ ನೀರು' ಬಗ್ಗೆಯೂ ಅದೊಂದು ಐರಿಷ್ ನಾಟಕದ ರೂಪಾಂತರ ಎಂದು ಹಲವು ವಿಮರ್ಶಕರು ಪತ್ತೇದಾರಿ ಮಾಡಿದ್ದಾರೆ. ಸಂಸರ 'ವಿಗಡ ವಿಕ್ರಮರಾಯ' ಶೇಕ್ಸ್‌ಪಿಯರನ ನಾಟಕದ ರೂಪಾಂತರ ಎಂದು ಸಾಧಿಸಿ ತೋರಿಸುವುದು ಕಷ್ಟವೇನಲ್ಲ. ಸಂಸ್ಕೃತದ ಯಾವ ನಾಟಕವೂ ಮೂಲ ನಾಟಕಗಳೇನಲ್ಲ, ಸಿದ್ಧವಸ್ತುಗಳನ್ನು ತೆಗೆದುಕೊಂಡು ಹೆಣೆದ ಪುನರ್‌ರಚನೆಗಳೇ ಅವೆಲ್ಲವೂ ಹೌದು. ಹಾಗಾಗಿ ನನ್ನ ಮಟ್ಟಿಗೆ 'ಪುಗಳೇಂದಿ ಪ್ರಹಸನ' ಅಚ್ಚಕನ್ನಡ ನಾಟಕವೇ ಹೌದು.

ತಮಿಳು ನಾಮಧೇಯದ ಪುಗಳೇಂದಿ ಅಚ್ಚಕನ್ನಡದ ಒಬ್ಬ ಬಡ ಕೂಲಿಯಾಳು. ಈ ನಾಟಕದಲ್ಲಿ ನಾನು ಮೆಚ್ಚಿದ ಸಂಗತಿಯೆಂದರೆ ಪುಗಳೇಂದಿಯ ಅದಮ್ಯ ಜೀವನೋತ್ಸಾಹ. ಅವನು ಭಕ್ತ, ಅವನು ಪ್ರೇಮಿ, ಜೊತೆಗೆ ಎಡಬ. ತಲೆಹರಟೆ, ಎಲ್ಲವೂ ಹೌದು; ಎಲ್ಲವನ್ನೂ ನಗುಮುಖದಿಂದಲೇ ಸಾಧಿಸುತ್ತ ಇತರರನ್ನು ನಗಿಸುತ್ತಾನೆ ಪುಗಳೇಂದಿ. ಈ ನಾಟಕದಲ್ಲಿ ಕನ್ನಡ ಭಾಷೆಯ ಸಹಜ ಲಕೆಯಿದೆ, ನಾಟಕೀಯವಾದ ದೃಶ್ಯಗಳಿವೆ, ಹಾಡುಗಳಿವೆ, ಹಾಸ್ಯವಿದೆ.

ಜನರ ಸದಭಿರುಚಿಗೆ ಧಕ್ಕೆ ಬಾರದ ರೀತಿಯಲ್ಲಿ ಜನರನ್ನು ನಗಿಸುವಲ್ಲಿ 'ಪುಗಳೆಂದಿ ಪ್ರಹಸನ' ಯಶಸ್ವಿಯಾಗುತ್ತದೆ.

'ಪುಗಳೆಂದಿ ಪ್ರಹಸನ'ದ ಸಾಹಿತ್ಯಿಕ ಸ್ಥಾನಮಾನವೇನು? ಈ ಪ್ರಶ್ನೆಯನ್ನು ಕನ್ನಡಿಗನಾಗಿ ಉತ್ತರಿಸುವುದು ಕೊಂಚ ಕಷ್ಟ. ಏಕೆಂದರೆ ಕನ್ನಡಿಗರ ಸಾಹಿತ್ಯಿಕ ಮೌಲ್ಯಗಳನ್ನು ಸ್ಥಾಪಿಸಿದವರು ಇಲ್ಲಿನ ಉದ್ದಾಮ ಕವಿಗಳು. ಹಾಗಾಗಿ ಕಾವ್ಯವಲ್ಲದ್ದನ್ನು ನಾವು ಸಾಹಿತ್ಯವೆಂದು ಒಪ್ಪಿಕೊಳ್ಳಲು ಹಿಂದೆಮುಂದೆ ನೋಡುತ್ತೇವೆ. ಅದರಲ್ಲೂ ಪ್ರಹಸನಗಳನ್ನು! ಶಿವ ಶಿವ! ಆದರೆ ಈ ರೀತಿಯಲ್ಲದ ಭಾಷೆಗಳು ಹಾಗೂ ಸಂಸ್ಕೃತಿಗಳು ಪ್ರಪಂಚದಲ್ಲಿ ಅನೇಕವಿವೆಯಲ್ಲವೇ! ಉದಾಹರಣೆಗೆ ಫ್ರೆಂಚರನ್ನು ಇದೇ ಪ್ರಶ್ನೆ ಕೇಳಿದರೆ ಅವರೇನೆಂದಾರು? ಪ್ರಹಸನಗಳ ಸಮ್ರಾಟ ಮೋಲಿಯರ್ ಫ್ರೆಂಚ್ ಭಾಷೆಯ ಬಹುಮುಖ್ಯ ಸಾಹಿತಿ ಹಾಗೂ ಅತಿದೊಡ್ಡ ನಾಟಕಕಾರ. ಹಾಗಾಗಿ ಫ್ರೆಂಚರು ಮೋಲಿಯರನ ಪ್ರಹಸನಗಳ ಮೂಲಕವೇ ಸಾಹಿತ್ಯವನ್ನು ಅಳೆಯಲು ಕಲಿತಿದ್ದಾರೆ. ಮೋಲಿಯರನ ಬಗ್ಗೆ ಫ್ರೆಂಚರಿಗಿರುವ ಗೌರವ ಎಂತಹದ್ದೆಂದು ತಿಳಿಯಲಿಕ್ಕೆ ಈ ಉದಾಹರಣೆಯನ್ನು ಗಮನಿಸಬಹುದು. ಹತ್ತೊಂಬತ್ತನೆಯ ಶತಮಾನದ ಅಪ್ರತಿಮ ಫ್ರೆಂಚ್ ಕಲಾವಿದ ಹಾಗೂ impressionist ಚಳವಳಿಯ ನೇತಾರ ರೆನುವನಿಗೆ ಗಂಭೀರ ಸಾಹಿತ್ಯವೆಂಬುದು ಬೂಟಾಟಿಕೆಯಾಗಿ ಕಾಣಿಸುತ್ತಿತ್ತಂತೆ. ತನ್ನ ಮಕ್ಕಳು ಅಥವಾ ಜೊತೆಗೆ ದುಡಿಯುವ ಮಾಡೆಲ್‌ಗಳು 'ಗಂಭೀರ' ಸಾಹಿತ್ಯ ಓದುವುದನ್ನು ಕಂಡರೆ ಕಿಡಿಕಿಡಿಯಾಗುತ್ತಿದ್ದನಂತೆ. 'ಮೋಲಿಯರನನ್ನು ಓದಿ, ಕೊಂಚ ಬುದ್ಧಿ ಬಂದರೂ ಬಂದೀತು ನಿಮಗೆ', ಎನ್ನುತ್ತಿದ್ದನಂತೆ ರೆನುವ.

ನಾನೂ ಅದನ್ನೇ ಹೇಳುತ್ತೇನೆ. ನಾವೆಲ್ಲರೂ ಸಾರ್ತ್ರೆ, ಕಾಮೂಗಳ ತುಂಬ ಎಂದು ತಿಳಿಯುತ್ತೇವೆ (ಅವರೂ ಫ್ರೆಂಚ್ ಲೇಖಕರೇ ಹೌದು). ನಮ್ಮದೇ ಭಾಷೆಯ ಕೃತಿಗಳಾದ (ಅವು ಕೆಲವು ರೂಪಾಂತರಗಳಾದರೇನಂತೆ) 'ಸಾಯೋ ಆಟ', 'ಆಷಾಢಭೂತಿ', 'ಕದಡಿದ ನೀರು', 'ವಿಗಡ ವಿಕ್ರಮರಾಯ'ಗಳನ್ನು ಮೆಚ್ಚುವುದನ್ನು ಕಲಿಯೋಣ.

■ ಪ್ರಸನ್ನ, ಕವಿ ಕಾವ್ಯ ಟ್ರಸ್ಟ್, ಹೊನ್ನೇಸರ, ಹೆಗ್ಗೋಡು-೫೭೭ ೪೧೭ ತಾ. ಸಾಗರ ■

ಎರಡು ಕವಿತೆಗಳು

ಲಕ್ಕೂರು ಸಿ. ಆನಂದ

೧. ಪಹರೆ

ಈ ನನ್ನ ಕಣ್ಣನ್ನು ಈ ಕ್ಷಣಕ್ಕೆ ಅಡವಿಟ್ಟೆ
ಹೊಸದೊಂದು ಚಿತ್ರವನು ಹುಡುಕಾಡಲು
ಅಡವಿಟ್ಟ ಕಣ್ಣಿಗೆ ಕಿವಿಮಾತು ಹೇಳಿದೆ
ನಾನು ಬರುವವರೆಗೆ ಕಣ್ಣು ಮುಚ್ಚದಿರಲು

ಹುಡುಕುತ್ತ ಹೊರಟೆ
ಹೊಸದೊಂದು ಚಿತ್ತಾರ
ಒಂದೆರಡು ಕಣ್ಣುರೆಪ್ಪೆ ಕಿತ್ತು ಕಾವಲಿಗಿಟ್ಟು

ಯಾವ ಗಳಿಗೆಯಲ್ಲಾದರೂ
ಗಾಳಿ, ಮಳೆ ಬರಬಹುದೆಂದು
ನನ್ನೆರಡು ಕೈಬೆರಳು ಕಿತ್ತು ಕಣ್ಣ ಮೇಲೆ ಇಟ್ಟು

ಮಾಗದ ಮಾತುಗಳ ಸೆಳೆಕ ಬೆಳಕಿನ ನಡುವೆ
ನನ್ನೆರಡು ಹೆಜ್ಜೆಗಳು ನಡೆದಿತ್ತು ಬಯಲಲ್ಲಿ
ಹೊಡೆದ ಕನಸುಗಳೆಲ್ಲಾ ಅಲ್ಲಲ್ಲಿ ಚೆಲ್ಲಾಡಿ
ಕಣ್ಣೊಡೆದ ಮಣ್ಣಲ್ಲಿ ಚಿಗುರುತ್ತಿತ್ತು

ಈ ಸಂಜೆಗೆ ಬರಬೇಕು
ಕಣ್ಣು ಕಾಯುತ್ತಿರುತ್ತದೆಯೆಂದು
ಹೆಜ್ಜೆಗೆ ಹೇಳಿದೆ,
ತೆರೆದಿಟ್ಟ ಕಣ್ಣುಗಳು ತಡಕಾಡುತ್ತಿದ್ದಂತೆ
ಬೆಸೆದುಕೊಂಡ ಮೋಡದಲ್ಲಿ ಸಣ್ಣ
ಬಿರುಕಿನ ನೋವು ಮುಲುಗಿತು.

ಸುರಿಯಿತು, ಸುರಿಯಿತು
ಅಗಾಧ ಜಲಸೃಷ್ಟಿ, ಹಿಂದೆಂದೂ ಇಲ್ಲದಂತಹ ಮಳೆ
ಕಾವಲಿಗಿಟ್ಟ ಕೈಬೆರಳು ಕದಲಾಡಿ, ಮುಕ್ಕಾಗಿ
ಅನಾಥವಾಗಿ ಬಿದ್ದುಕೊಂಡಿತ್ತು ಕಣ್ಣೆನಡಿಯಲ್ಲಿ

ತೆರೆದಿಟ್ಟ ಬಯಲಲ್ಲಿ ತಡಕಾಡಿ
ಒಂದಷ್ಟು ಚಿತ್ರಗಳ ಬೇಗ-ಭೇಗನೆ ಬೆರಳಿಲ್ಲದ
ಬೊಗಸೆ ತುಂಬಿಕೊಂಡೆ

ಬಿರುಕು ದಾರಿಯ ಮೇಲೆ
ಹೆಜ್ಜೆ ಬೆಳೆಸಿದೆ ನಾನು
ಕಣ್ಣು ಸೇರುವ ತವಕ ಎದೆಯ ಒಳಗೆ

ಅರೆ! ನನ್ನ ಕಣ್ಣು ನಾಪತ್ತೆಯಾಗಿತ್ತು
ಎಲ್ಲೋ ಬಚ್ಚಿಟ್ಟುಕೊಂಡಿದೆಯೆಂದು
ಸುತ್ತ-ಮುತ್ತ ಕಣ್ಣಿಗೆ ತಡಕಾಡಿದೆ

ಪಹರೆಗಿಟ್ಟ ಬೆರಳು
ಮುಕ್ಕಾಗಿ ಮುರಿದು ಕಣ್ಣೆನಡಿಯಲ್ಲಿ
ಅನಾಥವಾಗಿ ಬಿದ್ದುಕೊಂಡಿದೆ

ಬಿದ್ದ ಆ ನನ್ನ ಕಣ್ಣಿನ ತುಂಬ
ಜಗದ ನಲಿವಿನ ಚಿತ್ರ ತುಂಬಿಕೊಂಡು
ಆ ಕಣ್ಣು ತುಳುಕಾಡಿದೆ.

೨. ಚಿಲಕವಿಲ್ಲದ ಕಣ್ಣು

ತೆರೆದುಕೊಳ್ಳುವ ಎದೆಯೊಳಗೆ
ಕೂಡಿಟ್ಟ ಕೋಟಿ ಕನಸು, ನೋವುಗಳು
ಈ ಕ್ಷಣಕ್ಕಾದರೂ ಮಾತಾಡಲಿ
ಬಚ್ಚಿಟ್ಟುಕೊಂಡ ಬೊಗಸೆಯೊಳಗಿನ
ಚಿತ್ರಗಳು ನನ್ನ ಕಣ್ಣ ಸೆಳಕಿನೊಂದಿಗೆ
ಒಂದಿಷ್ಟೆ ಇಷ್ಟು ಮಾತಾಡಲಿ
ಕಾಲವೃತ್ತಾಂತದಲಿ ಕಳೆದುಕೊಂಡ
ಗಳಿಗೆಗಳು ಕಲೆಯಾಕಿಕೊಳ್ಳುವ
ಕ್ಷಣಗಳಿಗಾಗಿ ತಡಕಾಡಲಿ
ತುಕ್ಕು ಹಿಡಿದ ಮಾತುಗಳು
ಈ ನೆರಳ ಬದುಕ ಕತ್ತಲಿನೊಂದಿಗೆ
ಚಣ ಹೊತ್ತಾದರೂ ಪಿಸುಗುಟ್ಟಲಿ
ಊರಿ ಹೋದ ಹೆಜ್ಜೆ
ಹೂತಿಟ್ಟ ಕನಸೊಂದಿಗೆ
ಒಂದೇ ಒಂದು ಸಾರಿ ಕಣ್ಣು ಮಿಟುಕಿಸಲಿ
ತೆರೆದಿಟ್ಟ ಕಣ್ಣುಗಳು
ಯಾರ ಹಂಗು ಇಲ್ಲದೆ
ಒಂದಷ್ಟು ಚಿತ್ರಗಳನ್ನು ಕಣ್ಣಿ ತುಂಬಿಕೊಳ್ಳಲಿ
ಕಾಡುವ ನಾಳೆಗಳು
ಹೀಗೆ ಕನವರಿಸಿಕೊಳ್ಳುತ್ತ
ಈ ಕ್ಷಣದ ಚೆಲುವನ್ನು ಹಿಡಿದಿಡಲಿ
ಚಿಲಕವಿಲ್ಲದ ತುಟಿಗಳು
ಹೊರಳಲಾಗದ ದನಿಗೆ
ಈ ಬಯಲ ಬಗಲಲ್ಲಿ ತಡಕಾಡಲಿ
ಈ ನೆಲದ ಬಯಲಲ್ಲಿ
ಸೋತ ಮಣ್ಣಿನ ಮೇಲೆ
ಹೊಸದಾದ ಗೆರೆಗಳು ಮೂಡಿ ಬರಲಿ
ಕಳೆದು ಹೋದ ಗಳಿಗೆ
ಕುಂಟೇ ಬಿಲ್ಲೆಯಾಡುತ್ತ
ಮತ್ತದೆ ಕಣ್ಣಿನ ಬಳಿಗೆ ಬರಲಿ

■ ಲಕ್ಕೂರು ಸಿ. ಆನಂದ : 'ಪದ್ಮಗೌರಿ', ಪೊಲೀಸ್ ಠಾಣೆಯ ಎದುರು
ಲಕ್ಕೂರು ಅಂಚೆ-೫೬೩ ೧೬೦, ತಾ. ಮಾಲೂರು, ಜಿ. ಕೋಲಾರ ■

ಸಿ ಡಿ ಎನ್ : ಒಂದು ಮಧುರ ನೆನಪು

ಶ್ರೀನಿವಾಸ್ ವಿ. ಸುತ್ರಾವೆ

ಸಿಡಿಎನ್ ಎಂದೇ ಪ್ರಸಿದ್ಧರಾಗಿದ್ದ ಪ್ರೊ. ಸಿ. ಡಿ. ನರಸಿಂಹಯ್ಯನವರು ನಿಧನ ಹೊಂದುವ ಒಂದು ವಾರದ ಮುಂಚೆಯಷ್ಟೇ ನಾನು ಅವರನ್ನು ಮೈಸೂರಿನ ಅವರ 'ಧ್ವನ್ಯಾಲೋಕ'ದಲ್ಲಿ ಕಂಡುಬಂದದ್ದು ಯೋಗಾಯೋಗವೇ ಸರಿ. ಸಿಡಿಎನ್ ಅವರಿಗೆ ೮೩ ವರ್ಷವಾಗಿತ್ತು. ಅವರ ಹಳೆಯ ವಿದ್ಯಾರ್ಥಿಯಾಗಿದ್ದ ನನಗೆ ಅವರ ನೆನಪು ಇತ್ತೀಚೆಗೆ ಬಹಳ ಬರುತ್ತಿತ್ತು. ಒಂದು ಸಲ ಮೈಸೂರಿಗೆ ಹೋಗಿ ಅವರನ್ನು ನೋಡಿಕೊಂಡು ಬರೋಣವೆಂದು ಹೋದೆ. ಇದೇ ಏಪ್ರಿಲ್ ೪ ರಂದು ಅವರ ಮನೆಯಲ್ಲಿ ಭೇಟಿಯಾದೆ. ಬಹಳ ದಿನಗಳ ನಂತರ ತಮ್ಮ ಹಳೆಯ ವಿದ್ಯಾರ್ಥಿಯನ್ನು ಕಂಡು, "ಏನು ಮೈಸೂರಿಗೆ ಬಂದದ್ದು?" ಎಂದು ಕೇಳಿದರು. ನಾನು, "ಏನಿಲ್ಲ, ಸರ್, ನಿಮ್ಮನ್ನು ನೋಡಿಕೊಂಡು ಹೋಗೋಣ ಅಂತ ಬಂದೆ, ಅಷ್ಟೆ." ಎಂದೆ. ತುಂಬ ಖುಷಿಪಟ್ಟರು. ಒಂದು ವಾರದ ನಂತರ ಅವರ ನಿಧನದ ಸುದ್ದಿ ಕೇಳಿದಾಗ ನನಗೆ ಅಚ್ಚರಿ. ಜೊತೆಗೆ ಬೇಸರ. ಸಿಡಿಎನ್ ಅವರು ಇವತ್ತು ನಮ್ಮೊಡನೆ ಇಲ್ಲದಿದ್ದರೂ, ನಮ್ಮ ಮೇಲಿನ ಅವರ ಪ್ರಭಾವವಂತೂ ಶಾಶ್ವತವಾಗಿರುತ್ತದೆ.

ಸಿಡಿಎನ್ ಅವರು ಅಂತರ್‌ರಾಷ್ಟ್ರೀಯ ಖ್ಯಾತಿ ಪಡೆದ ಇಂಗ್ಲಿಷ್ ಪ್ರಾಧ್ಯಾಪಕರು. ಮೈಸೂರು ಮತ್ತು ಕೇಂಬ್ರಿಜ್ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ಪಡೆದವರು; ಮೈಸೂರು ಮತ್ತು ಬೆಂಗಳೂರು ವಿಶ್ವವಿದ್ಯಾಲಯಗಳಿಂದ ಗೌರವ ಡಾಕ್ಟರೇಟ್ ಪಡೆದವರು; ಪದ್ಮಭೂಷಣ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪಡೆದವರು. ಅತ್ಯಂತ ಕಿರಿಯ ವಯಸ್ಸಿನಲ್ಲೇ ಪ್ರಾಧ್ಯಾಪಕರಾದ ಅತ್ಯಂತ ವಿರಳ ವ್ಯಕ್ತಿಗಳಲ್ಲಿ ಸಿಡಿಎನ್ ಒಬ್ಬರು. ಸುಮಾರು ಮೂವತ್ತು ವರ್ಷಗಳಷ್ಟು ಸುದೀರ್ಘ ಕಾಲ ಅವರು ಪ್ರೊಫೆಸರ್ ಆಗಿಯೇ ಸೇವೆ ಸಲ್ಲಿಸಿದರು. (ಸಾಮಾನ್ಯವಾಗಿ ಜನ ಲೆಕ್ಚರರ್ ಆಗಿ, ಅನಂತರ ರೀಡರ್ ಆಗಿ, ಅದರ ನಂತರ ಪ್ರೊಫೆಸರ್ ಆಗುವ ಹೊತ್ತಿಗೆ ಹೆಚ್ಚು ಕಡಿಮೆ ನಿವೃತ್ತಿಯ ಅಂಚಿನಲ್ಲಿರುತ್ತಾರೆ.)

ಸಿಡಿಎನ್ ಅವರು ಯಶಸ್ಸಿನ ಮೆಟ್ಟಿಲುಗಳನ್ನು ಹೇಗೆ ಶೀಘ್ರವಾಗಿ ಏರಿದರೆಂಬುದನ್ನು ಗಮನಿಸುವುದೂ ಕುತೂಹಲದ ಸಂಗತಿಯೆ. ಅವರು ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿದ್ದಾಗ, ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪಡೆದು ಬಂದಿದ್ದ ಹಾಗೂ ಸಿಡಿಎನ್ ಅವರ ವಿದ್ಯಾಗುರುಗಳಾಗಿದ್ದ W. G. Eagleton ಎಂಬ ಇಂಗ್ಲೆಂಡಿನ ವ್ಯಕ್ತಿ ಸಿಡಿಎನ್ ಅವರಿಗೆ ಕೇಂಬ್ರಿಜ್‌ಗೆ ಕಳಿಸಲು ಒಂದು ಸ್ಕಾಲರ್‌ಶಿಪ್‌ನ ವ್ಯವಸ್ಥೆ ಮಾಡಿದರು. ಅಲ್ಲಿ ಸಿಡಿಎನ್ ಅವರ ಅದೃಷ್ಟವೆಂದರೆ ಜಗತ್ಪ್ರಖ್ಯಾತ ಇಂಗ್ಲಿಷ್ ವಿಮರ್ಶಕರಾದ ಎಫ್. ಆರ್. ಲೀವೀಸ್‌ರ ವಿದ್ಯಾರ್ಥಿಯಾದದ್ದು. ಲೀವೀಸರ ಶಿಫಾರಸ್ಸಿನ ಮೇಲೆ ಸಿಡಿಎನ್ ಅವರು ಅಮೆರಿಕಾದ ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದ ಫೆಲೋಶಿಪ್ ಪಡೆದರು. ಅಲ್ಲಿ ಅಮೆರಿಕನ್ ಸಾಹಿತ್ಯದ ಅಧ್ಯಯನವೂ ನಡೆಯಿತು. ಅಲ್ಲಿಂದ ಮುಂದೆ ಅವರು ಭಾರತಕ್ಕೆ ಮರಳಿ, ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾದರು. ಅವರು ಪ್ರಾಧ್ಯಾಪಕರಾಗಿದ್ದ ಅವಧಿಯಲ್ಲಿ ಆಸ್ಟ್ರೇಲಿಯಾ, ಇಂಗ್ಲೆಂಡ್, ಸ್ವಿಟ್ಜರ್‌ಲೆಂಡ್, ಅಮೆರಿಕಾ, ಇಟಲಿ, ಶ್ರೀಲಂಕಾ

ಮುಂತಾದ ದೇಶಗಳಿಗೆ ಸಂದರ್ಶಕ ಪ್ರಾಧ್ಯಾಪಕರಾಗಿ ಹೋಗಿ ಬಂದರು. ಸಿಡಿಎನ್ ಅವರು ಅತ್ಯಂತ ಆಕರ್ಷಕ ಶೈಲಿಯಲ್ಲಿ ಜನರನ್ನು ಮೋಡಿಗೊಳಿಸುವ ರೀತಿಯಲ್ಲಿ ಭಾಷಣ ಮಾಡುತ್ತಿದ್ದರು, ಪಾಠ ಮಾಡುತ್ತಿದ್ದರು.

ಭಾರತದಲ್ಲಿ ಇಂಗ್ಲಿಷ್ ಸಾಹಿತ್ಯಬೋಧನೆಯ ವಿಷಯದಲ್ಲಿ ಅವರು ತಂದ ಬದಲಾವಣೆಗಳು, ಮಾಡಿದ ಹೊಸ ಪ್ರಯೋಗಗಳು ಭಾರತೀಯ ವಿಶ್ವವಿದ್ಯಾಲಯಗಳ ಪಠ್ಯಕ್ರಮದ ದಿಕ್ಕನ್ನೇ ಬದಲಾಯಿಸುವಷ್ಟು ಪರಿಣಾಮಕಾರಿಯಾಗಿದ್ದುವು. ಇಂಗ್ಲಿಷ್ ಸಾಹಿತ್ಯದ ಜೊತೆಗೆ ಅಮೆರಿಕನ್ ಲಿಟರೇಚರ್, ಆಸ್ಟ್ರೇಲಿಯನ್ ಲಿಟರೇಚರ್, ಇಂಡಿಯನ್ ರೈಟಿಂಗ್ ಇನ್ ಇಂಗ್ಲಿಷ್– ಇವೆಲ್ಲವನ್ನೂ ನಮಗೆ ಪರಿಚಯಿಸಿದವರೇ ಸಿಡಿಎನ್ ಎಂದರೆ ಅತ್ಯುಕ್ತಿಯ ಮಾತಲ್ಲ. ಆರ್. ಕೆ. ನಾರಾಯಣ್ ಮತ್ತು ರಾಜಾ ರಾವ್ ಅಂತಹ ಪ್ರಸಿದ್ಧ ಭಾರತೀಯ ಇಂಗ್ಲಿಷ್ ಲೇಖಕರ ನಿಕಟ ಸಂಪರ್ಕ ಹೊಂದಿದ್ದ ಸಿಡಿಎನ್ ಅವರು ಆ ಲೇಖಕರ ಕಾದಂಬರಿಗಳನ್ನು ಪಠ್ಯವನ್ನಾಗಿಯೂ ಮಾಡಿದರು. ನೆಹರು ಅವರ ಸಾಹಿತ್ಯವಂತೂ ಸಿಡಿಎನ್ ಅವರಿಗೆ ಅಚ್ಚುಮೆಚ್ಚು.

ನಮಗೆ ಮೊಟ್ಟಮೊದಲಿಗೆ ಇಂಗ್ಲಿಷಿನ ನವ್ಯ ಸಾಹಿತ್ಯದ ಪರಿಚಯವಾದದ್ದೂ ಸಿಡಿಎನ್ ಅವರಿಂದಲೇ. ಶೆಲ್ಲಿ, ವರ್ಡ್ಸ್‌ವರ್ತ್‌ರ ಕಾವ್ಯಕ್ಕೆ ನಮ್ಮ ಅಭ್ಯಾಸ ಹೆಚ್ಚು ಕಡಿಮೆ ನಿಂತು ಹೋಗಿದ್ದಾಗ ಸಿಡಿಎನ್ ನಮಗೆ ಎಲಿಯಟ್, ಯೇಟ್ಸ್ ಮತ್ತು ಹಾಪ್‌ಕಿನ್ಸ್ ಮುಂತಾದ ಕವಿಗಳ ಕಾವ್ಯವನ್ನು ಪರಿಚಯಿಸಿದರು (ಅಂದಹಾಗೆ, ಬ್ಲೇಕ್ ಮತ್ತು ಡನ್‌ನಂತಹ ಹಳೆಯ ಇಂಗ್ಲಿಷ್ ಕವಿಗಳ ಬಗೆಗಿನ ಹೊಸ ನೋಟಗಳನ್ನೂ ನಮ್ಮ ಮುಂದೆ ತೆರೆದಿಟ್ಟರು).

ಕಲಿಯುವಿಕೆ, ಬೋಧನೆ, ಸಂಶೋಧನೆಯ ವಿಷಯದಲ್ಲಿ ಸಿಡಿಎನ್ ಅವರು ಒತ್ತು ಕೊಡುತ್ತಿದ್ದುದು ಶ್ರೇಷ್ಠ ಗುಣಮಟ್ಟಕ್ಕಾಗಿ. Standardನ ವಿಷಯದಲ್ಲಿ ಅವರದು ರಾಜಿಯ ಪ್ರಶ್ನೆಯೇ ಇಲ್ಲ. ಅವರ ಅನೇಕ ಅಭಿಪ್ರಾಯಗಳು ಬೇರೆಯವರಿಗೆ ಸಮ್ಮತವಾಗದಿದ್ದರೂ, ಸಿಡಿಎನ್ ಯಾವಾಗಲೂ ಅವರಿಗೆ ಗೌರವ ಕೊಟ್ಟೇ ಚರ್ಚೆಯನ್ನು ಮುಂದುವರಿಸುತ್ತಿದ್ದರು.

ಸಿಡಿಎನ್ ಅವರ ಇನ್ನೊಂದು ವಿಶೇಷ ಗುಣವೆಂದರೆ ಅವರು ತಮ್ಮ ವಿದ್ಯಾರ್ಥಿಗಳನ್ನು ಪ್ರೀತಿಯಿಂದ, ಗೌರವದಿಂದ ಕಾಣುತ್ತಿದ್ದ ರೀತಿ. ಇದನ್ನು ವಿವರಿಸಲು ನಾನು ಪುನಃ ನನ್ನ ವಿಷಯದಿಂದಲೇ ಪ್ರಾರಂಭ ಮಾಡಬೇಕಾಗುತ್ತದೆ. ಮಹಾರಾಜಾ ಕಾಲೇಜಿನ ವಿಶಿಷ್ಟ ಪರಂಪರೆಯ ಬಗ್ಗೆ ನಾನು ದಾವಣಗೆರೆಯಲ್ಲಿ ಪಿ.ಯು.ಸಿ. ಓದುತ್ತಿದ್ದಾಗಲೇ ಕೇಳಿದ್ದೆ. ನಾನು ಕೂಡ ಅಲ್ಲಿಯೇ ಓದಬೇಕೆಂಬ ಹಂಬಲದಿಂದ, ದಾವಣಗೆರೆಯಿಂದ ಮೈಸೂರಿಗೆ ಹೋಗಿ ಮಹಾರಾಜಾ ಕಾಲೇಜಿನಲ್ಲಿ ಇಂಗ್ಲಿಷ್ ಮೇಜರ್ ತೆಗೆದುಕೊಂಡು ಬಿ.ಎ. ಓದಲು ಪ್ರಾರಂಭಿಸಿದಾಗ ನನಗೆ ಅದೊಂದು ಹೊಸ, ಅಪೂರ್ವ ಅನುಭವ. ಅದು ೧೯೬೧ ರಲ್ಲಿ. ಆಗ ಸಿಡಿಎನ್ ಅವರು ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರೂ ಹೌದು. ಮತ್ತು ನಮ್ಮ– ಅಂದರೆ ಇಂಗ್ಲಿಷ್ ಮೇಜರ್ ಹುಡುಗರ– ಗುರುಗಳೂ ಹೌದು. ಯಾವಾಗಲೂ ಟಿಪ್‌ಟಾಪ್ ಆಗಿ ಸೂಟು, ಬೂಟು, ಟೈಯಲ್ಲಿರುತ್ತಿದ್ದ ಅವರ ಆಕರ್ಷಕ ವ್ಯಕ್ತಿತ್ವ ಮತ್ತು ಮಾತಿನ ಶೈಲಿಗೆ ನಾವು ವಿದ್ಯಾರ್ಥಿಗಳು ಮಾರುಹೋಗಿದ್ದೆವು. ಅವರು ಪೋರ್ಟಿಕೋದಲ್ಲಿ ಕಾರು ನಿಲ್ಲಿಸಿ,

ಮೆಟ್ಟಿಲು ಹತ್ತಿ ತಮ್ಮ ಛೇಂಬರಿಗೆ ಹೋಗುವಾಗ ನಾವು ಅವರಿಗೆ ನಮಸ್ಕರಿಸಿದರೆ, ಅವರು ನಮಗೆ 'ಹಲೋ' ಎಂದೋ, ಮುಗುಳ್ನಕ್ಕೋ, ಮುನ್ನಡೆಯುತ್ತಿದ್ದರು.

ನಾವು ಮಹಾರಾಜಾಸ್‌ನಲ್ಲಿ ಅವರಿಂದ ಪಾಠಕ್ಕಿಂತ ಹೆಚ್ಚಾಗಿ ಶಿಷ್ಟಾಚಾರ ಹಾಗೂ ಸನ್ನಡೆಯನ್ನು ಕಲಿತವರು. ಅವರು ಸಣ್ಣಪುಟ್ಟ ವಿಷಯಗಳಿಗೂ ಎಷ್ಟು ಮಹತ್ವ ಕೊಡುತ್ತಿದ್ದ ರೆಂಬುದಕ್ಕೆ ಇಲ್ಲೊಂದು ಸಣ್ಣ ಉದಾಹರಣೆ. ಒಂದು ದಿನ ನಮಗೆ ಕ್ಲಾಸ್ ಇರಲಿಲ್ಲ. ಅವತ್ತು ಆ ಕ್ಲಾಸಿನ ಲೆಕ್ಚರರ್ ಇನ್ನೂ ಬಂದಿರಲಿಲ್ಲ. (ಬಹುಶಃ ಅವರು ಅಂದು ರಜದ ಮೇಲಿದ್ದಿರಬೇಕು.) ನಾವು ಕಾರಿಡಾರಿನಲ್ಲಿ ಸುಮ್ಮನೆ ಹರಟುತ್ತಾ ನಿಂತಿದ್ದೆವು. ಆಗ ಆ ಕಡೆ ಸಿಡಿಎಸ್ ಬಂದವರು ನಮಗೆ ಕ್ಲಾಸಿಲ್ಲದ್ದನ್ನು ತಿಳಿದು, "Whose class did you have?" ಎಂದು ಕೇಳಿದರು. ನಮ್ಮಲ್ಲಿ ಒಬ್ಬ ಹುಡುಗ, "Ramamoorthy's class, sir," ಎಂದ. ಆಗ ಸಿಡಿಎಸ್ ಅವರು ಆ ಹುಡುಗನಿಗೆ, "My dear young man, you must say Mr. Ramamoorthy" ಎಂದರು. ಅಂದರೆ, ಇಂಗ್ಲಿಷಿನಲ್ಲಿ ಮಾತಾಡುವಾಗ ದೊಡ್ಡವರ ಬಗ್ಗೆ ಗೌರವ ಸೂಚಕವಾಗಿ 'Mr.' ಎಂಬುದನ್ನು ಉಪಯೋಗಿಸಬೇಕು ಎಂದು ಅವರು ನಮಗೆ ಆ ರೀತಿ ತಿಳಿಸಿದ್ದು ಕೂಡ ಎಷ್ಟು ನಯವಾದ ರೀತಿಯಲ್ಲಿ ಅಲ್ಲವೆ? ಸಿಡಿಎಸ್ ಅವರು ಎಷ್ಟೇ ದೊಡ್ಡ ಹುದ್ದೆಯಲ್ಲಿದ್ದರೂ ತಮ್ಮ ಸಹೋದ್ಯೋಗಿಗಳಿಗೆ ತುಂಬ ಗೌರವ ಕೊಡುತ್ತಿದ್ದರು. ವಿದ್ಯಾರ್ಥಿಗಳಿಗೂ ಅಷ್ಟೆ. ಸಿಡಿಎಸ್ ಅವರ ಶಿಷ್ಯಂದಿರು ಇಂಗ್ಲಿಷ್ ಅಧ್ಯಾಪಕರಾಗಿ ಎಲ್ಲಿಯೇ ಕೆಲಸ ಮಾಡಿರಲಿ, ಮಾಡುತ್ತಿರಲಿ, ಅವರು ಜನಪ್ರಿಯ ಹಾಗೂ ಯಶಸ್ವೀ ಅಧ್ಯಾಪಕರೆಂದು ಕರೆಸಿಕೊಳ್ಳಲು ಅವರ ಮೇಲಾಗಿರುವ ಸಿಡಿಎಸ್ ಅವರ ಪ್ರಭಾವವೇ ಮುಖ್ಯ ಕಾರಣವೆಂದು ಹೇಳುವ ಅಗತ್ಯವಿಲ್ಲ.

ಮಹಾರಾಜಾ ಕಾಲೇಜಿಗೆ ದೊಡ್ಡ ಇತಿಹಾಸವಿದೆ. ಡಾ. ಎಸ್. ರಾಧಾಕೃಷ್ಣನ್, ಬಿ.ಎಂ.ಶ್ರೀ. ಸೇರಿದಂತೆ ನಾಡಿನ, ಹೊರನಾಡಿನ ಅನೇಕ ದೊಡ್ಡ ಪಂಡಿತರು ಪಾಠ ಮಾಡಿರುವ ಕಾಲೇಜು ಅದು. ಅಂದಹಾಗೆ, ಸಿಡಿಎಸ್ ಅವರು ಅಲ್ಲಿ ಪ್ರಿನ್ಸಿಪಾಲರಾಗಿದ್ದಾಗ ಆ ಕಾಲೇಜಿಗೆ ಒಂದು ಹೊಸ ರೂಪವನ್ನೇ ಕೊಟ್ಟರು. ಬಡ ವಿದ್ಯಾರ್ಥಿಗಳಿಗಾಗಿ ಅತ್ಯಂತ ಕಡಿಮೆ ದರದಲ್ಲಿ 'ಹೆಲ್ತ್ ಕಿಚನ್' ಅಂತ ಊಟದ ವ್ಯವಸ್ಥೆಯನ್ನು ಪ್ರಾರಂಭಿಸಿದ್ದರು. ಡ್ರಾಮಾ ಕ್ಲಬ್, ಲಿಟರರಿ ಕ್ಲಬ್ ಮುಂತಾದವುಗಳಿಗೆ ಅವರದೇ ಪ್ರೋತ್ಸಾಹ ಮತ್ತು ಮಾರ್ಗದರ್ಶನ. ನಮ್ಮ ಇಂಗ್ಲಿಷ್ ಅಧ್ಯಾಪಕರಾಗಿದ್ದ ಪ್ರೊ. ಆರ್. ಗುರುರಾಜಾ ರಾವ್ ಅವರೇ ಡ್ರಾಮಾ ಕ್ಲಬ್ಬಿನ ನಿರ್ದೇಶಕರು. ನಮ್ಮ ಇತರೆ ಇಂಗ್ಲಿಷ್ ಉಪನ್ಯಾಸಕರಾದ ಡಾ. ಸಿ. ಡಿ. ಗೋವಿಂದರಾವ್, ಎಂ. ರಾಮರಾವ್, ಎಸ್. ಬಾಲಸುಬ್ರಹ್ಮಣ್ಯ, ಕೆ. ಕೃಷ್ಣ ಐಯಂಗಾರ್, ಎಂ. ಮೈಲಾರಿ ರಾವ್, ಯು. ಆರ್. ಅನಂತಮೂರ್ತಿ, ಪಿ. ರಾಮಮೂರ್ತಿ– ಇವರೆಲ್ಲ ಪ್ರಖ್ಯಾತರು.

ಸಿಡಿಎಸ್ ಅವರು ಪ್ರತಿ ವರ್ಷ ಹೊಸ ವಿದ್ಯಾರ್ಥಿಗಳಿಗಾಗಿ 'Freshmen's Day' ಅಂತ ಏರ್ಪಡಿಸಿ ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳಿಗೆ, ಉಪನ್ಯಾಸಕರಿಗೆ, ಕಛೇರಿಯವರಿಗೆ ಟೀ ವ್ಯವಸ್ಥೆ ಮಾಡಿ, ಕಾಲೇಜಿನ ಬಗ್ಗೆ ಒಂದೆರಡು ಮಾತಾಡಿ, ಹೊಸ ವಿದ್ಯಾರ್ಥಿಗಳನ್ನು ಆದರದಿಂದ ಬರಮಾಡಿಕೊಳ್ಳುತ್ತಿದ್ದರು. ನಾವು ಮುಂದೆ ಎಂ.ಎ. ಓದಲು ಮಾನಸಗಂಗೋತ್ರಿಗೆ ಹೋದಾಗ, ಅಲ್ಲಿಯೂ ಸಿಡಿಎಸ್ ಅವರು ಇಂಗ್ಲಿಷ್ ವಿಭಾಗದ ಮುಖ್ಯಸ್ಥರಾಗಿದ್ದು, ನಮಗೆ–

ಅಂದರೆ ಹೊಸ ಬ್ಯಾಚಿನ ಹುಡುಗರಿಗೆ– ಚಹಾ ಕೂಟವನ್ನು ತಮ್ಮ ಮನೆಯಲ್ಲಿ ಏರ್ಪಡಿಸಿದ್ದರು.

ನಾವು ಎಂ.ಎ. ಓದುವಾಗ ಡಿಪಾರ್ಟ್‌ಮೆಂಟಿನಲ್ಲಿ ಯಾವುದೇ ರಾಷ್ಟ್ರೀಯ ಅಥವ ಅಂತರ್‌ರಾಷ್ಟ್ರೀಯ ಮಟ್ಟದ ಸೆಮಿನಾರ್ ಆಗಿರಲಿ. ಅದರಲ್ಲೂ ನಾವು ವಿದ್ಯಾರ್ಥಿಗಳು ಕೂಡ ಚರ್ಚೆಯಲ್ಲಿ ಭಾಗವಹಿಸುವಂತೆ ಅವರು ಉತ್ತೇಜಿಸುತ್ತಿದ್ದರು. ವಿಚಾರಗೋಷ್ಠಿಗಳನ್ನು ಸಿಡಿಎನ್ ಅವರು ಅತ್ಯಂತ ಸಮರ್ಥ ಹಾಗೂ ಆಕರ್ಷಕ ರೀತಿಯಲ್ಲಿ ನಿರ್ವಹಿಸುತ್ತಿದ್ದರು. ಆ ರೀತಿಯನ್ನು ನಾನು ಇದುವರೆಗೂ ಬೇರೆ ಎಲ್ಲಿಯೂ ನೋಡಿಲ್ಲವೆಂದರೆ ಅದು ಖಂಡಿತ ಉತ್ಪ್ರೇಕ್ಷೆಯ ಮಾತಲ್ಲ.

ಸಿಡಿಎನ್ ಅವರಿಗೆ ತುಂಬ ಪ್ರಿಯವಾದ ವಿಷಯವೆಂದರೆ ವಿಮರ್ಶೆ. ಎಫ್. ಆರ್. ಲೀವೀಸ್ ಅವರ 'ಸ್ಕ್ರೂಟಿನಿ' ಮತ್ತು ಟಿ. ಎಸ್. ಎಲಿಯಟ್ ಅವರ 'ಕ್ರೈಟೀರಿಯನ್' ಪತ್ರಿಕೆಗಳಿಂದ ಸ್ಫೂರ್ತಿ ಪಡೆದ ಸಿಡಿಎನ್ ಅವರು 'ದ ಲಿಟರರಿ ಕ್ರೈಟೀರಿಯನ್' ಎಂಬ ಸಾಹಿತ್ಯಿಕ ಪತ್ರಿಕೆಯನ್ನು ಈಗ ಐವತ್ತು ವರ್ಷಗಳಿಂದಲೂ ನಡೆಸಿಕೊಂಡು ಬರುತ್ತಿದ್ದರು.

ವೈಯಕ್ತಿಕವಾಗಿ, ನನಗೆ ಸಿಡಿಎನ್ ಅವರ ಸಂಪರ್ಕ ಸದಾ ಸಾಧ್ಯವಾಗದಿದ್ದರೂ, ಆಗಾಗ್ಗೆ ಪತ್ರವ್ಯವಹಾರದ ಮೂಲಕ ನಾವು ಆತ್ಮೀಯ ಸಂಪರ್ಕವನ್ನು ಹೊಂದಿದ್ದೆವು. ಇಂಗ್ಲಿಷ್, ರಷ್ಯನ್, ನೈಜೀರಿಯನ್, ನಾರ್ವೇಜಿಯನ್ ಹಾಗೂ ಭಾರತೀಯ ಸಾಹಿತ್ಯದಲ್ಲಿನ ಶ್ರೇಷ್ಠ ಕೃತಿಗಳ ನನ್ನ ಕನ್ನಡ ಅನುವಾದ ಕಾರ್ಯದಲ್ಲಿ ಆಸಕ್ತಿ ತೋರಿದ್ದರು. ಅಲ್ಲದೆ, ಐರಿಷ್ ನಾಟಕಕಾರ ಜೆ. ಎಂ. ಸಿಂಗ್‌ನ ಶ್ರೇಷ್ಠ ನಾಟಕ 'ರೈಡರ್ಸ್ ಟು ದ ಸೀ'ಯನ್ನೂ ನಾನು ಇತ್ತೀಚೆಗೆ ಅನುವಾದಿಸಲು ಅವರೇ ನನಗೆ ಸೂಚಿಸಿದ್ದು ಎಂಬುದನ್ನು ಇಲ್ಲಿ ಪ್ರಾಸಂಗಿಕವಾಗಿ ತಿಳಿಸಬಯಸುತ್ತೇನೆ. ತಮ್ಮ ೮೦-೮೫ ರ ಇಳಿವಯಸ್ಸಿನಲ್ಲೂ ಅವರು ಅತ್ಯಂತ ಶ್ರದ್ಧೆಯಿಂದ, ತಮ್ಮದೇ ಕೈಬರಹದಲ್ಲಿ, ಪ್ರೀತಿ ತುಂಬಿದ ಪತ್ರಗಳನ್ನು ನನಗೆ ಬರೆದಿದ್ದಾರೆ. ಅಂದಹಾಗೆ, ಅವರಿಗೆ ಎಷ್ಟೇ ವಯಸ್ಸಾಗಿದ್ದಿರಲಿ, ಅವರ ಸಹಾಯಕ್ಕೆ ಮನೆಯಲ್ಲಿ ಬೇರೆಯವರಿದ್ದರೂ ಕೂಡ, ಪತ್ರವ್ಯವಹಾರಕ್ಕೆ ಸಂಬಂಧಪಟ್ಟ ಎಲ್ಲ ಸಣ್ಣಪುಟ್ಟ ಕೆಲಸಗಳನ್ನು ತಾವೇ ಸ್ವತಃ ಮಾಡಬಯಸುತ್ತಿದ್ದರು. ಇಲ್ಲಿ ನಾನು ಕೊಟ್ಟಿರುವುದಾದಂತಹ ಸಣ್ಣಪುಟ್ಟ ವಿವರಗಳೂ ಅವರ ದೊಡ್ಡ ವ್ಯಕ್ತಿತ್ವದ ಕುರುಹುಗಳು. ಸಿಡಿಎನ್ ಅವರಂಥ ದೊಡ್ಡ ಪ್ರಾಧ್ಯಾಪಕರ ಶಿಷ್ಯನಾದ ನಾನು ಹೇಳಬಹುದಾದ ಮಾತೆಂದರೆ, ಪ್ರೊಫೆಸರ್ ಅಂದ್ರೆ ಸಿಡಿಎನ್ ಅಂತ.

ತಮ್ಮ ನಿವೃತ್ತಿಯ ನಂತರ ಅವರು ತಾವೇ ಕಟ್ಟಿ ಬೆಳೆಸಿದ 'ಧ್ವನ್ಯಾಲೋಕ' ಒಂದು ವಿಶಿಷ್ಟ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಕೇಂದ್ರ. ದೇಶ ವಿದೇಶಗಳಿಂದ ಬರಹಗಾರರು, ವಿದ್ವಾಂಸರು ಬಂದು, ಅಲ್ಲಿ ಕೆಲ ಕಾಲ ಇದ್ದು, ಕೆಲಸ ಮಾಡಿ ಹೋಗುತ್ತಾರೆ. ಅಲ್ಲೊಂದು ಅಪರೂಪದ ಗ್ರಂಥಾಲಯವೇ ಇದೆ. 'ಧ್ವನ್ಯಾಲೋಕ'ದಲ್ಲಿ ಇದ್ದು ಹೋಗುವ ವಿದ್ವಾಂಸರಿಗೆ ಸಿಡಿಎನ್ ಅವರದೇ ಆತಿಥ್ಯ! ಇವತ್ತು ಸಿಡಿಎನ್ ಇಲ್ಲದಿದ್ದರೂ ಅವರ 'ಧ್ವನ್ಯಾಲೋಕ'ವನ್ನಾದರೂ ನಾವು ನೋಡಿಕೊಂಡು ಬರಬಹುದು. ವಿದ್ವಾಂಸರು ಮತ್ತು ಸಾಹಿತ್ಯಾಭ್ಯಾಸಿಗಳು ಅವಶ್ಯ ಭೇಟಿ ಕೊಡುವಂಥ ಸ್ಥಳ ಅದು.

■ ಶ್ರೀನಿವಾಸ್ ವಿ. ಸುತ್ರಾವೆ : ೧೬೪/೧೬, ಮುಡಾ. ವಿದ್ಯಾನಗರ. ದಾವಣಗೆರೆ-೫೭೭ ೦೦೫ ■

ಪುಸ್ತಕ ಪರಿಶೀಲನೆ

೧. ಮಾಗಿಯ ಕೋಗಿಲೆ : ಸುಬ್ರಾಯ ಚೊಕ್ಕಾಡಿ

ಮೌಲ್ಯ ಪ್ರಕಾಶನ, ನಲ್ಲೂರ, ತಾ. ಕಾರ್ಕಳ, ಪು. ೮೨, ರೂ. ೪೮/-

"ಹಿಂದಿನಂತಲ್ಲ ಈ ಸಲದ ಮಳೆಗಾಲ ಗಾಳಿ ಹುಚ್ಚೆದ್ದು ಅಲೆದಾಡಿದರೆ ಚೆನಿಯನ ಗೊರಬೆ ಆಕಾಶದಲ್ಲಿ" ಎಂದು ಪ್ರಾರಂಭವಾಗುವ ಸುಬ್ರಾಯ ಚೊಕ್ಕಾಡಿಯವರ ಕವಿತೆ ಜೀವನ್ಮುಖಿಯಾಗಿತ್ತು. ಕವಿತೆಯಲ್ಲಿ ಬರುವ ಚೆನಿಯ, ದೂಮ, ಚಕ್ರ, ಸೋಂಪ ಮುಂತಾದ ಪಾತ್ರಗಳು ಜೀವ ತುಂಬಿ ನಳನಳಿಸುತ್ತಿದ್ದವು. ಸಾಮಾನ್ಯ ಘಟನೆಗಳನ್ನು ತಟ್ಟನೆ ಕಣ್ಣೆದುರು ಕಟ್ಟುವ ಕಾವ್ಯಕೌಶಲ ಅಲ್ಲಿತ್ತು. ಈ ಸಾಲುಗಳು ಸುಮಾರು ೨೫-೩೦ ವರ್ಷಗಳ ಹಿಂದೆ ಬರೆದಿದ್ದು. ಅದಾದ ನಂತರ ಅದೆಷ್ಟೋ ಮಳೆಗಾಲ ಸರಿದಿವೆ. ಸಂಭ್ರಮ, ಸಂತಾಪಗಳೆರಡನ್ನೂ ತಂದಿವೆ. ಈ ಮಳೆಗಾಲದ ಶ್ರಾವಣ ವೈಭವದಿಂದ ಕವಿ ಈಗ ಚಳಿಗಾಲದ ಮಾಗಿಯ ಕಡೆಗೆ ಮುಖ ಮಾಡಿದ್ದಾರೆ. ಅಂತೆಯೆ 'ಮಾಗಿಯ ಕೋಗಿಲೆ'ಯಾಗಿ ಸೃಜನಾತ್ಮಕ ಮೌನಕ್ಕೆ ಮಾರುಹೋಗಿದ್ದಾರೆ.

೧೨ ನೆಯ ಶತಮಾನದ ಶರಣನೊಬ್ಬ ಕುತರ್ಕಿಗಳ ಎಡೆಯಲ್ಲಿ ಮಾಗಿಯ ಕೋಗಿಲೆಯ ಹಾಗೆ ಸುಮ್ಮನಾಗಿರಬೇಕು ಎನ್ನುತ್ತಾನೆ. ಬಹುಶಃ ಈ ಸಾಲುಗಳು ಕವಿಯ ಈಗಿನ ಮನೋಭಾವಕ್ಕೆ ತುಂಬ ಹಿಡಿಸಿರಬೇಕು. ಆದ್ದರಿಂದಲೆ 'ಸುಮ್ಮನಿರು ಮನವೇ, ಸುಮ್ಮನಿರು ಮಾಗಿಯ ಕೋಗಿಲೆಯಂತೆ. ಕುತರ್ಕಿಗಳ ನಾಡಲ್ಲಿ ಒಂದೇ ಸಮನೆ ಆಘಾತ' ಎಂದು ಹೇಳುತ್ತ ಆಘಾತದ ಕಾರಣಗಳನ್ನು ತಿಳಿಸುತ್ತಾರೆ. ಮನಸ್ಸು ಕುತರ್ಕಿಗಳೆದುರು ಹಿಂದಿನಂತೆ ಪ್ರತಿಭಟಿಸಲೆತ್ನಿಸುತ್ತಿರುವುದಕ್ಕಾಗಿಯೆ ಆದ ಅನುಭವಗಳಿಂದ ಮಾಗಿದ ಕವಿ ಮನಸ್ಸಿಗೆ, ಬಂದುದಕ್ಕೆ ಧೃತಿಗೆಡದೆ ಸುಮ್ಮನಿರು ಎಂದು ಹೇಳುತ್ತಾ 'ಈಗ ಇದು ಧ್ಯಾನಕ್ಕೆ ಸಮಯ' ಎನ್ನುತ್ತಾರೆ. ಈ ಸಂಕಲನದ ಅನೇಕ ಕವಿತೆಗಳಲ್ಲಿ ಹೀಗೆ ಬಹಿರಂಗದಿಂದ ಅಂತರಂಗಕ್ಕೆ ಸರಿಯುವ, ಅಂತರಂಗದ ಧ್ವನಿಗೆ ಕಿವಿಗೊಡುವ ಮಾತುಗಳು ತೇಲಿ ಬರುತ್ತವೆ. 'ಅಂತರಂಗದ ಅಶ್ರುತಗಾನಕ್ಕೆ ಕೊರಳಾಗು' (ಮಾಗಿಯ ಕೋಗಿಲೆ), 'ಬುದ್ಧನ ಪ್ರತಿಮೆಯ ಬಗ್ಗೆ ಹೇಳುತ್ತಾ "ಅಶ್ರುತಗಾನಕ್ಕೊಡ್ಡಿಕೊಂಡ ದೊಡ್ಡ ಕಿವಿಗಳು' (ಇನ್ನೂ ದೂರ), 'ಚಟುವಟಿಕೆಗಳಿಗೆಲ್ಲ ಮಂಗಳ ಹಾಡುವ ಹಾಗೆ ನಿಂತೇ ಬಿಟ್ಟಿದೆ ಗಡಿಯಾರ' (ಗಡಿಯಾರ), 'ತೋಯಿಸಿಕೊಂಡ ಮರಗಿಡಗಳು ನಿಂತಿವೆ ನಿಶ್ಚಲವಾಗಿ ಆಕಾಶಕ್ಕೆ ಮುಖ ಮಾಡಿ ತದೇಕ ಧ್ಯಾನದಲ್ಲಿ' (ಮಹಾ ಬೆರಗು), 'ಬಾಗಿದ ಕೊಂಬೆಗಳು ಸುಮ್ಮನೆ ಚುಂಬಿಸುತ್ತಿರುತ್ತವೆ ನದಿಯ ಕಸಕಡ್ಡಿಗಳು ಸುಮ್ಮನೆ ಸ್ಪರ್ಶಿಸುತ್ತಿರುತ್ತವೆ ನದಿ ಮೈಯ' (ನದಿ ಹರಿಯುತ್ತಿದೆ), 'ಆಚೆ ದಡದಲ್ಲಿ ಮೌನವೆ ಮಾತು, ಈಚೆ ದಡದಲ್ಲಿ ಮಾತೇ ಮೌನ' (ನದಿ ಹರಿಯುತ್ತಿದೆ), 'ಸುಮ್ಮನೆ ಮಲಗಿದೆ ಊರು... ಕೆರೆಯ ನೀರೇಕೆ ಸುಮ್ಮನೆ ಕುದಿಯುತ್ತಿದೆ' (ಊರು), 'ಸುಮ್ಮನೆ ಮಲಗಿ, ನೇಯುತ್ತಿರುವ ಹೊಸ ಕನಸ ಬಗ್ಗೆ' (ದೋಸೆ ಮೀಮಾಂಸೆ), 'ಗಾಂಧಿಯಂತೂ ಅಲ್ಲ– ಯಾಕೆಂದರೆ ಈತ ಚಲಿಸುತ್ತಿಲ್ಲ' (ಸಂಬಂಧ), 'ಹಸಿರೆಲೆ ಮೇಲೆ ಕುಳಿತಿದೆ ಏಕಾಗ್ರ ಚಿತ್ರದಲ್ಲಿ ಧ್ಯಾನಸ್ಥ ಮಿಡತೆ, ...ಎಲ್ಲ ಚಟುವಟಿಕೆಗಳ ಮರೆತ ಇಡಿ ಪ್ರಕೃತಿ ಎದುರು ನಿಂತಿದೆ ಮೂಕ ಬೆರಗಲ್ಲಿ' (ಮಿಡಿತ) —ಹೀಗೆಯೇ ಇನ್ನೂ ಹತ್ತಾರು ಉದಾಹರಣೆಗಳನ್ನು ನೀಡಬಹುದು. ಚೊಕ್ಕಾಡಿಯವರಿಗೆ ಮಾತು-ಮೌನಗಳ ದ್ವಂದ್ವ ಅರಿವಾಗಿದೆ. ಸುಮ್ಮನೆ ಇರುವುದು ಎಂದರೆ ಕವಿಯ ದೃಷ್ಟಿಯಲ್ಲಿ ಖಾಲಿಯಾಗುವುದಲ್ಲ, ತುಂ ತುಂ ತುಂ ತುಂಬಿಕೊಳ್ಳುತ್ತಾ ಕೊಡ ತುಂಬಿದ ಮೇಲೆ ಹೇಗೆ ಸುಮ್ಮನಾಗುತ್ತದೆಯೋ ಹಾಗೆ ಸುಮ್ಮನಿರುವುದು. ಇನ್ನೊಂದು ಅರ್ಥದಲ್ಲಿ ಹೇಳಬೇಕೆಂದರೆ ಕಂಬಳಿಹುಳ ಕೋಶಾವಸ್ಥೆಗೆ ಜಾರಿ ಸುಮ್ಮನಾಗಿರುವುದು. ಆಗಿನ ಮೌನ ಸ್ಮಶಾನ ಮೌನವಲ್ಲ, ಇನ್ನೊಂದಕ್ಕೆ ರೂಪಾಂತರವಾಗಲು ಕಾಯುವ ಕಾಲದ ಮೌನ. ಆದ್ದರಿಂದಲೆ ಪ್ರಾರಂಭದಲ್ಲೆ ಈ ಕವಿಯದು ಸೃಜನ

ಮೌನ ಎಂದು ಹೇಳಿರುವುದು. ಆತನಿಗೆ ಗೊತ್ತು 'ಒಡಲ ತುಂಬಿ ನಿಂತ ಮೌನ ಕೊಂಚ ಬಿರಿಯುತ್ತದೆ' (ಬಿರಿದ ಮೌನ). 'ಈಗ ಮೌನವಾಗಿರುವ ಕೋಗಿಲೆಗೆ ಮುಂದೆ ಬರುವ ವಸಂತದಲಿ ಮಾವು ಚಿಗುರಿ, ಜೀವರಾಶಿಗಳಲಿ ಚೈತನ್ಯ ತುಂಬಿ ಧ್ಯಾನಕ್ಕೆ ಸಹಜ ಹೊರದಾರಿ' ಸಿಗುತ್ತದೆ. ನಿಶ್ಚಲ ಗಡಿಯಾರ ಕೀಲಿ ಕೊಟ್ಟೊಡನೆ ಮತ್ತೆ ಕೈ ಬೀಸುತ್ತಾ ನಡೆಯುತ್ತದೆ ಎಂದು. ಇಲ್ಲಿಯ ಬಹುತೇಕ ಕವಿತೆಗಳು ಹೀಗೆ ಚಲ-ನಿಶ್ಚಲ, ಶಬ್ದ-ನಿಶ್ಶಬ್ದ, ಮಾತು-ಮೌನಗಳ ನಡುವೆ ಉಯ್ಯಾಲೆಯಾಡುವ ಮನಸ್ಸಿನ ಕಲಾತ್ಮಕ ಅಭಿವ್ಯಕ್ತಿಯಾಗಿವೆ. ಹೀಗೆಂದೆ ಕವಿತೆಗಳು ಮಾತಿನಾಚೆಗಿನ ಮೌನವನ್ನು ನವಿರಾಗಿ ಸ್ಪರ್ಶಿಸಿ ಶಬ್ದಗಳನ್ನು ಮೀರಿ ಅರ್ಥ ಮಾತ್ರ ಉಳಿಯುವ ಬೆರಗಾಗಿ ನಿಂತಿವೆ.

ಒಟ್ಟು ೫೨ ಕವಿತೆಗಳನ್ನೊಳಗೊಂಡಿರುವ ಈ ಸಂಕಲನದಲ್ಲಿ ಕೊನೆಯ ೯ ಕವಿತೆ ಅನುವಾದಗಳು. ಹೊ. ಚಿ. ಮಿನ್ಹ, ಮುಹಮ್ಮದ ಸಾಖಿಬ್, ಜುವಾಂಗ ತ್ಸು, ಒಕ್ಟೇವಿಯೊ ಪಾಜ್‌ರ ಆಯ್ದ ಕವಿತೆಗಳು ಇಲ್ಲಿವೆ. ಮೂಲ ಕವಿತೆಗಳನ್ನೋದದೆ ಅನುವಾದದ ಬಗ್ಗೆ ಬರೆಯುವುದು ಸರಿಯಾಗದು. ಇಷ್ಟು ಮಾತ್ರ ಹೇಳಬಹುದು. ಅನುವಾದದಲ್ಲೂ ಈ ಕವಿಯ ಸೃಜನಶಕ್ತಿಯ ಸೊಬಗನ್ನು ಕಾಣಬಹುದು.

– ಚಂದ್ರಶೇಖರ ವಸ್ತ್ರದ, 'ಬೆಳಗು', ಆನಂದಾಶ್ರಮ ರಸ್ತೆ, ಮುಸಾರಿ, ಗದಗ-೫೮೨ ೧೦೧

೨. ಬಕುಲದ ದಾರಿ : ಎಲ್. ಸಿ. ಸುಮಿತ್ರಾ

ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ಪ್ರ.ಮು. ೨೦೦೪, ಪು. ೬೨, ರೂ. ೪೫/-

ನಾಲ್ಕಾರು ಸಾಲುಗಳ ಚುಟುಕಿನಿಂದ ಎರಡು ಮೂರು ಪುಟಗಳ ಸುದೀರ್ಘ ಕವಿತೆಗಳ ವರೆಗಿನ ಒಟ್ಟು ೫೮ ರಚನೆಗಳು ಇಲ್ಲಿವೆ. ಸುಮಿತ್ರಾ ಅವರ ಪ್ರತಿಮಾಸೃಷ್ಟಿಗೆ ನವ್ಯದ ಛಾಯೆ ಸಂಕೀರ್ಣತೆಯನ್ನೂ ಪ್ರಾಕೃತಿಕ ಪರಿವೇಷ ಆಪ್ತತೆಯನ್ನೂ ಒದಗಿಸಿವೆ. ಕುವೆಂಪು ರೀತಿಯ ಸಮೃದ್ಧ, ದಟ್ಟ ವರ್ಣನೆಗಳು ಇಲ್ಲಿ ಇಲ್ಲವಾದರೂ ಮನುಷ್ಯನನ್ನು, ಆತ ಕಟ್ಟಿಕೊಂಡ ಸಾಮಾಜಿಕ ಏಳುಬೀಳುಗಳನ್ನು ಪ್ರಕೃತಿಯ ಭಾಗವೆಂಬಂತೆ ಗ್ರಹಿಸುವ, ಅನಾವರಣಗೊಳಿಸುವ ಆಧುನಿಕ ಮನಸ್ಸು ಈ ಕವಿತೆಗಳ ಹಿಂದಿದೆ. ಹೀಗಾಗಿ ಇಲ್ಲಿನ ಪ್ರಕೃತಿಯೊಂದಿಗಿನ ತಾದಾತ್ಮ್ಯ ನವೋದಯದ ಆರಾಧನಾ ರೀತಿಗಿಂತ ಸಾಮಾಜಿಕ ವಾಸ್ತವಗಳೊಂದಿಗೆ ಮುಖಾಮುಖಿಗೊಳಿಸುವ ಅಘೋಷಿತ ತಾತ್ವಿಕ ಎಳೆಗಳನ್ನು ಹೊಂದಿರುವಂತಹದು.

ಇದ್ದುದ್ದನ್ನು ಇಲ್ಲವಾಗಿಸಿ / ಚಿನ್ನದ ತಗಡಿನಂತ ನೀರಲೋಕವನ್ನು / ಹೊಳೆಯಿಸುವ ಹಾಲುಬೆಳಕು.
ಸಂಜೆ ಕರಗಿ ತಿಂಗಳು ಹೊರಳುವಾಗ / ಗಿಡ, ಮರ, ಮನುಷ್ಯ ಛಾಯಾ ಪ್ರಪಂಚ
ವಾಸ್ತವದಲ್ಲಿ ಮುಖಪುಟದ ತುಂಬಾ / ಚೆಲ್ಲಿದ ರಕ್ತ, ಕತ್ತರಿಸಿದ ಕೈ ಕಾಲು
ಆ ಲೋಕವೇ ಬೇರೆ, ಎರಡರ ಸಂಗಮವೆಲ್ಲಿ?
ತಿಳಿನೀರು ನೆತ್ತರ ಬಾಯಾರಿಕೆಯನ್ನು ಹಿಂಗಿಸುವುದಿಲ್ಲ (ಸಂಗಮದಲ್ಲಿ)

ಸ್ತ್ರೀವಾದೀ ಸಂವೇದನೆ ಪುರುಷವಿರೋಧಿ ನೆಲೆಗಳಿಂದಲೇ ಪ್ರಕಟಗೊಳ್ಳಬೇಕೆಂದಿಲ್ಲ. ಇಡೀ ವ್ಯವಸ್ಥೆಯ ಸಾಂಸ್ಥಿಕ ಸ್ವರೂಪದಲ್ಲಿಯೇ ಸ್ತ್ರೀಯ ಅಸ್ತಿತ್ವ ಹೇಗೆ ಅಭದ್ರ ಎಂಬುದನ್ನವರು ಗ್ರಹಿಸಿರುವ ರೀತಿ ನಮ್ಮ ಒಟ್ಟು ಸಾಮಾಜಿಕ ತಳ ರಚನೆಗಳನ್ನೇ ಪ್ರಶ್ನಿಸುವಂತಹದು :

ಕಸಿಗಿಡದ ಬುಡ / ಚಿಗುರುವಂತಿಲ್ಲ / ಚಿಗುರಿದಂತೆಲ್ಲ ಚಿವುಟಿದರು (ಒಂದು ಗಿಡ)

ಈ ಸ್ಥಿತಿಯ ಕ್ರೂರ ವ್ಯಂಗ್ಯ, 'ಸಿಕಾಡ ಮತ್ತು ಪ್ರೇಯಿಂಗ್ ಮ್ಯಾಟಿಸ್'ನಲ್ಲಿ ತಗ್ಗಿನ ದನಿಯಲ್ಲಿ ವ್ಯಕ್ತವಾಗಿರುವ ರೀತಿ ಇದು : ಅಂದ ಹಾಗೆ ಜೀರುಂಡೆ ಜಗತ್ತಿನಲ್ಲೂ ಹೆಣ್ಣಿಗೆ ದನಿಯಿಲ್ಲ.

ನಿತ್ಯ ಗೃಹಕೃತ್ಯಗಳ ಸಾಮಾನ್ಯ ಸಂದರ್ಭವನ್ನು ಕವಯಿತ್ರಿ ಗಾದೆಮಾತೊಂದನ್ನು ಬಳಸಿಕೊಂಡು ಹೆಣ್ಣನ್ನು ದುರ್ಬಲಗೊಳಿಸುವಲ್ಲಿ ವ್ಯವಸ್ಥೆ ರೂಪಿಸಿಕೊಂಡ ಸಂಚನ್ನು ಮಾರ್ಮಿಕವಾಗಿ ವಿಡಂಬಿಸಿದ್ದಾರೆ.

ಉಕ್ಕಿದ ಸಾರು ಸೊಕ್ಕಿದ ಹೆಣ್ಣು ರುಚಿಯಲ್ಲ'
ಎಂದು ಸಾರು ಉಕ್ಕದಂತೆ ನೋಡುವುದರಲ್ಲಿ ಕಾಲ ಕಳೆಯಿತು. (ಗೆರೆಯೊಳಗಿನ ಕಾಲ)

`ಮರೆತು ಹೋದವಳು', `ಇಂದಿನ ಸೀತೆ', `ರೂಪಾಂತರ'ದಂತಹ ಇನ್ನೂ ಒಂದೆರಡು ಕವಿತೆಗಳಲ್ಲಿ ಈ ಕರ್ಷಣ ಮುಂದುವರಿದಿದ್ದರೂ ಸ್ತ್ರೀಕೇಂದ್ರಿತವೆನ್ನಬಹುದಾದ ಕವಿತೆಗಳ ಪ್ರಮಾಣ ಒಟ್ಟು ಕವಿತೆಗಳಲ್ಲಿ ಪ್ರಧಾನವೆನಿಸದೆ ಇಂದಿನ ಮನುಷ್ಯನ ಬದುಕನ್ನು ಸಮಗ್ರವಾಗಿ ಗ್ರಹಿಸುವ, ಶೋಧಿಸುವ ಪ್ರಯತ್ನವೇ ಮುಖ್ಯವಾಗಿದೆ. ಭಾರತೀಯ ಸಾಮಾಜಿಕ ಸಂದರ್ಭ ಅವರ ಶೋಧದ ಭೂಮಿಕೆ.

ಬೆಳಸಬಾರದು ಸುಲಭದಲಿ ಸಂತಾನ / ನೆಲದಲ್ಲಿ ಬೇರಿಳಿಸದೇ (ನಿಜದ ಲೋಕ)

ಎಂಬ ಎಚ್ಚರ ಅವರಿಗಿದೆ. ನಮ್ಮ ಸಾಂಸ್ಕೃತಿಕ ಬದುಕನ್ನು ನಿರ್ವೀರ್ಯಗೊಳಿಸುತ್ತಿರುವ ಆಧುನಿಕತೆಯ ಅತಿಕ್ರಮಣ, ಒತ್ತಡಗಳು ಉಂಟುಮಾಡಿರುವ ತಲ್ಲಣಗಳನ್ನು ಸಮೃದ್ಧ, ಆಪ್ತ ಪರಿಸರವೊಂದು ಮಾಯವಾಗುತ್ತಿರುವುದರ ವಿಷಾದದ ಹಿನ್ನೆಲೆಯಲ್ಲಿ ಹಿಡಿದಿಡುವ ಕವಯಿತ್ರಿಯ ಉದ್ದೇಶ ಕೆಲವು ಮಹತ್ವದ ರಚನೆಗಳಲ್ಲಿ ಸಫಲಗೊಂಡಿದೆ.

ಕಣದ ಎತ್ತು. ಕಲ್ಲಿನ ಹಿಂದೆ ಸುತ್ತಿದವರಾರೂ ಈಗಿಲ್ಲ
ಅವರಿಗೆ ಮನೆಯೂ ಇಲ್ಲ. ಪವರ್ ಟಿಲ್ಲರ್ ಬಂದಂದು
ಮಾರಿಹೋದವು ಎತ್ತು ಜಾತ್ರೆಯಲ್ಲಿ

ಕಣದ ಹಲಸಿನ ಮರ ಒಂದು ಮುಂಗಾರಿನ
ಮಳೆಗೆ ಬುಡ ಮೇಲಾದಾಗ ಜೊತೆಗಿದ್ದ
ಮಲ್ಲಿಗೆಯ ಬಳ್ಳಿ ನೆಲ ಕಚ್ಚಿತು
ಚದುರಿದರು ಚದುರಿದವು ಎಲ್ಲ ಎಲ್ಲೋ! (ಮನೆಯೊಳಗಿನ ಜಗತ್ತು)

ಎಂತಹ ರೂಕ್ಷತೆಯ ನಡುವೆಯೂ ತನ್ನ ಜೀವಸತ್ವ ಕಾಯ್ದುಕೊಳ್ಳುವ ಒಳಸೆಲೆಗಳು ನಮ್ಮ ನೆಲಕ್ಕಿದೆ ಎಂಬುದನ್ನು ಧ್ವನಿಸುವ ಹಾಗೆ ಕೆಳಗಿನ ಸಾಲುಗಳಿವೆ :

ಕೆಂಪು ಮಣ್ಣಿನ ದಾರಿ, ಬಣಚುಕಲ್ಲಿನ ಜಾಡು / ಸವೆಯದಿವೆ ವರ್ಷಗಳಾಚೆಗೂ
ಮಳೆ ಕಳೆದು ಛಳಿ ಬಂದು ಋತುಚಕ್ರ ತಿರುಗಿದರೂ / ಸಲಸಲವೂ ಬದಲಾಗದಿದೆ ನನ್ನ ಈ 'ಮನೆ'
ಮನೆಯೆಂದರದೇ 'ಊರು' (ಮನೆ)
ದೇವರ ಬನ ಹಸಿರುಂತೆ ದಿವ್ಯ ಜಾಗ / ಗದ್ದೆ ಕೋಗಿನ ಹಸಿರು ಕಡಲಿಗೆ ಮೂರೇ ಉರುಳು' (ಮನೆ)

ಇಲ್ಲಿ ಅಡಿಗರ 'ಭೂಮಿಗೀತ'ದ ಸಾಲುಗಳೊಂದಿಗಿನ ಮುಖಾಮುಖಿ ಗಮನಾರ್ಹ.

ಉರುಳು ಮೂರೇ ಉರುಳು ಕಡಲ ಕುದಿತದ ಎಣ್ಣೆ ಕೊಪ್ಪರಿಗೆಗೆ

'ಹಸಿರು ಕಡಲು', 'ಕಡಲ ಕುದಿತದ ಎಣ್ಣೆ ಕೊಪ್ಪರಿಗೆ'ಗಳ ವ್ಯತ್ಯಾಸ ಕನ್ನಡ ಕಾವ್ಯದ ಮಹತ್ವದ ತಿರುವನ್ನು ಸೂಚಿಸುತ್ತದೆ. 'ನವಿಲು ಕಲ್ಲು' ಕವಿತೆಯಲ್ಲಿ ಕುವೆಂಪು ನೆನಪಾಗುವುದೂ ಅಷ್ಟೇ ಮಾರ್ಮಿಕ :

ಎಳೆ ಬಿಸಿಲ ಮರೀಚಿಗೆ ಮಾರುಹೋಯಿತೇ ಮನ?
ಶತಮಾನಗಳಾಚೆಗೆ ಹುಟ್ಟಿತು ರಸಋಷಿಯ ಕಾವ್ಯ
ನವಿಲು ಕಲ್ಲಿಲ್ಲಿ ಮೂಕ
ಪುರಾಣ ಭೂತ ವರ್ತಮಾನ ಸಂಕೀರ್ಣ ಚಿತ್ರಕಾವ್ಯ.

ಅಕ್ಕನ 'ತೆರಣಿ' ಇಲ್ಲಿ 'ಸಂಸಾರ ಹೇಯ'ವನ್ನು ಮೀರುವ ಭಿನ್ನ ವೈದೃಶ್ಯಕ್ಕೆ ತಿರುಗಿಕೊಂಡು ಆತ್ಮಾತ್ಮಕವಾಗಿದೆ.

ತನ್ನೊಳಗೆ ತಾನು / ತೆರಣಿಯ ಹುಳುವಲ್ಲ
ಚಿಪ್ಪೊಳಗಿನ ಮುತ್ತು / ನಿಂದೆ ನಿಷ್ಠುರಗಳ ತೆರಣಿಯ ಕೋಶ
ಪರಿವರ್ತಿಸಿದೆ ಗಟ್ಟಿ ಚಿಪ್ಪಾಗಿ / ಕಣ ಕಣದ ಸಹನೆ ಕೂಡಿ
ಮುತ್ತಾಗುವ ಮೋಡಿ. (ತೆರಣಿ)

ಇಮ ಸೃಜನಶೀಲತೆಯ ಗುಟ್ಟೂ, ಹೌದು. ಕೆಲವು ಪ್ರಾಕೃತಿಕ ಸಂಗತಿಗಳು ತಮ್ಮಷ್ಟಕ್ಕೆ ಸುಂದರ ಚಿತ್ರಗಳಾಗಿ ತೋರಿದರೂ ಅವು ಸೃಜನಕ್ರಿಯೆಯ ರೂಪಕಗಳಾಗಿಯೂ ಬೆಳೆಯುತ್ತವೆ.

ಬಿದಿರು ಹೂ ಬಿಟ್ಟಿಹುದು ಮತ್ತೆ / ಕೆಲವು ಜಾತಿಯ ಬಿದಿರು ಮೂವತ್ತಕ್ಕೆ ಕೆಲವು ನಲವತ್ತಕ್ಕೆ /
ಹೂ ಬಿಟ್ಟು ಸಾಯುತ್ತವೆ. ಕೆಲವು ಶತಮಾನ ಕಳೆಯುತ್ತವೆ. / ಈ ಕಾಡಿನ ಮರಗಳು ಹಸಿರಾಗಿವೆ. /
ಇವು ನಿತ್ಯ ಹರಿದ್ವರ್ಣ. (ಬಿದಿರು ಹೂ ಬಿಟ್ಟಾಗ)

ಕೇವಲ ಈ ಕ್ರಿಯೆ ಪವಿತ್ರೀಕರಣಗೊಳ್ಳದೆ 'ಹರಿವ ನೀರು' ಪುಟ್ಟ ಕವಿತೆಯಲ್ಲಿ 'ರ್‍ಯಾಟ್ ರೇಸ್' ಎನಿಸುವ, ನಿಂತರೆ ರಾಡಿಯಾಗುವುದೇ ಚಲನೆಯಲ್ಲಿ ಚೆಲುವನ್ನು ಪಡಕೊಳ್ಳುವ ಭಿನ್ನ ನೆಲೆಯಿಂದಲೂ ಚಿತ್ರಿತವಾಗಿದೆ.

ಸಂಜೆಗೆ ತುಂಬಿದ ಹೂಗಳ ಪರಿಮಳ ಗಾಢ / ಹಕ್ಕಿ ತುಳಿತಕ್ಕೆ ಗಾಡಿ ಚಕ್ರಕ್ಕೆ
ನಲುಗಿವೆ ಹೂವು / ಮಣ್ಣು ಬಣ್ಣ ಬಂತೇ ಹೂವಿಗೆ...
ಮಾಲೆ ಮಾಲೆ ಮುಡಿಗೆ ಏರಿ / ಬಕುಲ ಗಂಧ ನಿರಂತರ. (ಬಕುಲ)

ಹೀಗೆ ಸೃಜನಶೀಲ ಪ್ರಕ್ರಿಯೆಗಳ ಸಹಜ ತಿಳಿವಿನಲ್ಲಿ ಇಲ್ಲಿನ ಕವಿತೆಗಳು ರಚನೆಗೊಂಡಿದ್ದರೂ ಕವಯಿತ್ರಿ ತಾಜಾ ಪ್ರತಿಮೆಗಳ ಜಾತ್ರೆಯನ್ನೇ ಇಲ್ಲಿ ನೆರೆಯಿಸಿದರೂ ಅವುಗಳನ್ನು ಒಂದು ಸೂತ್ರಕ್ಕೊಳಪಡಿಸಿ ಗಾಢ ಅನುಭೂತಿಯೊಂದನ್ನು ಕಟ್ಟಿಕೊಡುವ ಕೇಂದ್ರವೊಂದರ ಗೈರುಹಾಜರಿ ಇಲ್ಲಿನ ಮುಖ್ಯ ಕೊರತೆ. ಹೀಗಾಗಿ ಇಲ್ಲಿನ ರಚನೆಗಳು ಹಲವಾರು ಓದನ್ನು ಆ ಓದಿಗೆ ವಾಚಕನಿಗೆ ಒಂದು ಹಂತದ ಸಿದ್ಧತೆಯನ್ನು ನಿರೀಕ್ಷಿಸುತ್ತವೆ. ಇಂಥ ಯಾವ ತೊಡಕೂ ಇಲ್ಲದ 'ಚೆನ್ನಿ', 'ವಿಸ್ಮೃತಿಯ ವಿಜಯ'ದಂತಹ ವ್ಯಕ್ತಿಚಿತ್ರಗಳು ಬೆರಗು ಹುಟ್ಟಿಸುವಷ್ಟು ಆಪ್ತ, ಅನನ್ಯ ರಚನೆಗಳೆನಿಸುತ್ತವೆ. ಸುಮಿತ್ರಾ ಅವರ ಕಾವ್ಯ ತನ್ನ ಸಾಫಲ್ಯದ ದಾರಿಯಲ್ಲಿ ಸಾಕಷ್ಟು ಎತ್ತರಕ್ಕೇರಬಲ್ಲದೆಂಬುದಕ್ಕೆ ಈ ಕೆಳಗಿನ ಸಾಲುಗಳು ನಿದರ್ಶನ :

ಛಳಿಯಲ್ಲೂ ಮೊಗ್ಗಿನ ಬಣ್ಣ ಕಳೆಯದಿರು ಎಂದರ / ಗಾಳಿಯ ನೆರಳ ಹಿಡಿಯ ಹೋದಂತೆ /
ದಟ್ಟ ಛಳಿಯಲ್ಲಿ ಮುಂಗಾರಿನ ಕನಸು / ಹೊಗೆ ತುಂಬಿದ ಸಿಗ್ನಲ್‌ನಲ್ಲಿ ಮಲ್ಲಿಗೆಯ ಕನಸು /
ನಿಯಮಗಳ ತಪ್ಪಿಸುವ ಲಯ. (ಮಾಗಿ)

– ಬಸವರಾಜ ಪಕ್ಕುಂದ, ಕೆಂಡದಮಠ ಬಿಲ್ಡಿಂಗ್, ೧೦ ನೇ ಕ್ರಾಸ್, ಸಪ್ತಾಪುರ, ಧಾರವಾಡ-೫೮೦ ೦೦೧

೩. *ದೊಡ್ಡ ಬೆಟ್ಟದ ನೋಟ :* ಎಚ್. ವಿ. ನಾಗೇಶ್

ಸುಂದರ ಪುಸ್ತಕ ಪ್ರಕಾಶನ, ೭೯, 'ಚಂದ್ರಕಿರಣ', ೨ ನೇ ಕ್ರಾಸ್. ೨ ನೇ ಮೇನ್, ಶಕ್ತಿನಗರ, ಧಾರವಾಡ-೪,
ಪ್ರ.ಮು. ೨೦೦೪, ಪು. ೨೧೬, ರೂ. ೧೦೦/-

೪. *ದೊಡ್ಡ ಬೆಟ್ಟದಿಂದ ಇನ್ನಷ್ಟು ನೋಟಗಳು :* ಎಚ್. ವಿ. ನಾಗೇಶ್

ಸಿವಿಜಿ ಪಬ್ಲಿಕೇಶನ್ಸ್, ೭೦, ೬ ನೇ ಮೇನ್, ಜಬ್ಬಾರ ಬ್ಲಾಕ್, ವೈಯಾಲಿ ಕಾವಲ್, ಬೆಂಗಳೂರು-೫೬೦ ೦೦೩,
ಪ್ರ.ಮು. ೨೦೦೪, ಪು. ೧೨೪, ರೂ. ೧೦೦/-

ಪ್ರೊ. ಎಚ್. ವಿ. ನಾಗೇಶರ 'ದೊಡ್ಡ ಬೆಟ್ಟದ ನೋಟ' ಪ್ರಬಂಧ ಸಂಕಲನದಲ್ಲಿ ೧೬ ಲೇಖನಗಳಿವೆ. ಇವೆಲ್ಲ ೫ ಗೊಂಚಲುಗಳಲ್ಲಿ ವಿಭಾಗಿಸಲ್ಪಟ್ಟಿವೆ. ಸಾಹಿತ್ಯ, ಕಲೆ, ಶಾಸ್ತ್ರ ವಿಚಾರ, ಸಾಮಾಜಿಕ ಚಳುವಳಿ, ಪರಿವರ್ತನೆ, ಜಾನಪದ ನ್ಯಾಯ, ದೈವ ಹಾಗೂ ಶರಣ ಸಮಾಜದ ಕುರಿತಾದ ಅಷ್ಟು ಲೇಖನಗಳೆಲ್ಲ ಸಮಾಜಶಾಸ್ತ್ರೀಯ ಕಣ್ಣೆಲೆಯಿಂದ ಬರೆದವುಗಳು. ಸಾಹಿತ್ಯದಲ್ಲಿ ಸಮಾಜಶಾಸ್ತ್ರೀಯ ದೃಷ್ಟಿಕೋನ ಪ್ರತಿಬಿಂಬಿಸುವ 'ದೊಡ್ಡಬೆಟ್ಟದ ನೋಟ' ಲೇಖನ, ನಮ್ಮಲ್ಲಿ ಇನ್ನೂ ಅಷ್ಟಾಗಿ ಚಲಾವಣೆಯಲ್ಲಿಲ್ಲದ ಸಬಾಲ್ಟರ್ನ್ ಅಥವಾ ತಳವರ್ಗ/ಅಧೀನವರ್ಗಗಳ ದೃಷ್ಟಿಕೋನದಿಂದ ಜಗತ್ತನ್ನು ಅರ್ಥಮಾಡಿಕೊಳ್ಳುವ ಬಗೆಯೊಂದರ ಚರ್ಚೆಯನ್ನು ಮುಂದಿಡುತ್ತದೆ. ಜನಪರ ನಿಲುವು ಮತ್ತು ಸಮಾಜಶಾಸ್ತ್ರೀಯ

ದೃಷ್ಟಿಕೋನಗಳನ್ನು ಸಮೀಕರಿಸುವುದು ಸರಿಯಲ್ಲವೆನ್ನುತ್ತದೆ. ಈ ಲೇಖನದ ಒಟ್ಟು ಆಶಯ, ಸಾಹಿತ್ಯದಲ್ಲಿ ಸಾಮಾಜಿಕ ಅಂಶಗಳ ಪ್ರಭಾವವನ್ನು ಒಪ್ಪಿಕೊಳ್ಳುವಂತೆ ಬರಹಗಾರರನ್ನು ಪ್ರೇರೇಪಿಸುವ ಮೂಲಕ, ಅರ್ಥಪೂರ್ಣವಾದ ಸಾಹಿತ್ಯಕೃಷಿಗೆ ಮಾರ್ಗವೊಂದನ್ನು ಸೂಚಿಸುವುದಾಗಿದೆ.

ನಾಡಿನ ಹಲವು ಪ್ರಸಿದ್ಧ ಸಮಾಜವಿಜ್ಞಾನಿಗಳು ಹಾಗೂ ಸಂಶೋಧಕರು ಈಗಾಗಲೇ ಪ್ರೊ. ನಾಗೇಶರನ್ನು ಕನ್ನಡದ ಸಮಾಜಶಾಸ್ತ್ರೀಯ ಬರವಣಿಗೆಯಲ್ಲಿ ಮುಂಚೂಣಿಯಲ್ಲಿರುವ ಲೇಖಕರೆಂದು ಗುರುತಿಸಿದ್ದಾರೆ. ಆ ಎಲ್ಲ ಅಭಿಪ್ರಾಯಗಳನ್ನು ಕ್ರೋಢೀಕರಿಸಿ (ಪ್ರಸ್ತುತ ಎರಡೂ ಗ್ರಂಥಗಳಿಗೂ ಈ ಮಾತು ಅನ್ವಯವಾಗುತ್ತದೆ) ಹೇಳುವುದಾದರೆ, ಎಲ್ಲಿಯೂ ಪಾಂಡಿತ್ಯದ ಭಾರ ಹೇರದೇ, ಪಾಂಡಿತ್ಯಪೂರ್ಣವಾಗಿ, ಹೇಳಲೇಬೇಕಾದ ವಿಷಯಕ್ಕೇ ನೇರವಾಗಿ ಬರುವುದು ಒಟ್ಟಾರೆ ನಾಗೇಶರ ಬರಹದ ವಿಶೇಷವೆನ್ನಬಹುದು. ಗೊಂದಲಗಳಿಗೆ, ಅಮೂರ್ತ ವಿಶ್ಲೇಷಣೆಗೆ ಅವಕಾಶ ಕೊಡದೇ ವಿಷಯ ವಿವೇಚನೆ ಮಾಡುವ ಅಂತರ್‌ಶಿಸ್ತೀಯ ಬರಹಗಾರರು ಕನ್ನಡದಲ್ಲಿ ವಿರಳ. 'ದೊಡ್ಡಬೆಟ್ಟದ ನೋಟ' ಎಂಬ ಶೀರ್ಷಿಕೆ ಮೇಲ್ನೋಟಕ್ಕೆ ದಿಗಿಲು ಹುಟ್ಟಿಸುವಂತೆ ಕಂಡರೂ ಓದುತ್ತ ಹೋದಂತೆ ಸಾಹಿತ್ಯಸೃಷ್ಟಿಯಲ್ಲಿ ಒಂದು ಅರ್ಥಪೂರ್ಣವಾದ ಮಾರ್ಗ ಯಾವುದಾಗಿರಬೇಕು ಎಂಬುದನ್ನು ಕೆಲವೇ ಪುಟಗಳಲ್ಲಿ ಸ್ಪಷ್ಟಪಡಿಸುತ್ತದೆ. ನಮ್ಮಲ್ಲಿ ಒಂದೋ, ಸಾಹಿತ್ಯದ ಗಂಧವೇ ಇಲ್ಲದ ಸಮಾಜವಿಜ್ಞಾನಿಗಳಿದ್ದಾರೆ. ಹಾಗೆಯೇ ಸಮಾಜವಿಜ್ಞಾನಿಗಳಿಗೂ ತಮ್ಮ ಸೃಷ್ಟಿಕ್ರಿಯೆಗೂ ಸಂಬಂಧವೇ ಇಲ್ಲವೆಂಬಂತಹ ಅಥವಾ ಅಂತಹ ಶಿಸ್ತಿನ ಅಳವಡಿಕೆಯೇ ಕ್ರಿಯಾತ್ಮಕ ಬರವಣಿಗೆಗೆ ಭಂಗ ತರಬಹುದೆಂದು ಭಾವಿಸುವವರಿದ್ದಾರೆ. ಆದರೆ ಜಾಗತಿಕವಾಗಿ ಸಾಹಿತ್ಯಸೃಷ್ಟಿ ಹಾಗೂ ವಿಮರ್ಶೆಗೆ ಅಂತರ್‌ಶಿಸ್ತೀಯ ಪರಿಪ್ರೇಕ್ಷ್ಯಕ್ಕೆ (perspective) ಪೀಠಿಕೆ ಹಾಕಿದವರಿಂದ ಹಿಡಿದು, ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಪ್ರಗತಿಶೀಲರಿಂದ ಪ್ರಾರಂಭಗೊಂಡು ಎಪ್ಪತ್ತರ ದಶಕದ ಬಂಡಾಯ, ದಲಿತ ಸಾಹಿತ್ಯದಲ್ಲಿ ಈ ಪ್ರಕಾರ ಹೇಗೆ ಪ್ರತಿಬಿಂಬಿತವಾಯಿತು ಎಂಬುದನ್ನು ಈ ಲೇಖನ ಸ್ಥೂಲವಾಗಿ ವಿಶ್ಲೇಷಿಸುತ್ತದೆ.

ಒಂದು ದೊಡ್ಡ ಬೆಟ್ಟದ ಶಿಖರದ ಮೇಲೆ ನಿಂತು ಕೆಳಗೆ, ಸುತ್ತ-ಮುತ್ತ ನೋಡಿದರೆ ಚಿಕ್ಕ-ದೊಡ್ಡ ಶಿಖರಗಳ ಪರಸ್ಪರ ಸಂಬಂಧ, ಅವೆಲ್ಲ ಒಟ್ಟಾಗಿ ಕೊಡುವ ಪರ್ವತಶ್ರೇಣಿಯ ಕಲ್ಪನೆ, ಭೂಭೌತಿಕ ಸಮಗ್ರತೆಗಳೆಲ್ಲ ಹೇಗೆ ಒಮ್ಮೆಲೇ ಅರ್ಥವಾಗುತ್ತವೆಯೋ ಹಾಗೇ ಸಮರ್ಥ ಸಾಹಿತ್ಯಕೃತಿ ಅಥವಾ ಸಮಾಜಶಾಸ್ತ್ರೀಯ ಬರವಣಿಗೆಯೊಂದು ಹೆಚ್ಚು ಕಡಿಮೆ ಹೀಗೆಯೇ ಸಮಗ್ರ ಹಾಗೂ ಪರಸ್ಪರ ಸಂಬಂಧಗಳ ದರ್ಶನ ಮೂಡಿಸುವಲ್ಲಿ ಸಫಲವಾಗುತ್ತದೆ. ಹಿಂದೆ ಪರಸ್ಪರ ಸಂಬಂಧವಿಲ್ಲದಂತೆ ಕಾಣುತ್ತಿದ್ದ ಸಂಗತಿಗಳೂ, ಸಂಬಂಧ ಹಾಗೂ ಸಂರಚನೆಗಳೂ ಈ ಕಣ್ಣೆಲೆಯಲ್ಲಿ ಪರಿಭಾವಿಸಿದಾಗ ಹೇಗೆ ಹಲವು ತೆರವಾಗಿ ಹೆಣೆದುಕೊಂಡಂತೆ, ಪರಸ್ಪರ ಪ್ರಭಾವ ಬೀರುವಂತೆ, ಕಾರ್ಯಕಾರಣ ಸಂಬಂಧಗಳನ್ನು ಹೊಂದಿರುವಂತೆ ಕಾಣುತ್ತವೆ ಎಂಬುದನ್ನು ಕೆಲ ಜಾಗತಿಕ ಹಾಗೂ ಕನ್ನಡ ಕಾದಂಬರಿಗಳ ವಿಶ್ಲೇಷಣೆಯ ಹಿನ್ನೆಲೆಯಲ್ಲಿಯೇ ಸ್ಪಷ್ಟಪಡಿಸುತ್ತಾರೆ.

ರಾಜ್ಯದ ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ಕನ್ನಡದಲ್ಲಿ ಮಾಡಿದ ಸಮಾಜಶಾಸ್ತ್ರ ಸಾಹಿತ್ಯದ ಸೃಷ್ಟಿ ಗಣನೀಯವಾದುದೇನಲ್ಲ. ಈ ನಿಟ್ಟಿನಲ್ಲಿ ಶಾಸ್ತ್ರವಿಚಾರ, ಸಾಮಾಜಿಕ ಸಂಶೋಧನೆ ಹಾಗೂ ಗ್ರಾಮೀಣಾಭಿವೃದ್ಧಿ ಕುರಿತಾದ ಲೇಖನಗಳು ಸಾಹಿತ್ಯ ಹಾಗೂ ಸಮಾಜಶಾಸ್ತ್ರದಲ್ಲಿ ಕುತೂಹಲ ಇಟ್ಟುಕೊಂಡವರಿಗೆ, ಈ ಎರಡೂ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಲು ಆಸಕ್ತರಾದವರಿಗೆ ಕೆಲ ಸೂಕ್ಷ್ಮ ಒಳನೋಟಗಳನ್ನು ಕೊಡಬಲ್ಲಷ್ಟು ಉತ್ಕೃಷ್ಟವಾಗಿವೆ. ಇನ್ನು ಭಾರತದಲ್ಲಿ ರೈತ ಹೋರಾಟಗಳ ಕುರಿತಾಗಿ ಎರಡು ದಶಕದ ಹಿಂದೆಯೇ ಉತ್ಕೃಷ್ಟ ಕೃತಿಯೊಂದನ್ನು ನೀಡಿರುವ ನಾಗೇಶರು, ಸಮಾಜ ಪರಿವರ್ತನೆಯಲ್ಲಿ ಚಳವಳಿಗಳು ವಹಿಸುವ ಪಾತ್ರದ ಕುರಿತಾಗಿ ಸ್ಪಷ್ಟ ಕಲ್ಪನೆಯನ್ನಿಟ್ಟುಕೊಂಡವರು. ಚಳವಳಿಗಳ ತಾತ್ವಿಕ ವಿವೇಚನೆಯ ಜೊತೆಗೇ ಕರ್ನಾಟಕದ ಸಂದರ್ಭದಲ್ಲಿ ವಿಶಿಷ್ಟವಾದ ಶಿವಶರಣರ ವಚನ ಚಳವಳಿಯಿಂದ ಆರಂಭಗೊಂಡು, ಹರಿದಾಸ ಚಳವಳಿ, ಕೆಲವು ರೈತ ಚಳವಳಿಗಳು, ವಿಶೇಷವಾಗಿ

ಬೂದಿ ಬಸವಣ್ಣನ ದಂಡು, ಅಂಕೋಲೆಯ ರೈತರ ಕೂಟ ಚಳವಳಿ, ಕಾಗೋಡು ಸತ್ಯಾಗ್ರಹ, ಪರಿಸರ ಚಳವಳಿ, ಸಂಡೂರಿನ ರೈತರ ಸತ್ಯಾಗ್ರಹ, ಮಲಪ್ರಭಾ-ಘಟಪ್ರಭಾ ಜಲಾನಯನ ಪ್ರದೇಶದ ರೈತರ ಹೋರಾಟ, ಕರ್ನಾಟಕದಲ್ಲಿ ನಡೆದ ಸ್ವಾತಂತ್ರ್ಯ ಚಳವಳಿಯಲ್ಲಿ ವಿಶೇಷವಾಗಿ ಉಪ್ಪಿನ ಸತ್ಯಾಗ್ರಹ, ಕರನಿರಾಕರಣ ಚಳವಳಿ, ಕ್ವಿಟ್ ಇಂಡಿಯಾ ಚಳವಳಿ, ಕರ್ನಾಟಕ ಏಕೀಕರಣಕ್ಕಾಗಿ ನಡೆದ ಹೋರಾಟ, ಹಿಂದುಳಿದ ವರ್ಗಗಳ ಚಳವಳಿ, ಸಾಮೂಹಿಕ ವಿವಾಹ ಚಳವಳಿ ಹಾಗೂ ಗೋಕಾಕ್ ಚಳವಳಿಯ ತನಕದ ವಿವರವಾದ ಸಮೀಕ್ಷೆಯೊಂದು ಮೂಡಿಬಂದಿದೆ. ಹಾಗೆಯೇ ಸಾಮಾಜಿಕ ಪರಿವರ್ತನೆಯಲ್ಲಿ ವಿವಿಧ ನ್ಯಾಯ ಪ್ರಕಾರಗಳು ಹಾಗೂ ಕಾಯ್ದೆ, ಕಾನೂನುಗಳು ವಹಿಸುವ ಪಾತ್ರವನ್ನು ಉದಾಹರಣೆಗಳ ಸಹಿತ ವಿವರಿಸಲಾಗಿದೆ.

ರಾವಬಹಾದ್ದೂರರ ಶ್ರೇಷ್ಠ ಕಾದಂಬರಿ 'ಗ್ರಾಮಾಯಣ'ದ ಕೃಷ್ಣಾನದಿ ತಟದ ಪಾದಳ್ಳಿ ಎಂಬ ಗ್ರಾಮ ಬದಲಾವಣೆಯ ಸುಳಿಯಲ್ಲಿ ಸಿಲುಕಿದ ರೀತಿಯನ್ನು ವಿವರಿಸುವುದರ ಜೊತೆಗೇ ಪ್ರಸಿದ್ಧ ಸಮಾಜಶಾಸ್ತ್ರಜ್ಞ ಎಂ. ಎನ್. ಶ್ರೀನಿವಾಸ ತಮ್ಮ ನೆನಪಿನ ಹಳ್ಳಿ(ದಿ ರಿಮೆಂಬರ್ಡ್ ವಿಲೇಜ್)ಯಲ್ಲಿ ಚಿತ್ರಿಸಿದ ರಾಮಪುರ ಗ್ರಾಮದಲ್ಲಾದ ಬದಲಾವಣೆಯ ವಿವರಗಳೆಲ್ಲ ರಸವತ್ತಾಗಿ ಮೂಡಿಬಂದಿವೆ. ಇಂಗ್ಲಂಡ್, ಅಮೇರಿಕೆಯಂಥ ದೇಶಗಳಲ್ಲಿ ಸಮಾಜವಿಜ್ಞಾನಿಗಳು ಗ್ರಾಮಾಧ್ಯಯನಗಳ ಪ್ರವಾಹವನ್ನೇ ಹರಿಸಿದ್ದರೂ, ಪ್ರಮುಖವಾಗಿ ಗ್ರಾಮಗಳ ದೇಶವೇ ಆಗಿರುವ ಭಾರತದಲ್ಲಿ, ವಿಶೇಷವಾಗಿ ಕನ್ನಡದಲ್ಲಿ ಮೂಡಿಬಂದ ಅಂಥ ಅಧ್ಯಯನಗಳು ಅತ್ಯಂತ ವಿರಳವಾಗಿರುವುದು ಒಂದು ವಿಪರ್ಯಾಸವೇ ಸರಿ. ಆ ಕೊರತೆಯನ್ನು ಪ್ರಸ್ತುತ ಕೃತಿ ಕೆಲಮಟ್ಟಿಗೆ ತುಂಬಿಕೊಟ್ಟಿದೆ ಎನ್ನಬಹುದು. ಸಾಹಿತ್ಯದ ಅಭಿರುಚಿ ಸಮಾಜಶಾಸ್ತ್ರಜ್ಞರೂ ಆದ ನಾಗೇಶರಿಗೆ ಇರುವುದರಿಂದಲೇ ಈ ಲೇಖನಗಳೆಲ್ಲ ನೀರಸ ಸಂಶೋಧನಾತ್ಮಕ ಬರವಣಿಗೆಗಳಾಗದೇ ಜೀವಂತಿಕೆಯನ್ನು ಮೆರೆಯುತ್ತವೆ. ಎಂ. ಎನ್. ಶ್ರೀನಿವಾಸರ ಸಂಸ್ಕೃತಾನುಕರಣ (Sanskritization)ದ ಪರಿಕಲ್ಪನೆಯ ಸುತ್ತಮುತ್ತ ಬರೆದ ಲೇಖನ ಸಮಾಜಶಾಸ್ತ್ರದ ವಿದ್ಯಾರ್ಥಿಗಳಿಗೂ, ಜಾತಿಪದ್ಧತಿಯಲ್ಲಿನ ಏರಿಳಿತಗಳನ್ನು ಅರ್ಥಮಾಡಿಕೊಳ್ಳಬಯಸುವ ಕುತೂಹಲಿಗಳಿಗೂ ಉಪಯುಕ್ತವಾಗಿದೆ. ಇನ್ನುಳಿದಂತೆ ಜನಪದ ನ್ಯಾಯದ ವರ್ಗೀಕರಣ, ಅದು ಗಾದೆ, ಲಾವಣಿ, ಕಥೆ-ಕಾದಂಬರಿ ಹಾಗೂ ಕಾವ್ಯಗಳಲ್ಲಿ ಕಾಣಿಸಿಕೊಂಡ ಬಗೆಯನ್ನೆಲ್ಲ ಸ್ವಾರಸ್ಯಕರವಾಗಿ ಹೆಕ್ಕಿ ತೆಗೆದು ವಿಶ್ಲೇಷಿಸಿದ್ದಾರೆ. ಜನಪದ ದೈವಗಳು ಮತ್ತು ಆಧುನಿಕತೆಯ ಕುರಿತಾದ ಸಂಶೋಧನಾತ್ಮಕ ಲೇಖನವೊಂದು, ಆಧುನಿಕತೆ ಆದಿವಾಸಿ ಧರ್ಮ, ಗ್ರಾಮದೇವತೆ ಕಲ್ಪನೆಗಳನ್ನೆಲ್ಲ ಹೇಗೆ ಪ್ರಭಾವಿಸಿದೆ ಎಂಬುದನ್ನು ಸ್ಥೂಲವಾಗಿ ವಿವರಿಸುತ್ತದೆ.

ಅಂಥವೇ ಸಮಾಜಶಾಸ್ತ್ರೀಯ ಕಣ್ಣಿಲೆಯ ೧೩ ಲೇಖನಗಳು 'ದೊಡ್ಡ ಬೆಟ್ಟದಿಂದ ಇನ್ನಿಷ್ಟು ನೋಟಗಳು' ಕೃತಿಯಲ್ಲಿ ಸಂಕಲಿತವಾಗಿವೆ. ಆದರೆ ಇವುಗಳನ್ನು ಒಟ್ಟಾರೆ ವೈಚಾರಿಕ ಬರಹಗಳೆಂದು ಹೇಳಬಹುದು. ಕನ್ನಡದಲ್ಲಿ ಇಂಥ ಬರಹದ ಫಸಲು ತೀರ ಕಡಿಮೆ. ಈ ಕೃತಿಯಲ್ಲಿ ಅಲ್ಲಲ್ಲಿ ಉಳಿದಿರುವ ಮುದ್ರಣದೋಷಗಳು ಒಂದು ಕಪ್ಪು ಚುಕ್ಕೆಯಾಗಿವೆ. ಇಲ್ಲಿಯ ಲೇಖನಗಳ ಹರವು ಹಾಗೂ ಆಳ ವಿಶಾಲವಾದದ್ದು. ಅಲ್ಲಲ್ಲಿ ಕೆಲ ವಿಶೇಷ ಸಂದರ್ಭಗಳಿಗೆ ಬರೆದ ಲೇಖನಗಳು ತೀರ ಸಂಕ್ಷಿಪ್ತವೆನಿಸಿದರೂ ವಿಷಯ ವಿವೇಚನೆಗೆ ಧಕ್ಕೆಯನ್ನಂತೂ ತರುವುದಿಲ್ಲ. ಲೇಖಕರ ಪರಿಸರ ಕಾಳಜಿ ಬಿಂಬಿಸುವ ಎರಡು ಲೇಖನಗಳು, ಮೊಯಿಲಿ ಶ್ರೀರಾಮಾಯಣ ಮಹಾನ್ವೇಷಣೆಯ ಕುರಿತಾದ ಮತ್ತೆರಡು ಲೇಖನಗಳು, ಶಿಕ್ಷಣದ ಕುರಿತಾದ ವಿಷಯಗಳ ಗೊಂಡಾರಣ್ಯ ಲೇಖನವನ್ನು ಹೊರತುಪಡಿಸಿದರೆ ಉಳಿದವುಗಳೆಲ್ಲ ಸಮಾಜಶಾಸ್ತ್ರೀಯ ಬರವಣಿಗೆಗಳೇ. ಪ್ರಬಲ ಜಾತಿ ಪರಿಕಲ್ಪನೆಯ ಕುರಿತಾದ ಲೇಖನವಾಗಲೀ, ಸಾಮಾಜಿಕ ನ್ಯಾಯ ಹಾಗೂ ಸಾಮಾಜಿಕ ಸಂಬಂಧಗಳ ಶಿಥಿಲತೆಯ ಕುರಿತಾದ ಅಥವಾ ಸಾಮಾಜಿಕ ಸಂಶೋಧನೆಯ ಕುರಿತ ಲೇಖನಗಳೆಲ್ಲ ಸ್ಪಷ್ಟ ಹಾಗೂ ಸಂಕ್ಷಿಪ್ತ ವಿವರಣೆಗಳಿಂದಾಗಿ ಆಪ್ತವೆನಿಸುವ ಜೊತೆಗೇ ಆಸಕ್ತರ ಜ್ಞಾನ ಕ್ಷಿತಿಜವನ್ನು ವಿಸ್ತರಿಸುವಲ್ಲಿ ಸಫಲವಾಗುತ್ತವೆ. ಹೆಚ್ಚುಕಡಿಮೆ ಕಣ್ಮರೆಯ ಹಂತದಲ್ಲಿರುವ

`ಹೂವಿನಕೋಲು' ಎಂಬ ಒಂದು ಸಂಕೀರ್ಣ ಕಿರುಕಲಾಪ್ರಕಾರ ಹೇಗೆ ಪುನರುಜ್ಜೀವನದ ನಿರೀಕ್ಷೆಯಲ್ಲಿದೆ ಹಾಗೂ ಆ ನೆಲೆಯಲ್ಲಿ ವ್ಯಕ್ತಿ-ಸಂಘ-ಸಂಸ್ಥೆಗಳು ಏನೆಲ್ಲ ಮಾಡಲು ಸಾಧ್ಯ ಎಂಬುದರ ಕುರಿತಾದ ಬರಹ ಲೇಖಕರ ಜಾನಪದ ಕಾಳಜಿ ಸೂಚಿಸುತ್ತದೆ. ಕರ್ನಾಟಕದ ಬುಡಕಟ್ಟುಗಳ ಕಟ್ಟೆಮನೆಗಳ ಕುರಿತಾದ ಸಂಶೋಧನಾತ್ಮಕ ಲೇಖನವೊಂದು ಗಮನಾರ್ಹವಾಗಿದೆ. ಬುಡಕಟ್ಟು ನ್ಯಾಯದ ಸ್ವರೂಪ ಅಧ್ಯಯನ ಮಾಡಬಯಸುವವರಿಗೆ ಇದೊಂದು ಉತ್ತಮ ಆಕರ ಪ್ರಬಂಧ. ಒಟ್ಟಾರೆಯಾಗಿ ಎರಡೂ ಸಂಕಲನಗಳು ಕರ್ನಾಟಕದಲ್ಲಿ ಸಮಾಜಶಾಸ್ತ್ರ, ಮಾನವಶಾಸ್ತ್ರದ ಅಧ್ಯಯನ ಮಾಡುವವರಿಗೆ. ಈ ಶಿಸ್ತುಗಳಲ್ಲಿ ಕನ್ನಡದಲ್ಲಿ ಬರವಣಿಗೆ ಮುಂದುವರಿಸಬಯಸುವವರಿಗೆ ಮಾದರಿ ಎನ್ನಬಹುದಾದಷ್ಟು ಮೇಲ್ಮಟ್ಟದವು. ನಾಗೇಶರ ಮಾಗಿದ ಮನಸ್ಸು ಮತ್ತು ಲೇಖನಿ ಈ ಕೃತಿಗಳಲ್ಲಿ ಫಲಿಸಿದೆ.

– ಶಿವಾನಂದ ಗೆಟ್ಟಿಗರ. ಡಿ-೫, ಸ್ಟಾಫ್ ಕ್ವಾರ್ಟರ್ಸ್, ಕ.ವಿ.ವಿ. ಆವರಣ, ಧಾರವಾಡ - ೫೮೦ ೦೦೩

೫. *ತೆರೆಮರೆ :* ಡಾ. ರಾಮಕೃಷ್ಣ ಮರಾಠೆ

ಸಿವಿಜಿ ಪಬ್ಲಿಕೇಶನ್ಸ್, ೭೦, ೩ ನೇ ಮೇನ್, ಜಬ್ಬಾರ ಬ್ಲಾಕ್, ವೈಯಾಳಿ ಕಾವಲ್, ಬೆಂಗಳೂರು-೫೬೦ ೦೦೩, ಪ್ರ.ಮು. ೨೦೦೪, ಪು. ೧೩೨, ರೂ. ೧೦೦/-

ವೃತ್ತಿರಂಗಭೂಮಿಯ ಹಿನ್ನೆಲೆ ಮುನ್ನೆಲೆಗಳನ್ನು ವಿವೇಚಿಸುವ `ತೆರೆಮರೆ'ಯಲ್ಲಿ ಮರಾಠೆಯವರು ವಿವಿಧ ಸಂದರ್ಭಗಳಲ್ಲಿ ಬರೆದ ಹತ್ತು ಲೇಖನಗಳಿವೆ. ವೃತ್ತಿರಂಗಭೂಮಿ ಹುಟ್ಟಿಕೊಳ್ಳುವುದಕ್ಕಿದ್ದ ಪ್ರೇರಣೆ, ಮೊದಲ ದಿನಗಳಲ್ಲಿದ್ದ ಅದರ ಸ್ವರೂಪ ಇತ್ಯಾದಿ ಪ್ರಾರಂಭಿಕ ಲೇಖನಗಳು. ಮುಂದಿನ ಲೇಖನಗಳಲ್ಲಿ ನಟರು, ನಾಟಕ ಕಂಪೆನಿಗಳ ಆಗುಹೋಗುಗಳು ಇತ್ಯಾದಿ ವಿವರಗಳಿವೆ.

ಬಹುಮುಖ್ಯ ಅಂಶವೆಂದರೆ ಪ್ರತ್ಯಕ್ಷವಾಗಿ ಅಲ್ಲದಿದ್ದರೂ ವೃತ್ತಿರಂಗಭೂಮಿ ಸ್ವಾತಂತ್ರ್ಯ ಹೋರಾಟದ ಭಾಗವಾದದ್ದು ಹೇಗೆ?— ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ವೃತ್ತಿರಂಗಭೂಮಿ ಜನಪ್ರಚೋದಕವಾದುದು ಹೇಗೆ? ಇತ್ಯಾದಿ ವಿವರಗಳು ಇಲ್ಲಿ ಲಭ್ಯ. ಅಂದಿನ ದಿನಗಳಲ್ಲಿ ರಂಗಭೂಮಿ ಕೇವಲ ಮನೋರಂಜನೆ ನೀಡುವ ಉದ್ದೇಶವನ್ನಷ್ಟೇ ಹೊಂದಿತ್ತು ಎಂಬ ಮಾತಿಗೆ ತದ್ವಿರುದ್ಧವಾಗಿ ನಾಟಕ ನೋಡಿ ಹೊರಬರುವ ಪ್ರೇಕ್ಷಕರು 'ಮಹಾತ್ಮಾ ಗಾಂಧೀ ಕೀ ಜೈ' ಎಂಬುದಾಗಿ ಘೋಷಣೆ ಕೂಗುತ್ತಿದ್ದರಂತೆ. ಹಾಗೇನೆ ಬೆಳಗಾವಿ ಕರ್ನಾಟಕಕ್ಕೆ ಸೇರಲೇಬೇಕೆಂಬ ಮಹತ್ವದ ಘೋಷಣೆಗಳಿಗೆ ಹಾಗೂ ಕರ್ನಾಟಕ ಏಕೀಕರಣಕ್ಕೆ ವೃತ್ತಿರಂಗಭೂಮಿ ತನ್ನದೇ ಆದ ದೇಣಿಗೆ, ಪ್ರೇರಣೆ ನೀಡಿದೆ ಎಂಬುದರ ಬಗ್ಗೆ ಡಾ. ಮರಾಠೆಯವರಿಗೆ ಯಾವ ಸಂದೇಹವೂ ಇಲ್ಲ.

ಇವುಗಳೆಲ್ಲ ಚಾರಿತ್ರಿಕ ಸತ್ಯಗಳಾಗಿದ್ದಲ್ಲಿ ವೃತ್ತಿರಂಗಭೂಮಿ ಸ್ವಾತಂತ್ರ್ಯಪೂರ್ವದಿಂದ ಇಂದಿನ ತನಕ ಕನ್ನಡದ ಬದುಕಿನ ಅನಿವಾರ್ಯ ಅಂಗವೆಂಬುದೂ ಸಾಬೀತಾಗುತ್ತದೆ. ವೃತ್ತಿರಂಗಭೂಮಿ ಆಧುನಿಕ ಜಾಗತೀಕೃತಗೊಂಡ-ಗೊಳ್ಳುತ್ತಿರುವ ಯುಗದಲ್ಲಿ ಎದುರಿಸುತ್ತಿರುವ ಗಂಭೀರ ಸಮಸ್ಯೆಗಳ ಬಗ್ಗೆ ಕೂಡ ಇಲ್ಲಿನ ಲೇಖನಗಳು ಕಳಕಳಿ ವ್ಯಕ್ತಪಡಿಸಿದೆ. ವೃತ್ತಿರಂಗಭೂಮಿ ಪುನರಪಿ ಚೇತನಗೊಳ್ಳಲಿ ಎಂಬ ಮರಾಠೆಯವರ ಮಾತಿನಲ್ಲಿ ನಿರೀಕ್ಷೆ-ನಿರಾಸೆಗಳೆರಡೂ ಹಾಸುಹೊಕ್ಕಾಗಿವೆ. ಬಿಡಿಲೇಖನಗಳು ಇಡಿಯದೊಂದು ಕಲ್ಪನೆ ನೀಡುತ್ತಿರುವುದೇ `ತೆರೆಮರೆ'ಯ ಯಶಸ್ಸಿನ ಗುಟ್ಟು.

– ಡಾ. ನಾ. ದಾಮೋದರ ಶೆಟ್ಟಿ, ಪ್ರಸಾಧನ, ಭಾರತೀನಗರ, ಬಿಜೈ, ಮಂಗಳೂರು-೫೭೫ ೦೦೪

೬. *ಸೋಮಣ್ಣನ ಸ್ಟಾಕ್‌ನಿಂದ :* ಎಚ್. ಜಿ. ಸೋಮಶೇಖರ ರಾವ್

೧೭, ೧೫ನೇ ಮೇನ್, ೬ನೇ ಘಟ್ಟ, ಬನಶಂಕರಿ, ಬೆಂಗಳೂರು-೭೫, ಪ್ರ.ಮು. ೨೦೦೧, ಪು. ೬೯೪, ರೂ. ೧೫೦/-

ಪತ್ರಕರ್ತ [illegible] ಅಗ್ರಹದಿಂದ ಆಕಸ್ಮಿಕವೆಂಬಂತೆ ಬರೆಯಲ್ಪಟ್ಟ ಈ ನೆನಪುಗಳ ಕಥಾನಕ ಸುಮಾರು ಐವತ್ತು ಕಂತುಗಳಲ್ಲಿ `ಕರ್ಮವೀರ'ದಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದ್ದು ಈಗ ಪುಸ್ತಕ

ರೂಪದಲ್ಲಿವೆ. ವ್ಯಕ್ತಿಗಾಥಾ ರೂಪದಲ್ಲಿ ತುಂಬ ಪರಿಚಿತ ವ್ಯಕ್ತಿತ್ವವಾದ ಎಚ್. ಜಿ. ಸೋಮಶೇಖರರಾವ್ ಇವರ ಲೇಖಕರು. ವೃತ್ತಿಜೀವನ ಕೆನರಾ ಬ್ಯಾಂಕಿನಲ್ಲಿ ಕಳೆದರೂ ಪ್ರವೃತ್ತಿಯಿಂದ ನಟರಾಗಿ ಬೆಳೆದ ಸೋಮಶೇಖರರಾವ್ ಬರವಣಿಗೆಯಲ್ಲೂ ಪ್ರತಿಭಾಸಂಪನ್ನರೆಂಬುದು ಈ ಕೃತಿಯಲ್ಲಿ ವ್ಯಕ್ತವಾಗಿದೆ.

ಇದೊಂದು ಬಗೆಯಲ್ಲಿ ಆತ್ಮಚರಿತ್ರೆಯಾದರೂ ಸೋಮಣ್ಣನ ನೆನಪಿನ ಈ ಸುರುಳಿಯಲ್ಲಿ ಸ್ವಾತಂತ್ರ್ಯಪೂರ್ವ-ಸ್ವಾತಂತ್ರ್ಯೋತ್ತರ ಕಾಲದ ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಮತ್ತು ಕೌಟುಂಬಿಕ ಬದುಕಿನ ಮೌಲ್ಯಗಳ ಚಿತ್ರಣವೂ ಇದೆ. ಆದರೆ ಇದು `ಘನಗಂಭೀರ'ವಾದ ವಿವರಣೆಯಲ್ಲ. ಎಂತಲೇ ಸೋಮಣ್ಣ ಇದನ್ನು ಹಾಸ್ಯಲೇಪಿತ ವಿಚಾರಪೂರಿತ ಬರಹಗಳು ಎಂದು ಕರೆದಿದ್ದಾರೆ.

ಅವರು ಹೇಳುತ್ತಾರೆ : ``ನಾನೊಬ್ಬ ಸಾಮಾನ್ಯವ್ಯಕ್ತಿ, ಸಾಮಾನ್ಯರ ನಡುವೆ ಬದುಕಿದ್ದು, ಸಾಧಾರಣತೆಯನ್ನೇ ನನ್ನ ಸಂಪತ್ತನ್ನಾಗಿ ಬಳಸುತ್ತಿರುವವನು. ಇಲ್ಲಿ ದಾಖಲಿಸುತ್ತಿರುವ ಅನುಭವಗಳು ಒಬ್ಬ ಪ್ರಸಿದ್ಧ ವ್ಯಕ್ತಿಯ ಅಸಾಧಾರಣ ಅನುಭವದ ಕತೆಯಲ್ಲ.'' ಈ unassuming ಗುಣ ಇಲ್ಲಿಯ ಬರವಣಿಗೆಯಲ್ಲಿ ಇದೆ. ಮುಂದುವರಿದು ಅವರು ಹೇಳುತ್ತಾರೆ : ``ನಮ್ಮ ನಾವೇ ಆವಾಗ ತುಂಬಾ ಎಚ್ಚರಿಕೆ ವಹಿಸುವುದು ಅಗತ್ಯ. ನಾನು ಬರೆದದ್ದು ನಿಜವೋ ಕಟ್ಟುಕತೆಯೋ ಕೇಳುವವರ್ಯಾರು? ಎಚ್ಚರದ ಪೋಷಾಕಿನಲ್ಲಿ ನಿಜದ ಬೆಳಕಿನ ಮುಂದೆ, ನಾನು ಇರುವಂತೆಯೇ ನಿಲ್ಲುವ ಧೈರ್ಯಕ್ಕೆ ಮಾತ್ರ ನನ್ನಲ್ಲಿ ಕೊರತೆಯಿಲ್ಲ ಎಂದಷ್ಟೇ ಹೇಳಬಲ್ಲೆ''.

ಈ ಕತೆ ಇವರ ಪೂರ್ವಿಕರ ವ್ಯಕ್ತಿಚಿತ್ರಣದಿಂದ ಆರಂಭವಾಗುತ್ತದೆ. ಬಡ್ಡಿವ್ಯವಹಾರದ ಓಸ್ಲೆಲೆಯ ಮನೆತನದ. ಹೆಸರಿಗೆ ಮೊದಲು ಸಾಹುಕಾರ್ ಎಂದು ಬರೆದುಕೊಳ್ಳುವಂಥ ಸ್ಥಿತಿವಂತಿಕೆಯ ಇವರಜ್ಜ (ತಂದೆಯ ತಂದೆ) ರಾಮಣ್ಣ ಹಾಗೂ ನಿಂತಲ್ಲಿ ನಿಲ್ಲದ, ಯಾರ ಹಂಗಿಗೂ ಬೀಳದ ತಂದೆ ಗುಂಡಣ್ಣನವರ ಸ್ವಭಾವ ವೈಲಕ್ಷಣ್ಯಗಳ ವಿವರಗಳು ಕುತೂಹಲಕಾರಿಯಾಗಿವೆ. ಅಜ್ಜನ ಬಂಡಾಯ ಪ್ರವೃತ್ತಿ, ಅಹಂಕಾರವೆಂಬಷ್ಟು ಸ್ವಾಭಿಮಾನ, ಅತಿಕೋಪ ಹಾಗೂ ಜುಗ್ಗತನಗಳ ಕುರಿತು ತಾವು ಕೇಳಿದ ವಿವರಗಳನ್ನು ಲೇಖಕರು ದಾಖಲಿಸಿದ್ದಾರೆ. ಮನುಷ್ಯರು ಸ್ಟೀರಿಯೋಟೈಪ್ ಎಂಬಂತಾಗುತ್ತಿರುವ ಈಗ ಇಂಥ ವ್ಯಕ್ತಿತ್ವಗಳ ಸ್ವಭಾವ ವೈಶಿಷ್ಟ್ಯಗಳು ಆಪ್ತವೆನಿಸುತ್ತವೆ.

ಇದಕ್ಕಿಂತ ಆಪ್ತವೆನ್ನಿಸುವದು ಸ್ವತಃ ಲೇಖಕರ ಬಾಲ್ಯದ, ಯೌವನಾವಸ್ಥೆಯ, ಪ್ರೌಢ ಬದುಕಿನಲ್ಲಿ ವೈವಿಧ್ಯಮಯ ರಂಗಗಳ ಅನುಭವದ ವಿವರಗಳು ಪ್ರತಿಭಾವಂತರಾದ ಅಣ್ಣಂದಿರ ನಡುವೆ ಉಂಡಾಡಿ ಗುಂಡನಂತೆ ಮೊಂಡುಬಿದ್ದ ಹುಡುಗನಾಗಿ ತಾವು ಬೆಳೆದ ಬಗೆಯನ್ನು ಸಂಕೋಚವಿಲ್ಲದೆ ದಾಖಲಿಸಿಕೊಳ್ಳುವ ಸೋಮಶೇಖರರಾವ್ ಚಿತ್ರದುರ್ಗ, ಮೈಸೂರು, ಮೈಸೂರಿನಲ್ಲಿ ಮೂರು ವರ್ಷಗಳ ವಾಸದ ನಂತರ ಪುನಃ ಚಿತ್ರದುರ್ಗ ಹೀಗೆ ಬದಲಾದ ತಮ್ಮ ವಾಸ್ತವ್ಯಗಳ ಕಾಲದ ವಿಭಜನೆಗಳನ್ನು ರಸವತ್ತಾಗಿ ನಿರೂಪಿಸಿದ್ದಾರೆ. ಅವರ ಶೈಲಿಯ ಒಂದು ಸ್ಯಾಂಪಲ್ : ``...ಊರಿನವರಾಗಲೀ, ಸ್ಕೂಲಿನವರಾಗಲೀ, ನಮ್ಮ ಮನೆಯವರಾಗಲೀ ಯಾರೂ ನಿರೀಕ್ಷಿಸಿರದ ಒಂದು ಪವಾಡ ನಡೆಯಿತು. ನನಗೆ ಎಸ್.ಎಸ್.ಎಲ್.ಸಿ. ಪಾಸಾಯಿತು''.

ಆ ಮೇಲೆ ಇವರು ಆಕಸ್ಮಿಕವಾಗಿ ಬೆಳೆದ ತಮ್ಮ ರಂಗಾಸಕ್ತಿ, ರಂಗಚಟುವಟಿಕೆಗಳ ಕೆಲ ವಿವರಗಳನ್ನು ನೀಡಿ ಮುಂದೆ ತುಮಕೂರಿನ ಕಾಲೇಜಿನಲ್ಲಿ ಬಿ.ಎ. ವ್ಯಾಸಂಗದ ಅವಧಿಯ ತಮ್ಮ `ಪಠ್ಯಬಾಹಿರ' ಚಟುವಟಿಕೆಯ ಚಿತ್ರಗಳನ್ನು ನೀಡಿದ್ದಾರೆ. ವ್ಯಂಗ್ಯಮಿಶ್ರಿತ ಶೈಲಿಯಲ್ಲಿ ಸಾಗುವ ಇವರ ಬರವಣಿಗೆಗೆ ಓದಿಸಿಕೊಂಡು ಹೋಗುವ ಗುಣ ತಾನೇ ತಾನಾಗಿದೆ. ಉದಾ : ``ಆ ಎರಡು ವರ್ಷದಲ್ಲಿ ನಾನು ಪುಸ್ತಕ ಹಿಡಿದು ಓದಿದ್ದನ್ನು ನಾನೇ ನೋಡಿರಲಿಲ್ಲ. ಹಾಗೆ ಸೀರಿಯಸ್ ಆಗಿ ಅಭ್ಯಾಸ ಮಾಡುವದಾದರೆ ತುಮಕೂರಿನ ಬೀದಿಗಳನ್ನು ಸವೆಸುವವರ್ಯಾರು? ಮೀಸೆ ತಿರುವುತ್ತ ಓಡಾಡುವರ್ಯಾರು?'' ಇಂಥವರಿಗೆ ಪತ್ರಿಕೆಯಲ್ಲಿ ಪ್ರಕಟವಾದ ಮೈಸೂರು ವಿಶ್ವವಿದ್ಯಾಲಯದ ಪದವಿ ಪರೀಕ್ಷೆ ಫಲಿತಾಂಶದ ಮೊದಲು ಹತ್ತು ರ್‍ಯಾಂಕುಗಳ ಪಟ್ಟಿಯಲ್ಲಿ ತಮ್ಮ ಹೆಸರು ಕಂಡಾಗ ಹೇಗಾಗಿರಬೇಡ' ಅವರು ಬರೆಯುತ್ತಾರೆ :

“ಎಲ್ಲೋ ನನಗೆ ಏನೋ ಭ್ರಮೆ ಹಿಡಿದ ಹಾಗೆ, ಕನಸಿನಲ್ಲಿ ಕಂಡ ಹಾಗೆ, ಅಲ್ಲೆಲ್ಲೋ ಎಚ್. ಜಿ. ಸೋಮಶೇಖರರಾವ್ ಎಂದು ಓದಿದ ಹಾಗಾಯಿತು. ಕಣ್ಣು ಕತ್ತಲಿಟ್ಟಂತಾಯಿತು, ಕೂತಿದ್ದ ಭೂಮಿಯೇ ಬಿರುಕು ಬಿಟ್ಟು, ನನ್ನನ್ನು ಒಳಗೆ ಸೆಳೆದುಕೊಂಡತಾಯಿತು. ಮೈ ಬೆವರಿತು ದೇಹ ತುಸು ನಡುಗಿತು... ಒಟ್ಟಾರೆ ವಿಶ್ವವಿದ್ಯಾಲಯದ ಆ ವರ್ಷದ ಪಟ್ಟಿಯಲ್ಲಿ ಬಿ.ಎ. ರ್‍ಯಾಂಕ್ ಪದವೀಧರರ ಮಧ್ಯೆ ನನ್ನ ಹೆಸರೂ ಸಿಕ್ಕಿ ಒದ್ದಾಡುತಿತ್ತು...”

ಮಹಾರಾಜಾ ಕಾಲೇಜಿನಲ್ಲಿ ಓದುತ್ತಿದ್ದಾಗ ನೆಲೆ ನಿಲ್ಲಲೆಂದು ಒಂದು ವಸತಿಯನ್ನು ಹುಡುಕಿಕೊಂಡು ಹೊರಟು ಗಡಿಯಾರ ರಿಪೇರಿ ಅಂಗಡಿ-ಕಂ-ಮನೆಯೊಂದರಲ್ಲಿ ತಂಗುವ ಸೋಮಣ್ಣ ಆ ಅಂಗಡಿಯಾತ, ಆ ಪರಿಸರ, ಅಲ್ಲಿನ ನಿಗೂಢಗಳು, ಅನುಭವಗಳನ್ನು ಚಿತ್ರಿಸುವಲ್ಲಿ ತಮ್ಮೊಳಗೊಬ್ಬ ಪರಿಣಾಮಕಾರಿ ಬರಹಗಾರನಿರುವ ಸ್ಪಷ್ಟ ಪುರಾವೆಯನ್ನೊದಗಿಸಿದ್ದಾರೆ.

ಪುಸ್ತಕದ ಕೊನೆಯ ಕೆಲವು ಅಧ್ಯಾಯಗಳು ಅವರ ಚಿತ್ರರಂಗದ ಅನುಭವಗಳ ಕಥನಕ್ಕೆ ಮೀಸಲಾಗಿವೆ. ‘ಗೀಜಗನ ಗೂಡು’, ‘ಸಾವಿತ್ರಿ’, ‘ಮಿಥಿಲೆಯ ಸೀತೆಯರು’, ‘ಹರಕೆಯ ಕುರಿ’ ಇತ್ಯಾದಿ ಚಲನಚಿತ್ರಗಳಲ್ಲಿ; ‘ಸಂಕ್ರಾಂತಿ’, ‘ಜೋಕುಮಾರಸ್ವಾಮಿ’, ‘ಕದಡಿದ ನೀರು’ ಮೊದಲಾದ ನಾಟಕಗಳಲ್ಲಿ ಅಭಿನಯಿಸಿದ ಸೋಮಶೇಖರರಾವ್ ಅಲ್ಲೂ ತಮ್ಮ ಪ್ರತಿಭೆಯನ್ನು ಮೆರೆದವರು. ಮೊದಲಿಂದ ಕೊನೆವರೆಗೆ ಒಂದೇಟಿಗೆ ಓದಿಸಿಕೊಂಡು ಹೋಗುವ ಗುಣ ಸುಮಾರು ನಾನೂರು ಪುಟಗಳ ಗಾತ್ರದ ಈ ಪುಸ್ತಕಕ್ಕಿದೆ.

– ಅಶೋಕ ಶೆಟ್ಟರ್, ೩೭, ಶಾಂತಿಸಾಗರ, ತಪೋವನ, ಧಾರವಾಡ - ೫೮೦ ೦೦೩

೭. *ಜನಪದ ಕಥನ ಗೀತೆಗಳು :* ಸಂ. ಡಾ. ಪಿ. ಕೆ. ಖಂಡೋಬಾ, ಡಾ. ಟಿ. ಎಂ. ಭಾಸ್ಕರ್

ಪ್ರಸಾರಾಂಗ, ಗುಲಬರ್ಗಾ, ವಿಶ್ವವಿದ್ಯಾಲಯ, ಗುಲಬರ್ಗಾ-೫೮೫ ೧೦೬, ಪ್ರ.ಮು. ೨೦೦೪, ಪು. ೧೩೨, ರೂ. ೫೦/-

ವಿರಾಟ್ ಸಾಹಿತ್ಯವೃಕ್ಷದ ಹೂ ಹಣ್ಣುಗಳಿಗೆಲ್ಲಾ ಕಸುವು ನೀಡಿದ ಬೇರು ಜನಪದ ಸಾಹಿತ್ಯ. ಅದರಲ್ಲಿಯೂ ಕಥನ ಗೀತೆಗಳು ಜನಪದರ ಜೀವನವಿಧಾನದ ಸಂವಿಧಾನಗಳು.

ಪ್ರಸ್ತುತ ಸಂಕಲನದಲ್ಲಿ ಕಥನಗೀತೆ, ಖಂಡಕಾವ್ಯ, ಲಘುಕಥನಗೀತೆ ಸೇರಿದಂತೆ ಒಟ್ಟು ೧೬ ಗೀತೆಗಳಿವೆ. ಅವುಗಳಲ್ಲಿ ಸಮುದಾಯದ ಆರ್ಥಿಕ ಜೀವನವನ್ನು ನಿರ್ಧರಿಸುವ ಮಳೆ ಹಾಗೂ ಅದರ ವೈಪರೀತ್ಯದಿಂದಾಗುವ ಬರದ ಕಠೋರ ಚಿತ್ರಣದ ಹಾಡುಗಳು ಎರಡಿದ್ದರೆ, ಕಾಯಕ ಮತ್ತು ದಾಸೋಹದ ಪರಮ ಸಂಕೇತಗಳಾದ ಮಾದಾರ ಚೆನ್ನಯ್ಯ ಹಾಗೂ ಕಲ್ಯಾಣ ಬಸವಯ್ಯ ಇವರನ್ನು ಕುರಿತು ಎರಡು ಹಾಡುಗಳಿವೆ. ಇವುಗಳನ್ನು ಹೊರತುಪಡಿಸಿ ಉಳಿದ ಹನ್ನೊಂದು ಹಾಡುಗಳು ಮಹಿಳೆಯರನ್ನು ಕುರಿತಾಗಿವೆ. ಒಂದು ಹಾಡು ವಚನ ಪರಿಪಾಲನೆಯ ಮಹತ್ವ ಸಾರುವ ಗೋವಿನ ಹಾಡಾಗಿದೆ.

ಇಷ್ಟೊಂದು ಹಾಡುಗಳು ಮಹಿಳೆಯರನ್ನೆ ಕುರಿತಾಗಿರುವದು ಜನಪದ ಜೀವನ ವಿಧಾನದಲ್ಲಿ ಅವಳ ವ್ಯಾಪ್ತಿ ಎಷ್ಟು ಎಂಬುದನ್ನು ಸೂಚಿಸುವುದಾಗಿದೆ. ವ್ಯಾಪ್ತಿಯೆಂದಾಕ್ಷಣ ಅವಳ ಹಿರಿಮೆಯನ್ನು ಮಾತ್ರ ಗಮನಿಸುವಂತಿಲ್ಲ. ಅವಳ ಶೋಷಣೆಯು, ಬಲಿದಾನದ, ತ್ಯಾಗದ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳ ಬೇಕಾಗುತ್ತದೆ. ಹೆಣ್ಣು ಕೌಟುಂಬಿಕವಾಗಿ, ಸಾಮಾಜಿಕವಾಗಿ ಅನೇಕ ಅಗ್ನಿಪರೀಕ್ಷೆಗಳನ್ನು ದಿನನಿತ್ಯದ ಜೀವನದಲ್ಲಿ ಎದುರಿಸಬೇಕು. ಅದಕ್ಕೆ ಸಾಕ್ಷಿಯಾಗಿ ಭಾಗೀರಥಿ, ಉತ್ತರದೇವಿ, ನೀಲಗಂಗಾ, ಗಂಗೀ ಗೌರಿ, ಈರೋಬಿ, ಕಾಶೀಬಾಯಿ, ಕೊಂತ್ಯಮ್ಮ, ಅಕ್ಕನಾಗಮ್ಮ, ಕೆಂಚಮ್ಮ ಇಂದಿಗೂ ಹೆಸರು ಬದಲಿಸಿಕೊಂಡು ನಮ್ಮ ಸುತ್ತಮುತ್ತಲೇ ಇದ್ದಾರೆ.

ಜನಪದ ಜೀವನದ ಮುಖ್ಯ ಲಕ್ಷಣಗಳೆಂದರೆ, ಮುಗ್ಧತೆ, ಜೀವನಪ್ರೀತಿ, ಹಂಚಿಕೊಂಡು ಬಾಳುವುದು, ಪೂರ್ವಾಪರ ಆಲೋಚನೆಗಳಿಲ್ಲದ ಸಿಟ್ಟು ಇವೆಲ್ಲವುಗಳನ್ನು ಇಲ್ಲಿನ ಗೀತೆಗಳಲ್ಲಿ ಕಾಣಬಹುದು. ಹೆಚ್ಚಿನ ಅಧ್ಯಯನಕ್ಕೆ ಆಕರ ಸೂಚಿ, ವರ್ಗೀಕರಣ ಸೂಚಿ, ಸಾಂಸ್ಕೃತಿಕ ಪದಕೋಶ ಮಹತ್ವದ ಆಧಾರಗಳಾಗಿವೆ.

೮. ವಿರಾಟಪರ್ವ ಸಂಗ್ರಹ : ಸಂ. ಡಾ. ಎಚ್. ಡಿ. ಪೋತೆ, ಡಾ. ಚನ್ನಬಸವ ಹಿರೇಮಠ

ಪ್ರಸಾರಾಂಗ, ಗುಲಬರ್ಗಾ, ವಿಶ್ವವಿದ್ಯಾಲಯ, ಗುಲಬರ್ಗಾ-೫೮೫ ೧೦೬, ಪ್ರ.ಮು. ೨೦೦೫, ಪು. ೮೫, ರೂ. ೫೦/-

ಕನ್ನಡ ನಾಡಿನ ಜಗಲಿಗಳ ಮೇಲೆ ನಿತ್ಯಪಠಣದ ಸ್ಥಾನ ಪಡೆದ ಕೆಲವೇ ಕೆಲವು ಗ್ರಂಥಗಳಲ್ಲಿ ಅತ್ಯಂತ ಜನಪ್ರಿಯವಾದ 'ಕರ್ಣಾಟ ಭಾರತ ಕಥಾಮಂಜರಿ'. ಹಲವು ನಾಯಕರುಳ್ಳ ಸಂಸ್ಕೃತ ವ್ಯಾಸಭಾರತವನ್ನು ಕೃಷ್ಣಕಥೆಯಾಗಿಸಿ ಕನ್ನಡೀಕರಿಸಿ ಉತ್ಸಾಹ ಮತ್ತು ಲಲಿತ ಲಯದ ಭಾಮಿನಿಯಲ್ಲಿ ಬಂಧಿಸಿದ ಮೊದಲ ಗ್ರಂಥವಿದು.

ಮೂಲ ಭಾರತದ ೧೮ ಪರ್ವಗಳಲ್ಲಿ ೧೦ ಪರ್ವಗಳನ್ನು ಮಾತ್ರ ಕುಮಾರವ್ಯಾಸ ಕನ್ನಡೀಕರಿಸಲು ಸಾಧ್ಯವಾಯಿತು. ಆ ಹತ್ತು ಪರ್ವಗಳಲ್ಲಿ ವಿರಾಟಪರ್ವದ ಸ್ಥಾನ ಪ್ರಮುಖವಾದುದು. ಪಾಂಡವರು ಕರಿ, ತುರಗ, ರಥ, ಅಷ್ಟೈಶ್ವರ್ಯ, ಅಧಿಕಾರಗಳನ್ನು ಕವಡೆಯ ದಾಳಕ್ಕೆ ಕಳೆದುಕೊಂಡು ೧೨ ವರ್ಷ ವನವಾಸ ಅನುಭವಿಸಿದ್ದಾರೆ, ಆದರೆ ಶರತ್ತಿನಂತೆ ಒಂದು ವರ್ಷದ ಅಜ್ಞಾತವಾಸವಿದೆ, ತಾವು ಇರುವುದು ಯಾರಿಗೂ ತಿಳಿಯುವಂತಿಲ್ಲ. ತಿಳಿದರೆ ಮತ್ತೆ ವನವಾಸ-ಅಜ್ಞಾತವಾಸ. ಅದನ್ನು ಕಳೆಯಲು ಪಾಂಡವರು ಆಯ್ಕೆ ಮಾಡಿಕೊಂಡ ಸ್ಥಳ ಕರ್ನಾಟಕದ ವಿರಾಟರಾಜನರಮನೆ.

ಅಲ್ಲಿ ಗಂಡರಾದ ಐವರು ಪಾಂಡುತನಯರು 'ಜವನ ಮಗ ಸನ್ಯಾಸಿವೇಷದಿ / ಪವನಸುತ ಬಾಣಸಿನ ಮನೆಯಲಿ / ದಿವಿಜರಾಯನ ತನಯನಿರ್ದ ಶಿಖಂಡಿ ವೇಷದಲಿ / ಜವಳಿ ಮಕ್ಕಳು ತುರಗ ಗೋವ್ರಜ / ನಿವಹರಾದರು ಕಮಲಮುಖಿ ಕಾ / ಲವನು ಕಳೆದಳು ರಾಯನೊಲುಮೆಯ ಕೆಳದಿಯರ ಕೂಡೆ' ಹೀಗಾಗಬೇಕಾಯಿತು. ದೈವ ಮುನಿಸಿಕೊಂಡಾಗ ಕಷ್ಟದ ಮೇಲೆ ಕಷ್ಟಗಳು ಬರುತ್ತವೆ. ಆಗ ಎಂಥೆಂಥವರೂ ಆತ್ಮಗೌರವ-ಪ್ರತಿಷ್ಠೆಗಳನ್ನು ಮರೆತು ವಾಸ್ತವದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ. ಹಾಗೇ ಆತ್ಮಸತ್ವವನ್ನು ಕಳೆದುಕೊಳ್ಳದಂತೆ ಬಾಳಬೇಕಾಗುತ್ತದೆ, ಅದಕ್ಕೆ ಉದಾಹರಣೆಯಾಗಿ ಕೀಚಕನ ಸಂದರ್ಭ ಬರುತ್ತದೆ; ಕೀಚಕನ ಮರಣ ಪಾಂಡವರಿಗೆ ಮತ್ತೂ ಪರೀಕ್ಷೆಯನ್ನೊಡ್ಡುತ್ತದೆ. ಹೀಗೆ, ಇಡೀ ವಿರಾಟಪರ್ವ ಕಷ್ಟದ ಮೇಲೆ ಕಷ್ಟಗಳು ಅವುಗಳ ನಡುವೆ ಬಾಳಿನ ದಾರಿ ಸಾಗಬೇಕಾದ ಮಾದರಿಯನ್ನು ಚಿತ್ರಿಸುತ್ತದೆ. ಆ ಕಾರಣ ಇಂದಿಗೂ ಕರ್ನಾಟಕದ ಹಳ್ಳಿಗಳಲ್ಲಿ ಅದರಲ್ಲಿಯೂ ಪ್ರಮುಖವಾಗಿ ಉತ್ತರ ಕರ್ನಾಟಕದ ಹಳ್ಳಿಗಳಿಗೆ ಬರಗಾಲದ ಮೇಲೆ ಬರಗಾಲ ಬಂದರೆ ಅಥವಾ ಮಳೆಗಾಲದಲ್ಲಿ ಬಹಳ ದಿನ ಮಳೆ ಹೋದರೆ ವಿಶೇಷವಾಗಿ ವಿರಾಟಪರ್ವದ ಪಾರಾಯಣ ನಡೆಯುತ್ತದೆ.

ಕವಿ-ಕಾವ್ಯ ವಿವೇಚನೆ, ಪಠ್ಯ ಮತ್ತು ಅರ್ಥಕೋಶ, ಸಂಪಾದನೆಯ ಸೊಗಸನ್ನು ಹೆಚ್ಚಿಸಿವೆ.

೯. ರಾಮಚಂದ್ರಚರಿತ ಪುರಾಣ ಸಂಗ್ರಹ : ಸಂ. ಡಾ. ಶಾಂತಿನಾಥ ದಿಬ್ಬದ, ಡಾ. ಎಸ್. ಶಿವಾನಂದ

ಪ್ರಸಾರಾಂಗ, ಗುಲಬರ್ಗಾ, ವಿಶ್ವವಿದ್ಯಾಲಯ, ಗುಲಬರ್ಗಾ-೫೮೫ ೧೦೬, ಪ್ರ.ಮು. ೨೦೦೫, ಪು. ೧೧೫, ರೂ. ೫೦/-

ಪಂಪನಿಂದ ಆರಂಭಗೊಂಡ ಲೌಕಿಕ-ಆಗಮಿಕ ಪರಂಪರೆಯನ್ನು 'ನಾಯಕನನ್ಯನಾಗೆ ಕೃತಿ-ವಿಶ್ರುತಮಾಗದು, ಉದಾತ್ತರಾಘವಂ ನಾಯಕನಾಗೆ ವಿಶ್ರುತಮೆನಿಪ್ಪುದು' ಎಂದು ಲೌಕಿಕವನ್ನು ಅಲ್ಲಗಳೆದು, ಕಾವ್ಯದ ನಾಯಕ ಯಾವತ್ತೂ ಉದಾತ್ತ ಗುಣವುಳ್ಳವನೆ ಆಗಿರಬೇಕೆಂದು ನಾಗಚಂದ್ರ ಮೊಟ್ಟಮೊದಲು ಪ್ರತಿಪಾದಿಸಿದ. ಇವನ ಈ ಅಭಿಪ್ರಾಯ ಜೈನೇತರರಾದ ಕುಮಾರವ್ಯಾಸ ಮತ್ತು ಚಾಮರಸರನ್ನೂ ಪ್ರಭಾವಿಸಿತು.

ಕನ್ನಡದಲ್ಲಿ ಪಂಪ ಜೈನಭಾರತ ಪರಂಪರೆಯನ್ನು ಆರಂಭಿಸಿದರೆ ನಾಗಚಂದ್ರ ಜೈನರಾಮಾಯಣ ಪರಂಪರೆಯನ್ನು ಆರಂಭಿಸಿದ. ಅದರಲ್ಲಿಯೂ ಅಂದಿನ ಕಾಲದಲ್ಲಿ ಜೈನರಲ್ಲಿ ಪ್ರಬಲವಾಗಿದ್ದ ದಿಗಂಬರ ಸಂಪ್ರದಾಯವನ್ನು ಬಿಟ್ಟು ಶ್ವೇತಾಂಬರ ಸಂಪ್ರದಾಯದ ವಿಮಲಸೂರಿಯ 'ಪಉಮಚರಿಯ'ದಿಂದ ವಸ್ತುವನ್ನು ಎತ್ತಿಕೊಂಡ, ಇದರ ಪ್ರಕಾರ ರಾಮ, ಲಕ್ಷ್ಮಣ, ರಾವಣರು ಎಂಟನೆಯ ಬಲದೇವ,

ವಾಸುದೇವ ಮತ್ತು ಪ್ರತಿವಾಸುದೇವರು. ಇಲ್ಲಿ ರಾಮ ವಿಷ್ಣುವಿನ ಅವತಾರವಲ್ಲ. ವೈದಿಕ ರಾಮಾಯಣದಲ್ಲಿ ರಾಮ ಅವತಾರಿ ಪುರುಷನಾದರೆ ಇಲ್ಲಿ ಆತ ಸಾಮಾನ್ಯ ಮನುಷ್ಯ, ಹಾಗಿದ್ದುಕೊಂಡೆ ಆತ ವಿಶಿಷ್ಟ ಸಾಧನೆಯನ್ನು ಮಾಡಿ ಜನತೆಗೆ ಆತ್ಮೀಯವಾದ ಆದರ್ಶ ಪುರುಷ.

ಹಾರ ನಾರೀಚಿ ಮಂಜರಿ ಸುಧಾರಸಧಾರೆ ಎನ್ನುವ ಸೀತೆಯ ಸೌಂದರ್ಯ ವರ್ಣಿಸುವ ಪದ್ಯ, ಅಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೇ ಎನ್ನುವ ರಾವಣನ ಚಿತ್ತಚಾಂಚಲ್ಯದ, ವಿಷಯಾತುರ ಭಾವದ ಪದ್ಯ ಕಿವಿಯಲ್ಲಿ ಸದಾ ಗುಣಗುಣಿಸುತ್ತಲೇ ಇರುತ್ತವೆ. ನಾಗಚಂದ್ರ ಸುನಾಮಿಯ ಅನುಭವಕ್ಕೆ ಒಳಗಾಗಿದ್ದನೋ ಇಲ್ಲವೋ ತಿಳಿಯದು, ಆದರೆ ಅಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೇ ಎನ್ನುವ ಅಭಿಪ್ರಾಯ ತಾಳಿದ್ದು ಮಾತ್ರ ಸಾಗರದ ಚಲನವಲನದ ತಿಳಿವಳಿಕೆ ಅವನಿಗಿತ್ತು ಎನ್ನುವುದನ್ನು ತಿಳಿಸುತ್ತದೆ.

ಇಲ್ಲಿ ಮೂಲ ಪಠ್ಯವನ್ನು ೪೧ ಪುಟಗಳಲ್ಲಿ ಸಂಗ್ರಹಿಸಿ ಅದಕ್ಕೆ ೫೨ ಪುಟಗಳ ಪ್ರಸ್ತಾವನೆ ನೀಡಲಾಗಿದೆ. ಬಹಳಷ್ಟು ಬಾರಿ ನಮ್ಮ ವಿದ್ಯಾರ್ಥಿಗಳು ಪ್ರಸ್ತಾವನೆಯನ್ನು ಮಾತ್ರ ಓದಿ ಪಠ್ಯವನ್ನು ಹಾಗೆ ಇಡುತ್ತ ಬಂದ ಪರಂಪರೆಯೇ ಇದೆ. ಈ ಪುಸ್ತಕದ ವಿಷಯದಲ್ಲಿ ಆ ಮಾತು ನಿಜವಾಗದೆ ಮೂಲ ಪಠ್ಯಕ್ಕೆ ಅವರ ಆಸಕ್ತಿ ಮುಂದುವರಿದರೆ ಸಂಪಾದಕರ ಶ್ರಮ ಸಾರ್ಥಕವಾಗುತ್ತದೆ.

– ಶಶಿಧರ ತೋಡಕರ, ಪ್ರಾಚಾರ್ಯರು, ಡಾ. ಹಿರೇಮಲ್ಲೂರ ಈಶ್ವರನ್ ವಿಜ್ಞಾನ ಕಾಲೇಜು, ಲೈನ್ ಕ್ರಾಸ್, ಕಲ್ಯಾಣನಗರ, ಧಾರವಾಡ-೫೮೦ ೦೦೭

ಸಂಕಲನ : [illegible]

೧. ಸಂಕಲನ-೨೨ ರಲ್ಲಿ ಶೈಲಾ ಛಬ್ಬಿಯವರು ಗುರುಗಳ ಬಗ್ಗೆ ಚೆನ್ನಾಗಿ ಬರೆದಿದ್ದಾರೆ. ದೇವರಿಗಿಂತ ಗುರು ಮಿಗಿಲಾದವರು ಎಂಬ ಕಬೀರವಾಣಿಯನ್ನು ಅರ್ಥಪೂರ್ಣವಾಗಿ ಬಳಸಿದ್ದಾರೆ. 'ಕುಮಾರಗಂಧರ್ವ' ಪುಸ್ತಕ ಕುರಿತು ಪ್ರಸನ್ನ ಅವರು ಬರೆದ ವಿಮರ್ಶೆ ವಿಶಿಷ್ಟ ರೀತಿಯ ಬರವಣಿಗೆ. ಬಹಳ ಹಿಡಿಸಿತು. – **ಡಾ. ತೋಂಟದ ಸಿದ್ಧಲಿಂಗ ಸ್ವಾಮಿಗಳು, ಗದಗ**

೨. ಸಂಕಲನ-೨೨ ಆಷಾಢದಲ್ಲಿ ಸಾಕಷ್ಟು ಮಳೆ ಸುರಿಸಿದಂತೆ ಬಂದಿದೆ. ಸಾಹಿತ್ಯ-ಕೃಷಿ ವಲಯಕ್ಕೆ ಖುಷಿಯಾಗಿದೆ. – **ಗುರುಮೂರ್ತಿ ಪೆಂದಕೂರು, ಹಗರಿಬೊಮ್ಮನಹಳ್ಳಿ**

೩. ಡಾ. ಷ. ಶೆಟ್ಟರ್ ಅವರ 'ಕವಿರಾಜಮಾರ್ಗಮಂಥನ' ಕುತೂಹಲ ಕೆರಳಿಸುತ್ತಿರುವ ಸಂಶೋಧನಾತ್ಮಕ ಲೇಖನ. ಇದು ಕನ್ನಡದ ಘಟಾನುಘಟಿಗಳ ಕುತೂಹಲಕ್ಕೂ ಕಾರಣವಾಗುತ್ತಿರುವುದು ಅಭಿನಂದನೀಯ. ಎಸ್. ಬಿ. ಹಿರೇಮಠರ 'ತುಳಿಲಸಂದಕುಲದವರು' ಸಹ ಗುಣಮಟ್ಟದ ಲೇಖನ. ಸಂಜೀವ ಕುಲಕರ್ಣಿ, ಶಾಂತಕುಮಾರಿ, ಲಲಿತಾ ಸಿದ್ದಬಸವಯ್ಯ, ಸಿಪಿಕೆ ಅವರ ಕವಿತೆಗಳು ಭಿನ್ನಭಿನ್ನ ನೆಲೆಯಲ್ಲಿ ನೆಮ್ಮದಿ ನೀಡಿದುವು. ಮರಾಠೀ ಮಾಸ್ತರ ಭಿಡೆ, ಕುಮಾರಗಂಧರ್ವ ಕುರಿತ ಬರಹಗಳು ಆಸಕ್ತಿ ಕೆರಳಿಸಿದುವು.– **ಎಚ್. ಎಸ್. ಪಾಟೀಲ, ಕೊಪ್ಪಳ**

೪. ಪ್ರೊ. ಶ್ರೀಪಾದ ಭಿಡೆ ಅವರ ಬಗ್ಗೆ ಕೃ. ಶಿ. ಹೆಗಡೆ ಅವರ ಲೇಖ ಓದಿದೆ. ನಾನು ಬಿಜಾಪುರದವ. ಪ್ರೊ. ಭಿಡೆ ಅವರ ಶಿಷ್ಯನಲ್ಲದಿದ್ದರೂ ಅವರ ಅಭಿಮಾನಿ. ನಮ್ಮ ಕಾಲೇಜಿನಲ್ಲಿದ್ದ ಅವಧಿಯಲ್ಲಿ ಅವರು ಮರಾಠೀ, ಅರ್ಧಮಾಗಧೀ ಕಲಿಸುತ್ತಿದ್ದರು. ಮರಾಠೀ ನಾಟಕ, ಕನ್ನಡ ನಾಟಕ ಆಡಿಸುವವರು. ಸಾದಾ ಜೀವನ. ಶಿಷ್ಯಪ್ರೇಮಿ. ಅವರು ಮೃತರಾಗುವ ೧ ವಾರ ಮುಂಚೆ ನನಗೆ ಪತ್ರ ಬರೆದಿದ್ದರು. ಮೊದಲಿನಿಂದಲೂ ನಾನು ಅವರೊಂದಿಗೆ ಸಂಪರ್ಕ ಇಟ್ಟುಕೊಂಡಿದ್ದೆ. ಹೆಗಡೆಯವರು ಬರೆದ ಪ್ರತಿ ವಾಕ್ಯ ಸತ್ಯ. – **ವೆಂಕಟೇಶ ಕುಲಕರಣಿ, ಧಾರವಾಡ**

೫. ಸಂಕಲನ-೨೧ ರಲ್ಲಿ ಪ್ರಕಟವಾದ ಡಾ. ಹೆಚ್. ಎ. ಪಾರ್ಶ್ವನಾಥ್‌ರವರು ಎಚ್. ಎಲ್. ಎನ್. ಸಿಂಹರನ್ನು ಕುರಿತು ಕನ್ನಡ ಚಲನಚಿತ್ರರಂಗ ನಡೆದುಬಂದ ದಾರಿ. ಈ ಕ್ಷೇತ್ರದ ವ್ಯಕ್ತಿಶಕ್ತಿಗಳನ್ನು ಎಳೆಎಳೆಯಾಗಿ ಬಿಡಿಸಿದ್ದಾರೆ. — ಎ. ವಿ. ನಂಜುಂಡಸ್ವಾಮಿ, ಮೈಸೂರು

೬. ಸಂಕಲನ ಸಂಚಿಕೆಗಳನ್ನು ಓದುತ್ತಿದ್ದೇನೆ. ನಿಮ್ಮ ಒಂದು ಕಡೀಪುಟದಲ್ಲಿ ದೆವ್ವದ ಬಗ್ಗೆ ಓದಿದಮ್ಯಾಲ ದೆವ್ವದ ಬಗ್ಗೆ ಇದ್ದ ಕಲ್ಪನೆ ಬೇರೆಯಾಯಿತು. — ಡಾ. ಆನಂದ ಕುಲಕರ್ಣಿ, ವಿಜಾಪುರ

೭. ಸಂಕಲನ ಸಮರ್ಥವಾಗಿ ಮೂಡಿಬರುತ್ತಿದೆ. ನಿಮ್ಮ ಸಂಪಾದನ ಕೌಶಲ ಪ್ರತಿ ಪುಟದಲ್ಲಿ ಎದ್ದುಕಾಣುತ್ತದೆ. **— ಸಂಗಮೇಶ ಆರ್. ಗುರವ, ಸುರೇಬಾನ**

೮. **ಸಂಕಲನದ** 'ನನ್ನ ಅವ್ವ ನನ್ನ ಅಪ್ಪ' ಲೇಖನಮಾಲೆ ಹೊಸದೊಂದು ವಿಶಿಷ್ಟ ಸಾಹಿತ್ಯಪ್ರಕಾರವನ್ನು ನೀಡಿದೆ. ಇದು ಬದುಕಿನ ಪ್ರಾರಂಭಿಕ ಹಂತವನ್ನು ಮನೋಜ್ಞವಾಗಿ, ವೈವಿಧ್ಯಮಯವಾಗಿ ನೀಡುತ್ತಿದೆ. ಅದರಂತೆ 'ನನ್ನ ಶಾಲಾ ಗುರುಗಳು' ಲೇಖನಮಾಲೆಯೂ ವ್ಯಕ್ತಿತ್ವ ನಿರ್ಮಾಣದ ಮುಖ್ಯ ಭಾಗವಾಗಿ ಹರಿದು ಬರುತ್ತಿದೆ. ಇವೆರಡೂ ಮಾಲೆಗಳು ಕನ್ನಡ ಸಾಹಿತ್ಯದ ಮಹತ್ವದ ಸಂಪತ್ತು. ಇವು ಬೇಗನೆ ಗ್ರಂಥರೂಪದಲ್ಲಿ ಹೊರಬರುವಂತೆ ಮಾಡಿರಿ.

ಇದೇ ರೀತಿ 'ನನ್ನ ಗೆಳೆಯರು' (ಎಲ್ಲ ನಮೂನೆಯವರು) ಮತ್ತು ನಮ್ಮ ಬದುಕಿನ ಬಹುಭಾಗವನ್ನು ವ್ಯಾಪಿಸಿಕೊಂಡು ಸುಖ, ದುಃಖ ಕೊಟ್ಟು, ನಮ್ಮ ಕೀರ್ತಿಗೂ ಅಪಕೀರ್ತಿಗೂ ಕಾರಣರಾದ 'ನನ್ನ ಬಾಳಸಂಗಾತಿ' ಮಾಲೆಗಳನ್ನೂ ಪ್ರಾರಂಭಿಸಿ. — ಎಂ. ಡಿ. ಗೋಗೇರಿ, ಹುಬ್ಬಳ್ಳಿ

೯. **ಸಂಕಲನದಲ್ಲಿ** ವಿಮರ್ಶೆ ಲೇಖನಗಳು ಸಾಹಿತ್ಯಿಕ ಕಾಳಜಿ ಮತ್ತು ಜವಾಬ್ದಾರಿಯಿಂದ ಕೂಡಿ ಪ್ರಕಟವಾಗುತ್ತಿವೆ. 'ಕವಿರಾಜಮಾರ್ಗ ಲೇಖನಮಾಲೆ'ಯ ಬಗ್ಗೆ ಹೇಳುವುದೇ ಬೇಡ. ಅದೊಂದು ವಿಶಿಷ್ಟ ಮಾಲೆ. ಶ್ರೀ ಬಸವಾರಾಧ್ಯ. ಶ್ರೀ ಜಿ. ಎಸ್. ಎಸ್. ಅವರಿಂದ ತುಂಬುಕಂಠದ ಪ್ರಶಂಸೆಗೆ ಪಾತ್ರರಾಗುವುದು ಸುಲಭದ ಮಾತಲ್ಲ.

ದಮಯಂತಿ ನರೇಗಲ್ಲರ 'ಅಮೇರಿಕಾ...' ಹಾಸ್ಯನಾಟಕ ಎಂದು ಹೇಳಿಬಿಡುವಂತಹದ್ದಲ್ಲ. ಇದಕ್ಕೆ ಅನೇಕ ಆಯಾಮಗಳಿವೆ. ನಮ್ಮ ವಿದೇಶೀ ಮೋಹ ಅದಕ್ಕೆ ಕಾರಣವಾದ ಈ ನೆಲದ ಜುಗುಪ್ಸೆಗಳು. ನಮ್ಮ ಅಪಾಢಭೂತಿತನ, ಕುರ್ಚಿಮೋಹ, ಭ್ರಷ್ಟತೆ, ನೌಕರಶಾಹಿ ದುರಾಸೆ, ಮಂದಿರ ಮಸೀದಿ ಅಧ್ವಾನಗಳು, ಎಷ್ಟೊಂದು ವಿಷಯಗಳನ್ನು ತುಂಬಾ ಸರಳವಾಗಿ ಪೋಣಿಸಿ ಸೊಗಸಾದ ಭಾಷೆಯಲ್ಲಿ, ಲಘುವೆನಿಸುತ್ತಲೇ, ನಮ್ಮನ್ನು ಬಗೆಯುವಂತಹ ನಾಟಕ ಬರೆದಿದ್ದಾರೆ ದಮಯಂತಿಯವರು.

— ಲಲಿತಾ ಸಿದ್ದಬಸವಯ್ಯ, ತುಮಕೂರು

೧೦. **ಸಂಕಲನ** ಸಂಚಿಕೆಗಳನ್ನು ಶ್ರದ್ಧೆಯಿಂದ ಓದಿ ಪುಳಕಿತನಾಗಿದ್ದೇನೆ. ಷ. ಶೆಟ್ಟರ್ ಅವರ 'ಕವಿರಾಜಮಾರ್ಗ ಮಂಥನ' ನನ್ನ ನಾಲ್ಕು ದಶಕಗಳ ಸಾಹಿತ್ಯಾಭ್ಯಾಸದಲ್ಲಿ ಕಂಡುಬಂದಂತಹ ಗಟ್ಟಿಬರಹಗಳಲ್ಲೊಂದು. ಆಳವಾದ ಅಧ್ಯಯನ-ಚಿಂತನಗಳಿಂದ ಹಾಗೂ ಪ್ರಾಮಾಣಿಕವಾದ ತೊಡಗಿಸಿಕೊಳ್ಳುವಿಕೆಯಿಂದ ಮೂಡಿಬರುತ್ತಿರುವ ಈ ವಿಶೇಷ ಲೇಖನವು ಯಾವುದೇ ಪ್ರೌಢಪ್ರಬಂಧವನ್ನು ಮೀರುವಂಥ 'ಮಹಾಪ್ರೌಢಪ್ರಬಂಧ'ವಾಗಿದ್ದು, 'ಕವಿರಾಜಮಾರ್ಗ'ದ ಬೆಳಕಿನಲ್ಲಿ ಇತಿಹಾಸಕಾರರಿಗೂ ಕನ್ನಡ-ತಮಿಳು ಭಾಷಾ ವಿದ್ವಾಂಸರಿಗೂ ದಾರಿ ತೋರುವ ಮಹತ್ಕಾರ್ಯವನ್ನು ಮಾಡುತ್ತಿದೆ.

ನನ್ನ ಮನಮುಟ್ಟಿದ, ಮಿದುಳನ್ನು ತಟ್ಟಿದ ಮಹೋನ್ನತ ಬರಹ ಇದಾದರೆ, ನನ್ನ ಹೃದಯ ತಟ್ಟಿದ ಬರಹ ಕೃ. ರಿ. ಹೆಗಡೆಯವರು ಮರಾಠೀ ಪ್ರಾಧ್ಯಾಪಕ ಶ್ರೀಪಾದ ರಘುನಾಥ ಭಿಡೆಯವರ ಬಗ್ಗೆ ಬರೆದ ಬರಹ. ಮರಾಠೀ ಪ್ರಾಧ್ಯಾಪಕರಾಗಿದ್ದೂ ಕನ್ನಡಕ್ಕೆ ನ್ಯಾಯ ದೊರಕಿಸಿಕೊಡುವಲ್ಲಿ ಭಿಡೆಯವರ-

ಬಿಡುವಿಲ್ಲದೆ ದುಡಿದ ಭಿಡೆಯವರ ಆದರ್ಶಾನುಷ್ಠಾನವನ್ನು ಕಂಡು ನಾವೆಷ್ಟೋ ಕನ್ನಡಿಗರು ನಮ್ಮ ಬಗ್ಗೆಯೇ (ಹೋಲಿಸಿಕೊಂಡು) ನಾಚಿಕೆಪಟ್ಟುಕೊಳ್ಳಬೇಕು.

ಲಲಿತಾ ಸಿದ್ದಬಸವಯ್ಯನವರ 'ಸಖಿಗಾಥಾ', ಹಾಗೂ ಸಂಕುಲಜೀವರ 'ಭ್ರೂಣದ ಆತ್ಮಕತೆ' ನನ್ನ ಗಮನ-ಮನ ಸೆಳೆದವು. ಅಂದಹಾಗೆ ಇತ್ತೀಚಿನ ಸಂಚಿಕೆಗಳಲ್ಲಿ ಕವಿಗಳಿಗಿಂತ ಕವಯಿತ್ರಿಯರ ಕವನಗಳೇ ಹೆಚ್ಚು ಬೆಳಕು ಕಂಡಿವೆ! ಸ್ತ್ರೀ ಸಾಹಿತ್ಯವು 'ಅಡುಗೆಮನೆ ಸಾಹಿತ್ಯ'ವೆಂದಾಗಲೀ, ಸ್ತ್ರೀಯರಿಗೆ ಸಮಾನಾವಕಾಶ (ಪುರುಷರಿಗೆ ಹೋಲಿಸಿ) ಇಲ್ಲವೆಂದಾಗಲೀ ಯಾರವರು ಹೇಳುವವರು...

- ಕಡೀಕೊಂದು ಮಾತು : 'ಕಡೀಪುಟ'ದ ಭಾಷಾ ಮತ್ತs ವಿಚಾರ ಏನವs, ಎರಡೂ ಅಗ್ದೀ ಚಲೋ ಅವ ಬಿಡ್ರಿ!

– ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

೧೧. ಷ. ಶೆಟ್ಟರ್ ಅವರ 'ಕವಿರಾಜಮಾರ್ಗ' ಕುರಿತ ಲೇಖನಗಳು ಮೌಲಿಕವಾಗಿವೆ. **ಸಂಕಲನ-೨೨** ಪು. ೩೭ ರಲ್ಲಿ ಒಂದು ಅನರ್ಥ ಸಂಭವಿಸಿದ ಹಾಗೆ ನನಗನಿಸುತ್ತಿದೆ. "ದಕ್ಷಿಣ ಭಾರತದಂಚಿನಾಚೆ ವ್ಯಾಪಿಸಿದ್ದ 'ಭೂಖಂಡವು' ಪೂರ್ವೇತಿಹಾಸ ಕಾಲಘಟ್ಟದಲ್ಲಿ ಕಡಲಡಿ ಸೇರಿತೆಂಬುದನ್ನು ವಿಜ್ಞಾನಿಗಳು ಪ್ರಕಟಿಸಿದಾಗ ಕಡಲುಪಾಲಾದ ಆ ಭೂಮಿಯು ತಮ್ಮದಾಗದೆ ಮತ್ತಿನ್ನಾರದಾಗಿರಲು ಸಾಧ್ಯವೆಂಬ ವಾದವನ್ನು ತಮಿಳರು ಎತ್ತಿದರು." ನನಗನಿಸಿದ ಪ್ರಕಾರ ಲೇಖಕರು ಹೇಳಬೇಕಾಗಿದ್ದುದು... ಸಾಧ್ಯವಿಲ್ಲವೆಂಬ ವಾದವನ್ನು ಎತ್ತಿದರು. ವಾಕ್ಯದಲ್ಲಿ ಸಮರ್ಥನೆಗೆ ಬಲ ತರಲು ಎರಡು ನಿರಾಕರಣಗಳನ್ನು ಬಳಸುವುದು ಸಾಮಾನ್ಯ. ಆದರೆ ಇಲ್ಲಿ ಒಂದೇ ನಿರಾಕರಣವು ಬಳಕೆಯುಂಟಾಗಿ ಅಪಾರ್ಥಕ್ಕೆ ಎಡೆಮಾಡಿಕೊಟ್ಟಿದೆ.*

– ಆರ್. ಎಮ್. ಗಿರ್ಜೆ, ಧಾರವಾಡ

[* ಇಲ್ಲಿ '...ಮತ್ತಿನ್ನಾರದಾಗಿರಲು ಸಾಧ್ಯ? ಅದು ನಮ್ಮದೇ!' ಎಂಬುದು ಅರ್ಥ. – ಸಂ.]

೧೨. ಅನೇಕ ವೇಳೆ ತಮ್ಮ ವೈಯಕ್ತಿಕ ಹಿತಗಳನ್ನು ಬದಿಗೊತ್ತಿ, ಮಕ್ಕಳ ಭವಿಷ್ಯಕ್ಕಾಗಿ ಶ್ರಮಿಸಿದ ತಾಯಿ-ತಂದೆಯರ ಯೋಗಕ್ಷೇಮದ ಬಗ್ಗೆ ತಾತ್ಸಾರ ಮಾಡಿ, ಪ್ರೀತಿ ಕರ್ತವ್ಯಗಳನ್ನು ಮರೆತು, ತಮ್ಮ ಅಂತಿಮ ದಿನಗಳನ್ನು ಊಹಿಸಿಕೊಳ್ಳದೇ ಅವರನ್ನು ವೃದ್ಧಾಶ್ರಮಕ್ಕೆ ಸೇರಿಸುವವರ ಸಂಖ್ಯೆ ಹೆಚ್ಚಾಗುತ್ತಿರುವ ಈ ದಿನಗಳಲ್ಲಿ 'ನನ್ನ ಅವ್ವ ನನ್ನ ಅಪ್ಪ' ಮಾಲಿಕೆಯ ಕೃತಜ್ಞತಾಭಾವದ ಲೇಖನಗಳು ಕಣ್ಣು ತೆರೆಸುವಂಥವಾಗಿವೆ. ಇಂಥ ಲೇಖನಗಳ ಸಂಗ್ರಹವನ್ನು ಪುಸ್ತಕರೂಪದಲ್ಲಿ ತರಲು ಸೂಚಿಸಿ ಈ ಕಾರ್ಯಕ್ಕೆ ತಮ್ಮ ಸಹಾಯಹಸ್ತ ಚಾಚಿರುವ ಪುತ್ತೂರಿನ ಸಹೋದರಿ ಅಭಿನಂದನೀಯರು. ಈ ಯೋಜನೆ ಇದ್ದಲ್ಲಿ ದಯವಿಟ್ಟು ನನ್ನನ್ನೂ ತೊಡಗಿಸಿಕೊಳ್ಳಿರಿ.

– ಜಿ. ಹೆಚ್. ಪ್ರಸಾದ್, ಚಿಕ್ಕಮಗಳೂರು

೧೩. **ಸಂಕಲನ** ದ್ವೈಮಾಸಿಕ ನನ್ನನ್ನು ಸಾತ್ವಿಕ ಪ್ರಚೋದನೆಗೆ ಈಡುಮಾಡಿದೆ. ಇಲ್ಲಿಯ ಲೇಖನಗಳು ಆತ್ಮೀಯವಾಗಿವೆ, ಶೋಧನ ಲೇಖನಗಳು ಹೊಸ ಬೆಳಕಿಗೆ ಹಚ್ಚುತ್ತಿವೆ, ಪುಸ್ತಕ ವಿಮರ್ಶೆಗಳು ಹೊಸದನ್ನು ಹುಡುಕುತ್ತಿವೆ. ಈ ಗುಣಗಳು ನನ್ನನ್ನು ನಿತ್ಯವೂ ಪ್ರಚೋದಿಸುತ್ತಿವೆ. ನಿಮ್ಮ ಸಂಪಾದಕೀಯ ಬರೆಹ ನಿರಭ್ರ ಆಕಾಶದಷ್ಟು ಹೃದಯಸಂವಾದಿಯಾಗಿದೆ. ನಾನು ಎಷ್ಟೋ ಸಾಹಿತ್ಯಿಕ ಪತ್ರಿಕೆಗಳನ್ನು ಕಂಡಿದ್ದೇನೆ ಆದರೆ, ಇಷ್ಟು ಸಮೃದ್ಧವೂ ಆತ್ಮಿಕವೂ ಆದ ಸಾಹಿತ್ಯಿಕ ಪತ್ರಿಕೆಗಳನ್ನು ಕಂಡಿಲ್ಲ. ನಿಮ್ಮ **ಸಂಕಲನ**ವಲ್ಲಿ ಒಂದು ಜೀವವಿದೆ, ಆತ್ಮವಿದೆ, ಚೈತನ್ಯವಿದೆ.

ಪ್ರೊ. ಶೆಟ್ಟರ್ ಅವರ ಲೇಖನಗಳು ಹೊಸದಾಗಿವೆ, ವಿಚಾರಗಳು ಸೂಕ್ಷ್ಮವಾಗಿವೆ. ಈ ಬಗೆಯ ಲೇಖನಗಳು ಕನ್ನಡಕ್ಕೆ ಹೊಸ ಬಗೆಯವು. **ಸಂಕಲನ** ಸಂಚಿಕೆಗಳು ಸಂಗ್ರಾಹ್ಯ ಆಗುವುದು ಇಂಥ ಲೇಖನಗಳಿಂದಲೇ. ನಿಮ್ಮ ಸಂಪಾದನ ಶ್ರಮಕ್ಕೆ ಅಭಿನಂದನೆಗಳು. **– ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಹಂಪಿ-ವಿದ್ಯಾರಣ್ಯ**

೧೪. **ಸಂಕಲನ** ನಿಜವಾಗಿಯೂ ಅದ್ಭುತ ಪತ್ರಿಕೆ! ನಿಮ್ಮ 'ಕಡೀಪುಟ'ವಂತೂ ಕಡೀತನಕ ನೆನಪುಳಿಯುವ ಬರವಣಿಗೆ.

– ಬಿ. ಆರ್. ರವಿಕಾಂತೇಗೌಡ, ಹುಬ್ಬಳ್ಳಿ-ಧಾರವಾಡ

ಕಡೀಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ

ಒಬ್ಬ ಯಶಸ್ವೀ ಶಿಕ್ಷಕ ಒಬ್ಬ ಯಶಸ್ವೀ ಕವಿ ಆಗಿರತಾನ, ಸಫಲ ನಿರ್ಮಾಪಕ, ಪರೋಕ್ಷ ಸೃಷ್ಟಿಕರ್ತ ಆಗಿರತಾನ. ಅವನಿಂದ ಹಲವಾರು ಕಾಲಖಂಡಗಳು ಪ್ರಭಾವಿತಗೊಳ್ಳತಾವು, ಅನೇಕ ಪೀಳಿಗೆಗಳು ತಮ್ಮ ಭವಿಷ್ಯವನ್ನ ರೂಪಿಸಿಕೊಳ್ಳತಾವು, ಅಸಂಖ್ಯಾತ ವಿಷಯಗಳು ವಿಶ್ಲೇಷಣೆಗೆ ಒಳಗೊಳ್ಳತಾವು, ಲೆಕ್ಕವಿಲ್ಲದಷ್ಟು ಭಾವಗಳು ಕಲ್ಪನೆಗಳು ಕಾವ್ಯದ ಖಚಿತ ಕೋಟೆಯೊಳಗ ಸಂರಕ್ಷಕ ಸೈನಿಕರಾಗತಾವು. ಅವು ಸದಾ ಕಾಲ ಸಜ್ಜಾಗಿದ್ದು ಸದ್ಬುದ್ಧಿ ಪ್ರೇರಿತ ಸಜ್ಜನರನ್ನ ಸಂಗೀತ ಸ್ವರದ ಗುಂಟ ಆಡಿಸತಾವು, ಛೇಡಿಸತಾವು, ತೇಲಿಸತಾವು. ಸ್ವಾರ್ಥದಿಂದ ಹೊರಗ ಬಂದ ಶಿಕ್ಷಕ ಪರಾರ್ಥದ ಪರಿಪರಿಯ ದೃಶ್ಯ ವೈಭವಗಳನ್ನ ಕಣ್ಣಿಗೆ ಕಟ್ಟೊ ಹಂಗ ತೋರಿಸತಾನ. ಅವುನ್ನ ನೋಡಿದ ಎಲ್ಲಾರ್ರೂ ದೃಶ್ಯಬಂಧದೊಳಗ ಹಿಡೀತಾನ. ಅವರ್ನ ಕಾವ್ಯ ನಾಟಕದ ಪಾತ್ರಗಳನ್ನಾಗಿ ಪರಿವರ್ತಿಸತಾನ.

ಆಮ್ಯಾಲ ಆ ಪಾತ್ರಗಳು ತಾವ್ ಆ ತಯಾರಾಗಿ ತಮ್ಮ ಮುಂದಿನ ಕರ್ತವ್ಯ ತಿಳಕೋತಾವು. ತಮ್ಮ ಶಿಕ್ಷಕನ ರಿಣಾ ತೀರಸಾಕ ತಾವೂ ಮತ್ತ ಶಿಕ್ಷಕರಾಗಿ ಕರ್ತವ್ಯ ಮೆರೆಸಾಕ ತಯಾರಾಗತಾವು. ಹಿಂಗ ಒಂದು ವರ್ತುಳ ಪೂರಾ ಆಕ್ಕತಿ, ಗಾಲಿ ಆಗಿ ತಿರಗಾಕ ಸುರು ಆಕ್ಕತಿ.

ಎಲ್ಲಾ ಶಿಕ್ಷಕರೂ ಹಿಂಗ್ಅ ಇರತಾರು, ಇದ್ಅ ರೀತಿ ತಮ್ಮ ಶಿಷ್ಯರ ಬದುಕಿನ ಭದ್ರತೆಗೆ ಅಡಿಗಲ್ಲ ಆಗತಾರು ಅಂತ ಹೇಳಾಕ ಬರೂದುಲ್ಲ. ಶಿಷ್ಯರ ಕಾಲಾಗ ಕಲ್ಲು ಹಾಕವರೂ, ಕಲ್ಲು ಆಗವರೂ ಜಾಸ್ತಿ ಇರತಾರನ್ನೂದು ಸುಳ್ಳಲ್ಲ. ಅಂಥವರಿಗೆ ತಮ್ಮ ಬದುಕಿನ ಸಾರ್ಥಕತೆಯ, ಮಹತ್ವದ ಅರಿವು, ಮುಂದಿನ ಪೀಳಿಗೆಯ ಪರಿಜ್ಞಾನ ಇರೂದುಲ್ಲ. ಹೊಲದಾಗ ಬಿತ್ತಿದ ಎಲ್ಲಾ ಬೀಜಾನೂ ಒಂದ್ಅ ರೀತಿಯ ಸಸಿ ಆಗೂದುಲ್ಲ. ಕೆಲವು ಪುಷ್ಟ ಇರತಾವು, ಕೆಲವು ಪುಟ್ಟಿ ಇರತಾವು, ಕೆಲವು ಸತಕಾ ಆಗಿ ಕೆಟ್ಟಿ ಇರತಾವು. ಕೆಲವು ತೆನ್ನಾಗ ಭೊಲೋ ಕಾಳು ಹಿಡೀತಾವು, ಕೆಲವು ಬರೇ ಜೊಳ್ಳು ಆಗತಾವು. ಕೆಲವು ಬೀಜಂತೂ ಹುಟ್ಟೊಕಿಂತ ಮೊದಲ್ಅ ಅಥವಾ ಹುಟ್ಟಿದ ಸೊಲ್ಪ ಕಾಲದ ನಂತರ ಜೀವ್ಹಾ ಬಿಡತಾವು. ಹಂಗ್ಅ ಶಿಕ್ಷಕರ ಬಳಗಾನೂ ನೆಲದಾಗ ಬಿದ್ದ ಬೀಜದ್ಹಂಗ.

ಕೆಲವು ಬೀಜ ಫಲವತ್ತಾಗಿ ಸೊಂಪಾಗಿ ಇಂಪಾಗಿ ಬೆಳೀತಾವಲ್ಲ, ಹಂಗ ಕೆಲವು ಶಿಕ್ಷಕರೂ ತಮ್ಮ ಸುತ್ತಲಿನ ಸಮಸ್ತ ವಾತಾವರಣದೊಳಗಿನ ಬೆಳಕು ಗಾಳಿ ನೀರು ಜೀವಸತ್ವ ಎಲ್ಲಾ ಹೀರಿಕೊಂಡು ಅದರ ಫಲವಾಗಿ ಬಂದ ರಸ ರುಚಿಗಳನ್ನ, ನವೋಲ್ಲಾಸ ಬೀಜಗಳನ್ನ, ಪರಿಣಾಮ-ಪ್ರಭಾವಗಳನ್ನ ಸ್ವಸ್ಥ ಭವಿಷ್ಯಗಳನ್ನ ತಮ್ಮ ನಂತರದ ಪೀಳಿಗೆಯವರಿಗೆ ನೀಡತಾರು, ಹಂಚತಾರು, ಮತ್ತ ಹಂಗ ಮಾಡಬೇಕು.

ಶಿಕ್ಷಕ ಒಂದು ಕಾಲಕ್ಕ ಗುರು ಆಗಿದ್ದ. ಶಿಕ್ಷಕ ಗುರುವನ್ನ ರಾಜರು, ಶ್ರೀಮಂತರು, ಇದ್ದುಳ್ಳವರು ಕಾಪಾಡತಿದ್ದರು. ಬದಲಿಗೆ ಶಿಕ್ಷಕರು ಅವರನ್ನ, ಅವರ ಪುತ್ರಸಂಕುಲವನ್ನ ಪರಿಪೋಷಿಸತಿದ್ದರು, ಪರಿವರ್ತಿಸತಿದ್ದರು, ಅವರಿಗೆ ಪರಿಪೂರ್ಣ ವ್ಯಕ್ತಿತ್ವ ನೀಡತಿದ್ದರು. ಗುರು ಏನೂ ಬೇಡತಿದ್ದಿಲ್ಲ, ಆದರ ತಾನಾಗಿ ಸಿಗತಿತ್ತು, ಆಗ ಗುರುವಿಗೆ ಬೇಡಿಕೆ ಇತ್ತು, ಗುರುಗೌರವ

ಇತ್ತು. ಮುಂದ ಬರಬರ್‍ತ ಗುರು ಇದ್ದಾವ್ನ ಯಾವ ಕಾಲಕ್ಕ ಹೆಂಗ ಲಘು ಆದನೋ ಲಗು ಆಗಿಬಿಟ್ಟ. ಗುರುತ್ವ ಕಳಕೊಂಡ. ಶಿಕ್ಷಕತ್ವಕ್ಕ ಜೋತುಬಿದ್ದ. ಶಿಕ್ಷಕ ಬೇಡಾಕ್ಹತ್ತಿದ. ಪಗಾರ ಮನೆ ಅನುಕೂಲ ಆರಾಮು ಆಢ್ಯತೆ ಬೇಡಿದ. ತಲಿಗಿಂತ ಎದಿಗಿಂತ ಹೆಚ್ಚಿಗಿ ಕಿಮ್ಮತ್ತು ಹೊಟ್ಟಿಗೆ ಕೊಟ್ಟ. ಖೊಟ್ಟಿ ಆದ. ಶಿಷ್ಯರ ಹಿತ ಬದಿಗಿಟ್ಟ. ಗುರುವಿನ ಸ್ವತ್ವಗಳು, ಸತ್ವಗಳು ಇಳಿಮುಖ ಆದುವು. ಅವ್ನ ತಾನಾಗಿ ಶಿಷ್ಯರಿಗೆ ಏನಾರ ಕೊಟ್ರಾಗ ಸಿಕ್ಕಿತು, ಇಲ್ಲಂದರ ಇಲ್ಲ ಅನ್ನೂಹಂಗ ಆತು. ಕೊಡಾಕ ಅವ್ನನ ಹತ್ತಿರ ಉಳಿದಿತ್ತರ ಏನು? ಪಾಪ, ಅವನರ ಏನ ಮಾಡ್ಯಾನು. ಸಮಾಜ ಭವನದ ಒಂದು ಮುಖ್ಯ ಕಂಬ ಆಗಿದ್ದ. ಸಮಗ್ರ ಭ್ರಷ್ಟತೆಯ ಬಿರುಗಾಳಿಯೊಳಗ ಅವನೂ ಸಿಕ್ಕಷ್ಟು ತೂರಿಕೊಂಡ. ಅಧ್ಯಯನ, ಚಿಂತನ, ಮನನ, ವಿದ್ಯಾದಾನ ಇತ್ಯಾದಿ ಶಬ್ದಗಳು ಕೋಶ ಬಿಟ್ಟು ಕೋಶಾವಸ್ಥೆಗೆ ಹೋದುವು.

ಸಹಜ ಪಂಚಭೂತಗಳಿಂದ ಶಿಷ್ಯರ, ಸಮಾಜದ ಬದುಕಿನ ಸಮಸ್ತವನ್ನ ರೂಪಿಸ್ತಾ ಇದ್ದವ್ನ ಸ್ವತಃ ಸ್ವನಿರ್ಮಿತ ಪಂಚಪಾತಕಗಳಿಂದ ಬಾಧಿತನಾದ. ಅನಭ್ಯಾಸ, ಅನಧ್ಯಯನ, ಅಜ್ಞಾನ, ಅನನುಭವ, ಅಹಂಕಾರದ ಅನ್ ಬಾರದ ದೆವ್ವ ಗುರುವಿನ ನರಗಳನ್ನ ಹಿಚಿಕಿದ್ವು.

ಇಂಥ ಪಾತಕಗಳು ಮಳೆಗಾಲದ ಮಹಾರೋಗ ಇದ್ಹಂಗ. ಅವನ್ನ ಎದುರಿಸಬೇಕು, ಗೆಲ್ಲಬೇಕು. ಎಲ್ಲಾವನ್ನೂ ಆಗದಿದ್ದರೂ ಕೆಲವನ್ನಾದರೂ ಗೆಲ್ಲಬೇಕು. ಹಿಂಗ ಮಾಡಿದವ್ನ ಆ ಮಟ್ಟಿಗೆ ತನ್ನ ಶಿಷ್ಯರಿಗೆ ಅಷ್ಟಾದರೂ ಒಳ್ಳೆಯದನ್ನ ಕೊಡಬಲ್ಲ. ಇಲ್ಲಂದರ ತನ್ನ ಪಾತಕ ಪ್ರಪಾತಕ್ಕ ಮುಂದಿನ ಜನಾಂಗವನ್ನ ತಳ್ಳಿಬಿಡತಾನ. ಶಿಷ್ಟ ಇದ್ದವ್ನ ದುಷ್ಟ ಆಗತಾನ. ಇಷ್ಟು ಕಾಲ ತನ್ನ ಬೆನ್ನಿಗೆ ನಿಂತು ಕಾಪಾಡಿದ ತನ್ನದ್‌ಅ ರಕ್ತ ಮಾಂಸ ಎಲುಬು ಪ್ರಾಣ ಆಗಿದ್ದ ಪರಂಪರೆ ಇತಿಹಾಸ ಚರಿತ್ರನೀತಿ ಶೀಲ ಸಂಸ್ಕೃತಿಗಳನ್ನ ಅಭ್ಯಸಿಸುವ ಗೋಜಿಗೇ ಅವ್ನ ಹೋಗೂದುಲ್ಲ. ಅಧ್ಯಯನ ಮನನ ಚಿಂತನಕ್ಕ ಒಳಪಡಿಸಿ ಅವುಗಳ ಆಳಕ್ಕ ಹೋಗುವ ಮನಸ್ಸೂ ಅವ್ನಗ ಇರೂದುಲ್ಲ. ಆಗ ಅವ್ನ ಸಹಜವಾಗಿಯೇ ಅಜ್ಞಾನಿಯಾಗಿ ವಿಜೃಂಭಿಸತಾನ. ಇಂಥಾವ್ನಗ ಅನುಭವಗಳ ಹಿನ್ನೆಲೆ ಎಲ್ಲಿಂದ ಬರಬೇಕು? ಅನುಭವ ದ್ರವ್ಯ ದಕ್ಕಬೇಕಾದರ ಕಣ್ಣು ಕಿವಿ ಮೂಗು ನಾಲಿಗಿ ಮಾತು ಚರ್ಮ ಕಯ್ಯಿ ಕಾಲು ಕುಂಡಿ ಜನನಾಂಗ ಈ ದಶೇಂದ್ರಿಯಗಳನ್ನ ಸ್ವಚ್ಛ ಇಟಗೋಬೇಕು, ಸ್ವಸ್ಥ ಇಟಗೋಬೇಕು, ಮುಕ್ತ ಇಟಗೋಬೇಕು. ಅಂದಾಗ ಮಾತ್ರ ಫಲಶ್ರುತಿ ಸಾಧ್ಯ. ಇದೆಲ್ಲಾ ನಿರಾಕರಿಸಿ ತನ್ನ ಅಹಂಕಾರದ ಬೇಲಿಯೊಳಗ ತಾನ್‌ಅ ರಾಜಾ ಅಂತ ಮೆರೆದಾಡುವ ಹುಲೀ ಹಂಗ, ಮಯ್‌ತುಂಬ ಪಟ್ಟೀ ಗೆರಿ ಬರೆಸಿಕೊಂಡು ಒದರ್‍ಯಾಡುವ ನರೀ ಹಂಗ ಆಗಿರುವ ಶಿಕ್ಷಕ ಏನ ಮಾಡಾಕಾಕ್ಕತಿ...

ಶಿಕ್ಷಕ ನಿಜದ ಅರ್ಥದೊಳಗ ಶಿಕ್ಷಕ ಆಗಬೇಕು. ಶಿಕ್ಷಾ ಪಾಕದೊಳಗ ಬೇಯಬೇಕು. ಶಿಕ್ಷೆ ಅಂದರ ತಿಳಿವಳಿಕೆ. ಕೊಡುವ ತಿಳಿವಳಿಕೆ, ಪಡೆಯುವ ತಿಳಿವಳಿಕೆ, ನೀಡುವ ತಿಳಿವಳಿಕೆ. ಮೂಲವನ್ನ ಅರಿಯದವ್ನ ತನ್ನ ಬೇರು ಬಿಸಿಲಿಗೆ ಹರವಿಕೊಂಡು ಒಣಗಿಬಿಡತಾನ. ಅಂಥವ್ನ ಶಿಷ್ಯ, ವಿದ್ಯಾರ್ಥಿ, ಶಿಕ್ಷಕ ಆಗಲಾರ. ವಿದ್ಯೆಯನ್ನ ಅರ್ಜಿಸುವವನಿಗಿಂತ ವಿದ್ಯೆಯ ಅರ್ಥಿ, ಸಿದಿಗಿ ಆಗತಾನ.

ಇವತ್ತು ಗುರುರ್ದೇವೋಭವ ಅನಕೊಂತ ಗುರುಪೂಜೆ, ವಂದನೆ ನಡೀಬೇಕಿತ್ತು. ಆದರ ಶಿಕ್ಷಕರ 'ದಿನಾಚರಣೆ' ನಡ್ಯಾಕ್ಹತ್ತೇತಿ. ಅದರಾಗ ಎಲ್ಲಾರೂ ಪಾಲ್ಗೊಂಡಾರ. ಏನ ಕಾಲ ಬಂತು!

ಸಾಹಿತ್ಯ ಅಕಾದೆಮಿ

ದಕ್ಷಿಣ ಪ್ರಾದೇಶಿಕ ಕಛೇರಿ, ಸೆಂಟ್ರಲ್ ಕಾಲೇಜು ಆವರಣ
ಡಾ. ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು - ೫೬೦ ೦೦೧

ಕನ್ನಡ ಪ್ರಕಟಣೆಗಳು

ಕಾದಂಬರಿಗಳು :

೧. ಭೀಮಾಯಣ — ರೂ. ೧೦೦-೦೦
(ಮಲಯಾಳಂ ಮೂಲ : ಎಂ. ಟಿ. ವಾಸುದೇವನ್ ನಾಯರ್) ಅನುವಾದ : ಸಿ. ರಾಘವನ್

೨. ಬೆಟ್ಟಕ್ಕೆ ಬೆಂಕಿ — ರೂ. ೧೦೦-೦೦
(ಇಂಗ್ಲಿಷ್ ಮೂಲ : ಅನಿತಾ ದೇಸಾಯಿ)
ಅನುವಾದ : ಎಚ್. ಆರ್. ಚಂದ್ರವದನ ರಾವ್

೩. ಮುಕ್ತಿಬೋಧ — ರೂ. ೮೦-೦೦
(ಹಿಂದೀ ಮೂಲ : ಜೈನೇಂದ್ರಕುಮಾರ್)
ಅನುವಾದ : ಎ. ಎಂ. ರಾಮಚಂದ್ರ

೪. ಬೇರಿಗೆ ನೀರು — ರೂ. ೯೫-೦೦
(ತಮಿಳು ಮೂಲ : ರಾಜಂ ಕೃಷ್ಣನ್)
ಅನುವಾದ : ಶೇಷನಾರಾಯಣ

೫. ನೀಲಿ ಚಂದಿರ — ರೂ. ೩೫೦-೦೦
(ಹಿಂದೀ ಮೂಲ : ಶಿವಪ್ರಸಾದ್ ಸಿಂಹ)
ಅನುವಾದ : ಪಿ. ಶಶಿಕಲಾ

ಕಥೆಗಳು :

೧. ಸ್ವರ್ಣ ಕಮಲಗಳು — ರೂ. ೩೦೦-೦೦
(ತೆಲುಗು ಮೂಲ : ಇಲ್ಲಿಂದಲ ಸರಸ್ವತಿದೇವಿ)
ಅನುವಾದ : ಪಿ. ವೇಣುಗೋಪಾಲ್

ಕಾವ್ಯ :

೧. ಜೀವನಾನಂದರ ಕವಿತೆಗಳು — ರೂ. ೭೦-೦೦
(ಸಂಪಾದಕ : ಸಮೀರ್‌ರಾಯ್ ಚೌಧುರಿ)
ಅನುವಾದ : ಮೀರಾ ಚಕ್ರವರ್ತಿ, ಎಂ. ಆರ್. ಕಮಲ

೨. ಅಯ್ಯಪ್ಪ ಪಣಿಕ್ಕರರ ಕೃತಿಗಳು — ರೂ. ೪೫-೦೦
(ಮಲಯಾಳಂ ಮೂಲ : ಅಯ್ಯಪ್ಪ ಪಣಿಕ್ಕರ್)
ಅನುವಾದ : ಸಿ. ರಾಘವನ್

೩. ಶಬ್ದಗರ್ಭಿತ ಆಕಾಶ — ರೂ. ೯೦-೦೦
(ಒರಿಯಾ ಮೂಲ : ಸೀತಾಕಾಂತ ಮಹಾಪಾತ್ರ)
ಅನುವಾದ : ಕಮಲಾ ಹೆಮ್ಮಿಗೆ

ಭಾರತೀಯ ಸಾಹಿತ್ಯ ನಿರ್ಮಾಪಕರು :

೧. ತ್ರಿವೇಣಿ — ರೂ. ೨೫-೦೦
ಲೇಖಕರು : ಸಿ. ಎನ್. ರಾಮಚಂದ್ರನ್

೨. ವ. ರಾಮಸ್ವಾಮಿ — ರೂ. ೨೫-೦೦
(ಲೇಖಕರು : ಸು. ವೆಂಕಟರಾಮನ್)
ಅನುವಾದ : ಪಿ. ವೇಣುಗೋಪಾಲ

೩. ಅಶ್ವಘೋಷ — ರೂ. ೨೫-೦೦
(ಲೇಖಕರು : ರೊಮಾ ಚೌಧುರಿ)
ಅನುವಾದ : ಶ್ರೀರಾಮ ಭಟ್ಟ

೪. ಅಜ್ಞೇಯ — ರೂ. ೨೫-೦೦
(ಲೇಖಕರು : ರಮೇಶ್‌ಚಂದ್ರ ಶಾಹ್)
ಅನುವಾದ : ಬಿ. ವೈ. ಲಲಿತಾಂಬ

೫. ಅಪ್ಪರ್ — ರೂ. ೨೫-೦೦
(ಲೇಖಕರು : ಜಿ. ವನ್ಮೀಕನಾಥನ್)
ಅನುವಾದ : ಎಸ್. ಬಿಳಿಗಿರಿವಾಸನ್

೬. ಕೃಷ್ಣದೇವರಾಯ — ರೂ. ೨೫-೦೦
(ಲೇಖಕರು : ಅಡಪ ರಾಮಕೃಷ್ಣರಾವ್)
ಅನುವಾದ : ಪೂರ್ಣಿಮಾ ತುಂತೂರ್

ಇತರೆ :

೧. ಸೌಗಂಧಿಕಾ ಪರಿಣಯ — ರೂ. ೬೦೦-೦೦
(ಮುಮ್ಮಡಿ ಕೃಷ್ಣರಾಜ ಒಡೆಯರ್)
ಸಂಪಾದಕರು : ಎಚ್. ಎಸ್. ಶ್ರೀಮತಿ

೨. ಕನ್ನಡ ಸಾನೆಟ್ ಸಂಗ್ರಹ — ರೂ. ೪೫-೦೦
ಸಂಪಾದಕರು : ಎಚ್. ಎಸ್. ವೆಂಕಟೇಶಮೂರ್ತಿ

೩. ಪದಚರಿತ — ರೂ. ೭೫-೦೦
(ಫ್ರೆಂಚ್ ಮೂಲ : ಜೀನ್ ಪಾಲ್ ಸಾರ್ತ್ರನ ಲಿಮೊ)
ಅನುವಾದ : ಕೆ. ಎಚ್. ಶ್ರೀನಿವಾಸ

೪. ತೆಲುಗು-ಕನ್ನಡ ನಿಘಂಟು — ರೂ. ೧೫೦-೦೦
ಸಂಪಾದಕರು : ಪಾಣ್ಯಂ ರಾಮಶೇಷ ಶಾಸ್ತ್ರಿ

ಪ್ರತಿಗಳು ಹಾಗೂ ವಿವರಕ್ಕಾಗಿ ಸಂಪರ್ಕಿಸಿ :

ಸಾಹಿತ್ಯ ಅಕಾದೆಮಿ

ದಕ್ಷಿಣ ಪ್ರಾದೇಶಿಕ ಕಛೇರಿ, ಸೆಂಟ್ರಲ್ ಕಾಲೇಜು ಆವರಣ
ಡಾ. ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು - ೫೬೦ ೦೦೧
ದೂರವಾಣಿ : ೦೮೦ - ೨೨೨೪ ೫೧೫೨

SANKALANA : RNI No. KARKAN 14160 / 10 / 1 / 2002 - TC

ಸೌಂದರ್ಯ ಲೋಕದಲ್ಲಿ ವಿಹರಿಸಲು ವಿಶೇಷ ವಿನ್ಯಾಸ

ಸೌಂದರ್ಯ ಹಾಗೂ ಹಣಕ್ಕೆ ತಕ್ಕ ಮೌಲ್ಯದ ಸಮ್ಮಿಲನ ಪ್ರಿಯದರ್ಶಿನಿ ಸೀರೆಗಳಲ್ಲಿ. ಬ್ರೋಕೇಡ್ ಹಾಗೂ ಸಾಂಪ್ರದಾಯಕ ವಿನ್ಯಾಸಗಳಲ್ಲಿ ಕಲಾಂಜಲಿ, ಕಾಂತಾ ಹಾಗೂ ಜಾಮ್ದಾನಿ ಸೀರೆಗಳ ಬೃಹತ್ ಶ್ರೇಣಿ.

ಬ್ರೋಕೇಡ್: ವಿವಿಧ ಆಕರ್ಷಕ ವರ್ಣಗಳಲ್ಲಿ ಬಂಗಾರದ ಹಾಗೂ ಬೆಳ್ಳಿ ಜರಿಯ ವಿನ್ಯಾಸಗಳು.

ಕಾಂತಾ: ಕಲ್ಕತ್ತಾ ಹಾಗೂ ಡಾಕಾದ ಸಾಂಪ್ರದಾಯಕ

ಗಂಡಭೇರುಂಡ: ಎರಡು ತಲೆಯ ಗಂಡಭೇರುಂಡ ಪಕ್ಷಿಯ ವಿನ್ಯಾಸದ ಸೀರೆಗಳು

ಜಾಮ್ದಾನಿ: ನೇಯ್ಗೆಯ ಸಮಯದಲ್ಲಿಯೇ ಅಂಚುಗಳಲ್ಲಿ ಅಳವಡಿಸಿದ ಆಕರ್ಷಕ ಕಸೂತಿಯ ವಿನ್ಯಾಸ

ಕಲಾಂಜಲಿ: ಕಂಠಹಾರದ ಮಾದರಿಯಲ್ಲಿ ನೇಯ್ದ ವಿಶಿಷ್ಠ ಸೀರೆ.

ಪ್ರಿಯದರ್ಶಿನಿ
ಕೈಮಗ್ಗದ ತವರು

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಪ್ರಿಯದರ್ಶಿನಿ ಕಮರ್ಷಿಯಲ್ ಕಾಂಪ್ಲೆಕ್ಸ್, ನಂ. 1, ಟ್ಯಾಂಕ್ ರೋಡ್, ಹಲಸೂರು,
ಬೆಂಗಳೂರು - 560 042 ಫೋನ್: 080-25575421/2 e-mail: khdc@vsnl.net website: www.khdcl.com

ಕರ್ನಾಟಕದಾದ್ಯಂತ ಮಾರಾಟ ಮಳಿಗೆಗಳು ಮತ್ತು:
• ನವದೆಹಲಿ • ಮುಂಬೈ • ಕೊಲ್ಕತ್ತ • ಚೆನ್ನೈ • ಹೈದರಾಬಾದ್ • ಜೈಪುರ್ • ಕಾನ್‌ಪುರ್ ಗಳಲ್ಲಿ ಸಹ